SAPTHAGIRI (KANNADA)
ILLUSTRATED MONTHLY
Volume: 01, Issue: 02
September-2021, Price Rs.5/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಸೆಪ್ಟೆಂಬರ್ 2021 ಬೆಲೆ ರೂ. 5/-



ನಮಸ್ತೇ ದೇವದೇವೇಶ
ವರಾಹವದನಾಽಚ್ಯುತ ।
ಕ್ಷೀರ ಸಾಗರ ಸಂಕಾಶ
ವಜ್ರಶೃಂಗ ಮಹಾಭುಜ ॥



# ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

## 2021 ಅಕ್ಟೋಬರ್ 07 ರಿಂದ 15 ರ ವರೆಗೆ

**07-10-2021**
ಗುರುವಾರ
ಹಗಲು : ಧ್ವಜಾರೋಹಣ
ರಾತ್ರಿ : ದೊಡ್ಡಶೇಷವಾಹನ

**08-10-2021**
ಶುಕ್ರವಾರ
ಹಗಲು : ಚಿಕ್ಕಶೇಷವಾಹನ
ರಾತ್ರಿ : ಹಂಸವಾಹನ

**09-10-2021**
ಶನಿವಾರ
ಹಗಲು : ಸಿಂಹವಾಹನ
ರಾತ್ರಿ : ಮುತ್ತಿನಚಪ್ಪರವಾಹನ

**10-10-2021**
ಭಾನುವಾರ
ಹಗಲು : ಕಲ್ಪವೃಕ್ಷವಾಹನ
ರಾತ್ರಿ : ಸರ್ವಭೂಪಾಲವಾಹನ

**11-10-2021**
ಸೋಮವಾರ
ಹಗಲು : ಪಲ್ಲಕ್ಕಿಯಲ್ಲಿ ಮೋಹಿನಿಅವತಾರೋತ್ಸವ
ರಾತ್ರಿ : ಗರುಡವಾಹನ

**12-10-2021**
ಮಂಗಳವಾರ
ಹಗಲು : ಹನುಮದ್ವಾಹನ
ರಾತ್ರಿ : ಗಜವಾಹನ

**13-10-2021**
ಬುಧವಾರ
ಹಗಲು : ಸೂರ್ಯಪ್ರಭವಾಹನ
ರಾತ್ರಿ : ಚಂದ್ರಪ್ರಭವಾಹನ

**14-10-2021**
ಗುರುವಾರ
ಹಗಲು : ರಥೋತ್ಸವ
ರಾತ್ರಿ : ಅಶ್ವವಾಹನ

**15-10-2021**
ಶುಕ್ರವಾರ
ಹಗಲು : ಚಕ್ರಸ್ನಾನ
ರಾತ್ರಿ : ಧ್ವಜಾವರೋಹಣ

# ಭಗವದ್ಗೀತೆ



ಗಾಡೀವಂ ಸ್ರಂಸತೇ ಹಸ್ತಾತ್ ತ್ವಕ್ಚೈವ ಪರಿದಹ್ಯತೇ ।
ನ ಚ ಶಕ್ನೋಮ್ಯ ವಸ್ಥಾತುಂ ಭ್ರಮತೀವ ಚ ಮೇ ಮನಃ ॥
(ಶ್ರೀಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 29)

**ಕೈಯಿಂದ ಗಾಂಡೀವ ಧನು ಕುಸಿಯುತ್ತಿದೆ. ಚರ್ಮವೂ ಸುಡುತ್ತಿದೆ. ನನಗೆ ನಿಲ್ಲುವುದಕ್ಕೂ ಆಗುವುದಿಲ್ಲ. ನನ್ನ ಮನಸ್ಸು ತಳಮಳ ಗೊಂಡಿದೆ.**


**ಓಂ ಗಜಾನನಂ ಭೂತ ಗಣಾದಿಸೇವಿತಂ ಕಪಿತ್ಥ ಜಂಬೂ ಫಲಸಾರ ಭಕ್ಷಿತಂ**
**ಉಮಾಸುತಂ ಶೋಕ ವಿನಾಶ ಕಾರಣಂ ನಮಾಮಿ ವಿಘ್ನೇಶ್ವರ ಪಾದ ಪಂಕಜಂ**



(ಆರನೆಯ ದಶಕ)

# ದಯಾ ಶತಕಮ್

- ಎನ್. ನರಸಿಂಹಾಚಾರ್ಯ



ಮೃದುಹೃದಯೇ ದಯೇ ಮೃದಿತ
ಕಾಮಹಿತೇ ಮಹಿತೇ ಧೃತವಿಬುದೇ
ಬುಧೇಷು ವಿತತಾತ್ಮಧುರೇ ಪುಧುರೇ
ವೃಷಗಿರಿಸಾರ್ವಭೌಮದಯಿತೇ
ಮಯಿ ತೇ ಮಹತೀಂ ಭವುಕ
ನಿಧೇ ನಿಧೇಹಿ ಭವಮೂಲ
ಹರಾಂ ಲಹರೀಮ್॥೬೦॥

ಹಿಂದಿನ ಪದ್ಯದಲ್ಲಿ ಯಾವ ಭೇದವೂ ಇಲ್ಲದಂತೆ ಸಮಸ್ತ ಚೇತನರೂ ಉತ್ತಮ ಗತಿಯನ್ನು ಪಡೆಯಲು ಉಪಾಯವಾದ ಪ್ರಪತ್ತಿ ಎಂಬ ಶಾಸ್ತ್ರಾರ್ಥವನ್ನು ಪ್ರಪಂಚಕ್ಕೆ ಪ್ರಕಾಶಪಡಿಸಿದ ಪರಮಕಾರುಣಿಕರಾದ ಆಚಾರ್ಯರುಗಳ ಹಿರಿಮೆಯು ತಿಳಿಸಲ್ಪಟ್ಟಿತು. ಅಂತಹ ಆಚಾರ್ಯರು ತೋರಿಸಿದ ದಾರಿಯನ್ನು ಅನುಸರಿಸಿ ಭಗವಂತನಲ್ಲಿ ಮಾಡಬೇಕಾದ ಆ ಪ್ರಪತ್ತಿಯನ್ನು ಆಚರಿಸಲು ಭಗವಂತನ ದಯೆಯನ್ನು ಚೇತನ ಸಮಾಧಿಯಲ್ಲಿ ನಿಲ್ಲಿಸಿ ದಯೆಯನ್ನು ಪ್ರಾರ್ಥಿಸುತ್ತಾರೆ. ಭಗವಂತನಿಗಿರುವ ಹಿರಿಮೆಯೆಲ್ಲವೂ ಈ ದಯೆಯಿರುವುದರಿಂದಲೇ ಆದುದರಿಂದ ಇವಳೇ ಮುಖ್ಯವಾಗಿ ಉಪಾಸಿಸಲ್ಪಡಬೇಕಾದವಳೆಂದು ಹಿಂದೆಯೇ ಅನೇಕ ರೀತಿಯಿಂದ ನಿರೂಪಿಸಿರುತ್ತಾರೆ. ಅದರಂತೆಯೇ ಇಲ್ಲಿಯೂ ಪ್ರಾರ್ಥಿಸಿರುತ್ತಾರೆ.

"ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ" ಎಂಬಂತೆ ಯಾರಿಗಾದರೂ ಯಾವ ವಿಧವಾದ ಕಷ್ಟವಾದರೂ ಎಷ್ಟು ಮಟ್ಟಿಗೇ ಉಂಟಾದರೂ ಕೂಡ ಅದನ್ನು ಸಹಿಸಲಾರದಂತಹ ಕೋಮಲಹೃದಯವುಳ್ಳವಳು ದಯೆ. ಆಶೆಗಳನ್ನು ತೊರೆದು ವಿರಕ್ತರಾಗಿ ಭಗವತ್ಪ್ರಿತ್ಯರ್ಥವಾಗಿಯೇ ಸಮಸ್ತ ಕಾರ್ಯಗಳನ್ನು ಮಾಡುವವರ ವಿಷಯದಲ್ಲಿ ಅತ್ಯಂತ ಹಿತವಾಗಿರುವವಳು. ಅಂದರೆ, ತಾತ್ಕಾಲಿಕವಾಗಿ ಅಪ್ರಿಯವಾಗಿ ತೋರಿದರೂ ಕೊನೆಗೆ ಪರಮಹಿತವಾಗಿಯೇ ಇರುವ ಕಾರ್ಯವೆಂದೂ ತೋರುವುದು. ಪರಮೈಕಾಂತಿಗಳ ವಿಷಯದಲ್ಲಿ ಅತ್ಯಂತ ಅಭಿಮಾನವುಳ್ಳವಳಾದುದರಿಂದಲೇ ಶಾಸ್ತ್ರಗಳಲ್ಲಿ ಅವಳನ್ನು ಆಶ್ರಯಿಸಿ ಸುಲಭವಾಗಿ ಮೋಕ್ಷವನ್ನು ಹೊಂದಬಹುದಾದ ಮಾರ್ಗವೆಂದು ಹೊಗಳಲ್ಪಟ್ಟವಳು. ಪ್ರಪತ್ತಿಯನ್ನು ಹೊಗಳಿದರೆ ದಯೆಯನ್ನು ಹೊಗಳಿದಂತೆಯೇ, ಪ್ರಪತ್ತಿ ಎಂಬುದು ಕೇವಲ ದಯೆಯನ್ನೇ ಆಶ್ರಯಿಸಿದುವುದಲ್ಲವೇ! ಮೇಲಾಗಿ ದಯೆಯು ಜ್ಞಾನಿಗಳ ತಾರಕಳು - ಅಂದರೆ, "ಉಣ್ಣು, ಶೋರು-' ಎಂಬಂತೆ ತಾರಕಳೂ, ಪೋಷಕಳೂ, ಭೋಗ್ಯಳೂ ಆಗಿರುವಳು.ಇಲ್ಲಿ "ಮೃದಿತಕಾಮ" ಎಂಬ ಪದದಿಂದ ಪರಮೈಕಾಂತಿಗಳನ್ನೂ " ಧೃತವಿಬುಧೇ" ಎಂಬ ಪದದಿಂದ ಆಳ್ವಾರುಗಳನ್ನೂ, "ಬುಧೇಷು ವಿತತಾತ್ಮಧರೇ" ಎಂಬುದರಿಂದ ಆಚಾರ್ಯರುಗಳನ್ನು ಹೇಳಬೇಕೆಂದಿರುವುದಾಗಿ ಗಮನಿಸಬಹುದು. ಆದ್ದರಿಂದ ಆಳ್ವಾರುಗಂಳಂತಹ ಜ್ಞಾನಿಗಳನ್ನು ಉದ್ಧರಿಸುವವಳು. ನಾಥಮುನಿ, ಆಳವಂದಾರ್, ಭಾಷ್ಯಕಾರರೇ ಮೊದಲಾದ ಮಹನೀಯರಾದ ಜ್ಞಾನಿಗಳ ವಿಷಯದಲ್ಲಿ ಸಂರಕ್ಷಣರೂಪವಾದ ತನ್ನ ಕಾರ್ಯವನ್ನು ವಿಸ್ತರಿಸು ವಂಥವಳು. ಈ ಲೋಕದಲ್ಲಿಯೂ ಹಿತವನ್ನುಂಟು ಮಾಡುವ ಕೆಲವರು ಅನೇಕ ವೇಳೆ ಹಿತವನ್ನುಂಟು ಮಾಡಿದರೂ ಆಶ್ರಯಿಸುವ ಸಮಯದಲ್ಲಿ ಕಿಡಿಕಿಡಿಯಾಗುವುದುಂಟು. ದಯಾದೇವಿಯು ಹಾಗಿಲ್ಲದೆ ಕ್ಷೀರಸೇವನದಂತೆ ಯಾವಾಗಲೂ ಪರಮ ಮಧುರವಾಗಿರುವವಳು. ಇಷ್ಟೊಂದು ಗುಣಗಳು ಇವಳಿಗಿರಲು ಕಾರಣವೇನೆಂದರೆ ಸಮಸ್ತ ಪ್ರಪಂಚ ಸಾರ್ವಭೌಮನಾದ ಶ್ರೀನಿವಾಸನು ಇವಳಿಗೆ ವಿಧೇಯನಾಗಿರುವುದೇ ಆಗಿರುತ್ತದೆ. ಅವನಾದರೂ ಹೀಗೆ ವಿಧೇಯನಾಗಿರಲು ಕಾರಣವೇನೆಂದರೆ - ಇವಳು ಸರ್ವಮಂಗಳನಿಧಿಯಾಗಿರುವುದರಿಂದ ಇವಳಿಂದ ಮಂಗಳವನ್ನು ಸಂವಾದಿಸಿಯೇ ಲೋಕಕ್ಕೆ ಅನುಗ್ರಹಿಸಬೇಕಾಗಿರುವುದು.ಇಂತಹ ಮಹಿಮೆಯನ್ನುಳ್ಳ ದಯಾದೇವಿಯನ್ನು ಕುರಿತು " ಓ ದಯಾದೇವಿ ಈ ಸಂಸಾರವೆಂಬ ಮಹಾವೃಕ್ಷವನ್ನು ಬುಡ ಸಹಿತವಾಗಿ ಕಿತ್ತು ಹಾಕಿ ಮತ್ತೆ ಬೆಳೆಯದಂತೆ ಮಾಡುವ ನಿನ್ನ ಅಪರಿಮಿತವಾದ ಪ್ರವಾಹವನ್ನು ಅತ್ಯಂತ ಪಾಪಿಯಾದ ನನ್ನಲ್ಲಿ ಪ್ರವಹಿಸುವಂತೆ ಮಾಡು - ಎಂದು ಪ್ರಾರ್ಥಿಸಿರುತ್ತಾರೆ. ತನ್ನಲ್ಲಿರುವ (ಜೀವನಲ್ಲಿ) ಸಂಸಾರಕ್ಕೆ ಮೂಲವಾದ ಪಾಪಗಳು ಅನಾದಿ ಕಾಲದಿಂದಲೂ ಬೆಳೆದು ಬಂದಿರುವುದರಿಂದ ಅಂತಹ ದೊಡ್ಡ ಮರವನ್ನು ಕಿತ್ತುಹಾಕಲು ಸಾಧಾರಣವಾದ ಚಿಕ್ಕ ಪ್ರವಾಹವು ಸಾಲದು. ಅತ್ಯಂತ ದೊಡ್ಡದೂ ಅಪೂರ್ವವೂ ಆದ ಪ್ರವಾಹದಿಂದಲೇ ಅದು ಸಾಧ್ಯ. ಹಾಗೆ ಅಂತಹ ಪಾಪವೆಂಬ ವೃಕ್ಷವು ಬುಡಸಹಿತವಾಗಿ ನಾಶವಾದರೆ ತನಗೆ ಕ್ರಮವಾಗಿ ಪ್ರಾಪ್ತವಾದ ಮೋಕ್ಷವೆಂಬ ಐಶ್ವರ್ಯವು ದೊರಕು ವುದೆಂದು ಆಚಾರ್ಯರ ಅಭಿಪ್ರಾಯ.

ಹೀಗೆ ದಯಾದೇವಿಯ ವಿಷಯದಲ್ಲಿ ಪ್ರಾರ್ಥಿಸುವುದರೊಡನೆ ಪದ್ಧತಿಯಂತೆ ಮುಂದಿನ ದಶಕದಲ್ಲಿ ವರ್ಣಿಸಬಹುದಾದ ದಯಾ ಪ್ರವಾಹದ ಮಹಿಮೆಯನ್ನೂ, ತನ್ಮೂಲಕ ಶ್ರೀನಿವಾಸನು, ದಯೆಯ ಪ್ರೇರಣೆಯಂತೆ ನಡೆಯುವನೆಂಬ ವಿಷಯವನ್ನೂ ಈ ಪದ್ಯದಿಂದ ಸೂಕ್ಷ್ಮನಾಗಿ ಸೂಚಿಸಿರುತ್ತಾರೆ.

ಆರನೆಯದಶಕವು ಮುಗಿದುದು




ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

ತಿರುಮಲೆ ತಿರುಪತಿ ದೇವಸ್ಥಾನಗಳು


# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ


ಶ್ರೀ ಪ್ಲವನಾಮ ಸಂವತ್ಸರ
ಶ್ರಾವಣ - ಭಾದ್ರಪದ ಮಾಸ ಸಂಚಿಕೆ

ಸಂಪುಟ - 01 ಸೆಪ್ಟೆಂಬರ್ 2021 ಸಂಚಿಕೆ -02


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಗಣೇಶ ಚತುರ್ಥಿ | -ಡಾ॥ ಗುರುರಾಜ ಪೋಶೆಟ್ಟಿ ಹಳ್ಳಿ | 7 |
| ವಾಮನ ದ್ವಾದಶಿ | -ಶ್ರೀಮತಿ. ಕೆ.ವಿ. ಪದ್ಮಾವತಿ | 9 |
| ಮೋಹನದಾಸರ ಕೃತಿಗಳಲ್ಲಿ ದೇಸಿಯ ಸೊಗಡು | -ಶ್ರೀಮತಿ ರಾಜಶ್ರೀ ಕಲ್ಲೂರಕರ್ | 12 |
| ಶ್ರೀ ಪ್ರಸನ್ನವೆಂಕಟದಾಸ ಸಂಕ್ಷಿಪ್ತ ಜೀವನ ಚರಿತ್ರೆ | -ಡಾ॥ ಸುಭಾಸ್ ಕಾಖಂಡಕಿ | 14 |
| ಪುಸ್ತಕಾವಲೋಕನ | - | 16 |
| ಸಂಸ್ಕೃತ ಕಲಿಯೋಣ !! | - ಮಹಾ ಮಹೋಪಾಧ್ಯಾಯ ಎಸ್.ಲಕ್ಷ್ಮಣಯ್ಯ | 17 |
| ರಂಗವೊಲಿದ ಜಗನ್ನಾಥದಾಸರು | - ಶ್ರೀಧರ ರಾಯಸಂ | 18 |
| ಆಳ್ವಾರರ ಭಗವದನು ಭವ | - ಡಾ॥ ಸಿ.ಎಸ್.ಊರ್ಮಿಳಾ | 21 |
| ಮಾವಿನಕೆರೆ ರಂಗನಾಥ ದೇವಾಲಯ | - ಕೆಂಗೇರಿ ಚಕ್ರಪಾಣಿ | 22 |
| ಶ್ರೀ ವೆಂಕಟೇಶ್ವರ ಸ್ವಾಮಿ ಆಲಯ | - ದಿ॥ ಬಿ.ಎನ್.ಶ್ರೀನಿವಾಸನ್ | 25 |
| ಗೌರಿ ಹಬ್ಬ | - ಗಿರಿಜಾ.ಎಸ್. ದೇಶಪಾಂಡೆ | 31 |
| ವರಾಹ ಜಯಂತಿ | - ಪ್ರಣವ | 33 |
| ಅನಂತ ಚತುರ್ಥಿ | - ಶ್ರೀಮತಿ. ಪಿ.ಎಸ್. ಅರ್ಚನ | 36 |
| ಆಯುರ್ವೇದ ಮತ್ತು ನಾವು | - ಡಾ॥ ಪ್ರದೀಪ್‌ಕುಮಾರ್ ಹೆಬ್ರಿ | 34 |
| ದೇವಶಿಲ್ಪಿ ವಿಶ್ವಕರ್ಮನ ವಿಶ್ವರೂಪ | - ಶ್ರೀಮತಿ ಸಮಾಚಂದ್ರಶೇಖರ್ | 35 |
| ವೇದದಲ್ಲಿ ಗಣಿತ | - ರಮೇಶ್‌ಕುಮಾರ್ ಬನ್ನೂರು | 41 |
| ಶ್ರೀಮದ್ಭಗವದ್ಗೀತೆ | - ಶ್ರೀಮತಿ ಬಿ. ಪದ್ಮಜ | 43 |
| ಸನಾತನ ಧರ್ಮದಲ್ಲಿ ಜ್ಯೋತಿಷ್ಯ ಶಾಸ್ತ್ರ | - ಡಾ॥ ಆರ್. ಶ್ರೀನಿಧಿ | 45 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ. ಆರ್. ನರಸಿಂಹನ್ | 47 |
| ತಿರುಮಲೆ - ಕಾಲಮಾನಾಚರಣೆಗಳು | - ಶ್ರೀಮತಿ | 49 |
| ನೀತಿ ಕಥೆ - ಅಭಿಮಾನ | - ಡಾ॥ ಶ್ರದ್ಧಾನಂದ ಸ್ವಾಮಿ | 51 |
| ಚಿತ್ರ ಕಥೆ - ವಾಮನಾವತಾರ | -ಡಿ. ಶ್ರೀನಿವಾಸ ದೀಕ್ಷಿತರು | 52 |
| ಕ್ವಿಜ್ | | 54- |


ಮುಖಚಿತ್ರ - ಶ್ರೀಭೂವರಾಹ ಸ್ವಾಮಿ, ತಿರುಮಲೆ

ಹಿಂಬದಿಚಿತ್ರ - ಶ್ರೀಪದ್ಮಾವತಿ ಅಮ್ಮನವರು (ಉತ್ಸವ ಮೂರ್ತಿ) ತಿರುಚಾನೂರು


### ಗೌರವ ಸಂಪಾದಕರು

ಡಾ॥ ಕೆ. ಎಸ್. ಜವಹರ್ ರೆಡ್ಡಿ, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

### ಪ್ರಧಾನ-ಸಂಪಾದಕರು

ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

### ಸಂಪಾದಕರು

ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

### ಮುದ್ರಣ

ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

### ಡಿ.ಟಿ.ಪಿ.

ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

### ಛಾಯಗ್ರಹಣ:

ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

ಇತರ ವಿವರಗಳಿಗೆ

ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |



ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

# ವೇದೋಽಖಿಲೋ ಧರ್ಮಮೂಲಮ್



## ಸಂಪಾದಕೀಯ

ಎಲ್ಲಾ ಧರ್ಮಗಳ ಮೂಲ ವೇದ - ಮನು. ಗೌತಮ. ಪರಾಶರರಂತಹಾ ಸ್ಮೃತಿಕರ್ತರು ಕೂಡಾ ಈ ಮಾತನ್ನೇ ಹೇಳಿದ್ದಾರೆ. ನಮ್ಮ ಸನಾತನ ಧರ್ಮಕ್ಕೆಲ್ಲಾ ಮೂಲ ವೇದವೇ ಆಗಿದೆ! ಅದನ್ನು ಆಧಾರವಾಗಿಟ್ಟುಕೊಂಡು ಧರ್ಮ ಶಾಸ್ತ್ರಗಳು. (ಸ್ಮೃತಿಗಳು) ಪುರಾಣಗಳು, ಇತಿಹಾಸಗಳು ಉದ್ಭವಗೊಂಡಿವೆ. ಅವೇ ಅಲ್ಲದೇ ಕಾವ್ಯ ನಾಟಕ, ಸಂಗೀತ , ನಾಟ್ಯ, ಶಿಲ್ಪಾದಿ ಕಲೆಗಳು, ವೈದ್ಯಾದಿ ವಿದ್ಯೆಗಳಿಗೂ ಕೂಡಾ ವೇದಗಳೇ ಮೂಲ ಆಧಾರವಾಗಿದೆ.

ವೇದವಿದ್ಯೆಯನ್ನು ಅಕ್ಷರಸ್ಯಾದಿ ಗ್ರಂಥರೂಪವಾಗಿ ಅಧ್ಯಯನ, ಅಧ್ಯಾಪನಾದಿ ಪದ್ಧತಿಗಳಲ್ಲಿ ಪರಿರಕ್ಷಿಸುವ ಜೀವನ ವಿಧಾನವನ್ನು ಅವಲಂಬಿಸುತ್ತಾ ಒಂದು ವರ್ಗವು ಅಂಕಿತಭಾವನೆಯಿಂದ ತಲೆತಲೆಮಾರುಗಳಿಂದ ಕೆಲಸ ಮಾಡುತ್ತಿದೆ. ಆ ಜವಾಬ್ದಾರಿಯನ್ನು ತೆಗೆದುಕೊಂಡು ವೇದವು ಬೋಧಿಸಿದ ಧರ್ಮವನ್ನು ಜನಸಾಮ್ಯಾರಿಗೂ ಅರ್ಥವಾಗುವಂತೆ ಮಹರ್ಷಿಗಳು ಸ್ಮೃತಿ. ಪುರಾಣಾದುಲನು ಅತ್ಯಂತ ಸ್ಪಷ್ಟವಾಗಿ ತಿದ್ಧಿತೀಡಿದ್ದಾರೆ. ಇವುಗಳೊಂದಿಗೆ ಆಗಮಶಾಸ್ತ್ರಗಳು. ಮಂತ್ರಶಾಸ್ತ್ರಗಳು ಕೂಡಾ ವೇದಗಳ ಮೂಲ ದಿಂದಲೇ ಅಭಿವೃದ್ಧಿ ಸಾಧಿಸಿವೆ.

ವೇದ ವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ. ವೇದಃ ಪ್ರಾಚೇತಸಾದಾಸೀತ್ ಸಾಕ್ಷಾತ್ ರಾಮಾಯಣಾತ್ಮನಾ ವೇದವೇದ್ಯನಾದ ಪರಮಪುರುಷನೇ ದಶರಥನ ಪುತ್ರನಾಗಿ ಜನ್ಮಿಸಿದ ಪ್ರಾಚೇತಸ ಎಂಬ ಹೆಸರನ್ನು ಉಳ್ಳ ಮಹರ್ಷಿ (ವಾಲ್ಮೀಕಿ) ಯ ಮೂಲಕ ವೇದವು ನೇರವಾಗಿ ರಾಮಾಯಣವಾಯಿತು ಎಂಬ ಪ್ರಸಿದ್ಧ ಶ್ಲೋಕವು ನಮಗೆಲ್ಲಾ ಚಿರಪರಿಚಿತವಾದುದೇ ಆಗಿದೆ.

ರಾಮಾಯಣಂ ವೇದ ಸಮಂ ರಾಮಾಯಣ ವೇದಕ್ಕೆ ಸಮಾನವಾದುದು - ಎಂಬುದು ರಾಮಾಯಣದಲ್ಲಿ ಬರುವ ವಾಕ್ಯವೇ ಆಗಿದೆ.ಭಾಗವತವು ನಿಗಮಕಲ್ಪತರೋರ್ಗಲಿತಂ ಫಲಂ ವೇದವೆಂಬ ಕಲ್ಪತರುವಿನಿಂದ ಉದುರಿದ ಫಲವೆಂದು ವಿಶದೀಕರಿಸಿದ್ದಾರೆ.

ಇತಿಹಾಸ ಪುರಾಣಾಭ್ಯಾಂ ವೇದಂ ಸಮುಬೃಂಹಯೇತ್ ಎಂದು ಹೇಳಲ್ಪಡುತ್ತಿವೆ. ಸಂಗೀತಶಾಸ್ತ್ರ ಕೋವಿದರಾದ ತ್ಯಾಗ ರಾಜಾದಿಗಳು ಕೂಡಾ ಸಂಗೀತವನ್ನು ಸಾಮವೇದದಿಂದ ಜನಿತವಾದುದು ಎಂದು ಸ್ಪಷ್ಟಪಡಿಸಿದ್ದಾರೆ.

ನಮ್ಮ ವಿದ್ಯೆಗಳು, ಶಾಸ್ತ್ರಗಳು ಕೇವಲ ಪುಸ್ತಕದ ಆಧಾರವಾಗಿಲ್ಲ. ದೇಶ ಸ್ವಭಾವ, ಸಂಪ್ರದಾಯ, ವಿಜ್ಞಾನ, ಮುಂತಾದವನ್ನು ಗಮನಿಸಬೇಕು. ಆಗಲೇ ಆ ವಿದ್ಯೆ ವಿವರವಾಗಿ ಅರ್ಥವಾಗುತ್ತದೆ.

ಈ ದೇಶವು ಅನಾದಿಕಾಲದಿಂದಲೂ ವೇದಭೂಮಿ ಅನಿಸಿಕೊಂಡಿದೆ. ವೇದಮಂತ್ರದಿಂದ ಹಿಡಿದು ಜಾನಪದಗಳವರೆಗೂ ವಿಸ್ತರಿಸಿರುವ ಧರ್ಮ ನಮ್ಮದು! ಇಂತಹಾ ಅನಂತಪರಿಧಿಯುಳ್ಳದಾದ್ದರಿಂದ ನಮ್ಮ ಸನಾತನ ಧರ್ಮ ವೃಕ್ಷ ವಿಶಾಲವಾಗಿ ವಿಸ್ತರಿಸಿದೆ.

ಈ ವೃಕ್ಷದಲ್ಲಿರುವ ಕೊಂಬೆಗಳಿಗೆ, ರೆಂಬೆಗಳಿಗೆ, ಹೂವುಗಳಿಗೆ, ಹಣ್ಣುಗಳಿಗೆ ಎಲ್ಲಕ್ಕೂ ವೇದ ಧರ್ಮವೇ ಮೂಲವಾಗಿದೆ. ಇದರೊಂದಿಗೆ ಮೇಳೈಸಿರುವ ಮರವನ್ನು ಕಬಳಿಸಲು ಹೊಂಚುಹಾಕುತ್ತಿರುವ ಗೆದ್ದಲು ಹುಳುಗಳನ್ನು ಬುದ್ಧಿವಂತಿಕೆಯಿಂದ ಗುರುತಿಸಿ ದೂರ ಮಾಡುವುದರಲ್ಲೇ ನಮ್ಮ ವಿಚಕ್ಷಣಾ ಜ್ಞಾನವನ್ನು ತೋರ್ಪಡಿಸಬೇಕು.

**ವೇದ ಶಾಸ್ತ್ರಗಳನ್ನು ಪರಿರಕ್ಷಿಸೋಣ, ಮಾನವ ಜಾತಿಯನ್ನು ಕಾಪಾಡೋಣ ಬನ್ನಿ!!**

# ಗಣೇಶ ಚತುರ್ಥಿ



– ಡಾ|| ಗುರುರಾಜ ಪೋಶೆಟ್ಟಿಹಳ್ಳಿ
97393 69621

ಶಿವ, ವಿಷ್ಣು, ದುರ್ಗೆ ಮುಂತಾದ ದೇವತೆಗಳಿಗಿಂತ ಹೆಚ್ಚು ಜನಪ್ರಿಯವಾಗಿ ಪೂಜೆಯಲ್ಲಿ ಅಗ್ರಸ್ಥಾನ ಪಡೆದ ದೇವತೆ ಗಣಪತಿ. ಎಲ್ಲ ಶುಭಕಾರ್ಯಗಳಲ್ಲೂ ಗಣಪತಿಗೇ ಮೊದಲ ಪೂಜೆಸಲ್ಲಿಸುತ್ತಾರೆ. ಅಷ್ಟೇ ಅಲ್ಲ. ಮಿಕ್ಕ ದೇವತಾ ಕಾರ್ಯಗಳನ್ನು ಮಾಡುವಾಗಲೂ ಗಣಪತಿಗೇ ಪ್ರಥಮ ಪೂಜೆ. ಭಾರತದ ಎಲ್ಲೆಡೆಗಳಲ್ಲೂ ಗಣಪತಿಯ ಮೂರ್ತಿಯನ್ನು ನೋಡಬಹುದು. ಅಲ್ಲದೆ, ಸಾಗರೋತ್ತರ ದೇಶಗಳಲ್ಲೂ ಗಣಪತಿ ವಿಗ್ರಹಗಳು ಜನಪ್ರಿಯ, ಹಿಂದೂ ಧರ್ಮವನ್ನು ನಂಬುವ ಎಲ್ಲ ಜಾತಿಪಂಥಗಳೂ ಸಮಾನವಾಗಿ ಪೂಜಿಸುವ ದೇವತೆ ಗಣಪತಿ. ಗಣೇಶ ಚತುರ್ಥಿಯ ಆಚರಣೆಯ ಹಿನ್ನೆಲೆಯಲ್ಲಿ ಗಣಪತಿಯನ್ನು ಅನುಸಂಧಾನ ಮಾಡುವ ಬರಹ ಇಲ್ಲಿದೆ.

## ಗಣೇಶತತ್ತ್ವ - ಸನಾತನ ಸಂಸ್ಕೃತಿಯ ಜ್ಞಾನಸಂಪತ್ತು

ಭಾರತೀಯ ಸಂಸ್ಕೃತಿಯಲ್ಲಿ ಗಣೇಶನಿಗೆ ವಿಶಿಷ್ಟ ಸ್ಥಾನವಿದೆ. ಅವನು ವಿಶ್ವವ್ಯಾಪ್ತಿಯನ್ನು ಪಡೆದಿರುವ ದೇವರು. ಜಾತಿಯ ಮತ-ಭಾಷೆಗಳ ಎಲ್ಲೆಯೂ ಅವನಿಲ್ಲ. ಗಣೇಶನ ಹುಟ್ಟು,ಆಕಾರ, ಪೂಜೆ ಪ್ರತಿಯೊಂದು ಸಂಕೇತಮಯವೇ ಆಗಿದೆ. ಹೀಗಾಗಿ ಈ ವಿವರಗಳ ಹಿಂದಿರುವ ತಾತ್ವಿಕತೆ ನಮಗೆ ಅರ್ಥವಾಗದಿದ್ದರೆ ಗಣೇಶನ ಕಲ್ಪನೆ ನಮಗೆ ಹಾಸ್ಯಾಸ್ಪದವಾಗಿಯೇ ಕಾಣುವುದೆನ್ನಿ ವಿಗ್ರಹಾರಾಧನೆ ಎಲ್ಲ ಕಲಾಪಗಳಿಗೂ ಮೂಲವಾಗಿ ಯಾವುದಾದರೊಂದು ಸಂಕೇತ, ರೂಪಕ,ತತ್ತ್ವ, ಅಡಕವಾಗಿರುತ್ತದೆ.

ಆದಿದಂಪತಿಯಾದ ಶಿವ ಪಾರ್ವತಿಯರ ಮಗನೇ ಗಣೇಶ. ಅವನು ಹುಟ್ಟು ಕಾಮತೀತತತ್ತ್ವಕ್ಕೆ ಸಂಕೇತ. ಗಣೇಶನ ಶರೀರ ತುಂಬ ದೊಡ್ಡದು ಆದರೆ ಅವನ ವಾಹನ ಪುಟ್ಟ ಇಲಿ, ಅಬಲರೂ ಕೂಡ ಸಬಲರೇ ಹೌದು ಎನ್ನುತ್ತದೆ ಮೂಷಿಕವಾಹನ. ಹೀಗೆ ಅವನ ಒಂದೊಂದು ರೂಪವೂ ಒಂದೊಂದು ತತ್ತ್ವವನ್ನು ಪ್ರತಿನಿಧಿಸುತ್ತದೆ.

ಗಣೇಶನಷ್ಟು ಹಾಸ್ಯಪ್ರಿಯ ದೇವತೆಯೂ ಮತ್ತೊಬ್ಬನಿಲ್ಲ. ಅವನ ರೂಪವೇ ಹಾಸ್ಯಕ್ಕೆ ಒಳ್ಳೆಯ ವಸ್ತು ಪರಹಾಸ್ಯದಲ್ಲಿ ತೊಡಗಿದ ಚಂದ್ರನನ್ನು ಅವನನ್ನು ಶಿಕ್ಷಿಸಿದ. ಇಲ್ಲೂ ಒಂದು ಸಂದೇಶ ಉಂಟು. ಇತರರನ್ನು ಕೀಟಲೆ ಮಾಡುವುದು ಹಾಸ್ಯವಲ್ಲ ನಮ್ಮನ್ನು ನಾವೇ ಹಾಸ್ಯಕ್ಕೆ ವಸ್ತುವಾಗಿಸಿಕೊಳ್ಳುವಷ್ಟು ಪ್ರಬುದ್ಧತೆಯನ್ನೂ ನಾವು ಸಂಪಾದಿಸಿ ಕೊಳ್ಳತಕ್ಕದ್ದು ಎಂದು ಸಾರುತ್ತಿದ್ದಾನೆ ಅವನು ಹಾಸ್ಯರಸಕ್ಕೆ ಒಡೆಯ.

ವಿದ್ಯೆಗೂ ಗಣೇಶನಿಗೂ ನಂಟಿದೆ. ಬ್ರಹ್ಮಚಾರಿಯಾದ ಅವನಿಗೆ ಸಿದ್ಧಿ ಬುದ್ಧಿಗಳೆಂಬ ಪತ್ನಿಯರಿದ್ದಾರೆ ಎನ್ನುವುದುಂಟು ಯಾವುದೇ ವಿದ್ಯೆ ನಮಗೆ ದಕ್ಕುವುದೇ 'ಸಿದ್ಧಿ' ಅದನ್ನು ಪಡೆಯಲು ನಮಗೆ ಬೇಕಾದದ್ದು 'ಬುದ್ದಿ'. ಈ ದಾರಿಯಲ್ಲಿ ನಮಗೆ ಒದಗುವುದು ಬ್ರಹ್ಮಚರ್ಯ ದೇಹ - ಇಂದ್ರಿಯಗಳ ನಿಯಂತ್ರಣ ಏಕಾಗ್ರತೆಗಳ ಬ್ರಹ್ಮಚರ್ಯ.

ಗಣೇಶನ ಪೂಜೆಯೂ ಸರಳ. ಅವನು ಭಕ್ತಿಯಿಂದ ಗರಿಕೆಯನ್ನು ಅರ್ಪಿಸಿದರೂ ಒಲಿಯುತ್ತಾನೆ. ತಾಯಿಯ ಜೊತೆಯಲ್ಲಿಯೇ ಬರುವ ಅವನು ಕೌಟುಂಬಿಕ ಸಾಮರಸ್ಯಕ್ಕೂ ಸಂಕೇತವಾಗಿದ್ದಾನೆ. ಪ್ರಥಮಪೂಜೆ ಅವನಿಗೆ ಸಂದಿರುವುದು ಅರ್ಥಪೂರ್ಣವಾಗಿದೆ.

ವಿಶ್ವಂಭರ
ಗಜಮುಖನೆ ಮೆರೆವೇಕದಂತನೆ
ನಿಜಗುಣಾನ್ವಿತ ಪರಶುಧಾರನೆ
ರಜತಗರಿಗೊಡೆಯನ ಕುಮಾರನೆ
ವಿದ್ಯವಾರಿಧಿಯೆ
ಅಜನು ಹರಿರುದ್ರಾದಿಗಳು ನೆರೆ
ಭಜಿಸುತಿಹರನವರತ ನಿನ್ನನು
ತ್ರಿಜಗವಂದಿತ ಗಣಪ
ಮಾಳ್ವುದು ಮತಿಗೆ ಮಂಗಳವ

ಇದು ಕುಮಾರವ್ಯಾಸನ ಮಾತು. ಶೈವರಿಗೆ, ಶಾಕ್ತರಿಗೆ ಗಣಪತಿಯು ಶಿವಪಾರ್ವತಿಯರ ಮಗನಾಗಿ ಮೆಚ್ಚಿನ ಆರಾಧ್ಯ ದೈವನಾಗಿಬಿಟ್ಟ.ಇದೇ ರೀತಿ ವೈಷ್ಣವರಿಗೂ ಆದ್ದರಿಂದ ಗಣಪತಿ ಶಿವಪುತ್ರನೂ,ವಿಷ್ಣುಪುತ್ರನೂ ಆಗಿ ಪ್ರಸಿದ್ಧನಾದ. ಕೃಷ್ಣವತಾರ ದಲ್ಲಿ ರುಕ್ಮಿಣಿಯ ಮಗ ಚಾರುದೇಷ್ಣನಾಗಿ ಗಣಪತಿ ಹುಟ್ಟಿದ ಎನ್ನುತ್ತವೆ ಪುರಾಣಗಳು.ವೇದಗಳು,ತಂತ್ರಾಗಮಗಳು ಮೂರ ರಲ್ಲೂ ಗಣಪತಿಯ ಉಲ್ಲೇಖವಿದೆ. ಗಣಪತಿಯ ಉಪಾಸನೆ ಮಾತ್ರ ಮಾಡುವ ಜನಮನದಲ್ಲಿ ಶಾಶ್ವತವಾಗಿ ನೆಲೆಯೂ ರಿದ.ಯಾವ ಮನೆಯಲ್ಲೂ ಗಣಪತಿಯ ಭಾವಚಿತ್ರ ಇಲ್ಲದಿಲ್ಲ. ಈತನಿಗೆ ಅಗ್ರ ಪೂಜೆ. ಈತನದೇ ಅಗ್ರಸ್ತುತಿ. ಅಗ್ರ ಪೂಜೆ ಮಾಡದಿದ್ದರೆ ವಿಘ್ನಗಳನ್ನು ತಂದೊಡ್ಡುತ್ತಾನೆಂದೂ ಈತನ ಸುತ್ತ ಕಥೆಗಳು ಹುಟ್ಟಿದವು. ಇಷ್ಟೇ ಅಲ್ಲ. ಇವನ ಹುಟ್ಟಿನ ಬಗೆಗೂ ಕಥೆಗಳಿವೆ. ಹೀಗಾಗಿ ಇವನ ರೂಪ, ಆಕಾರ, ಧರಿಸಿ ಕೊಳ್ಳುವ ಆಯುಧಗಳು ಬೇರೆ ಬೇರೆ ಆರಾಧನಾ ಪದ್ಧತಿಯಲ್ಲಿ ಬೇರೆ ಬೇರೆಯಾಗಿಯೇ ಬಂದಿವೆ. ಅಂತೂ ಗಣಪತಿಯೇ ಅಚ್ಚರಿಪಡುವಷ್ಟು ಗಣಪತಿ ವಿವಿಧ ನಾಮ ರೂಪಗಳಲ್ಲಿ ಆರಾಧಿ ಸಲ್ಪಡುತ್ತಿದ್ದಾನೆ.

ಯಾರು ಏನೇ ಅಂದರೂ ವೇದಗಳೇ ನಮಗೆ ಪ್ರಮಾಣ. ಇವುಗಳಲ್ಲಿ ಗಣಪತಿ ವಿಶ್ವಂಭರನಾಗಿಯೇ ಕಾಣಿಸಿ ಕೊಳ್ಳುತ್ತಾನೆ. ವಿಶ್ವ ಅಥವಾ ವಿಶ್ವಂಭರ ಎಂಬುದು ವಿಷ್ಣುವಿನ ಒಂದು ರೂಪ. ಇದನ್ನೇ ವೈಶ್ವಾನರ ಎನ್ನುತ್ತಾರೆ. ಈ ರೂಪಕ್ಕೆ ಹತ್ತೊಂಭತ್ತು ಮುಖಗಳು. ಮಧ್ಯದ್ದು ಆನೆಯ ವದನ. ಅಜೀಜೆ ಒಂಭತ್ತು ಮನುಷ್ಯ ರೂಪದ ಮುಖಗಳು, ವಿಶ್ವರೂಪ ದರ್ಶನದ ಚಿತ್ರದಲ್ಲಿ ಇದನ್ನು ಕಾಣಲು ಸಾಧ್ಯವಿದೆ. ಭಗವಂತನ ಈ ರೂಪವನ್ನೇ ವಿಶ್ವಂಭರ ಗಣಪತಿ ಎನ್ನುವುದು.

### ಗಣಪತಿ ಮಾನವ ಆಂತರ್ಯದ ವಿಕಾಸದ ಉಜ್ವಲ ದೃಷ್ಟಾಂತ

ಗಣಪತಿಯ ದೊಡ್ಡ ತಲೆಯನ್ನು ಬುದ್ಧಿವಂತಿಕೆಗೂ, ಡೊಂಕಾದ ಸೊಂಡಿಲನ್ನು ಓಂಕಾರದ ಪ್ರತೀಕಕ್ಕೂ, ಮೊರದಂಥ ಕಿವಿಯನ್ನು ಸೂಕ್ಷ್ಮಾಗ್ರಾಹ್ಯಕ್ಕೂ (ಕಿವಿಯಿದ್ದವ ಕೋವಿದನಾಗಬಲ್ಲ, ಆಲಿಸಿದವ ಆಳಾಗಬಲ್ಲ ಎಂಬ ಹಿನ್ನೆಲೆ ಯಲ್ಲಿ), ದೊಡ್ಡ ಹೊಟ್ಟೆಯನ್ನು ಅಖಂಡ ಬ್ರಹ್ಮಾಂಡದ ಸಂಕೇತ ವಾಗಿಯೂ (ಧಾನ್ಯಗಳನ್ನು ತುಂಬುವ ಕಣಜ ಎಂತಲೂ,), ದೊಡ್ಡದಾದ ಹೊಟ್ಟೆಗೆ ಸುತ್ತಿಕೊಂಡಿರುವ ಸರ್ಪವನ್ನು ಕುಂಡ ಲೀನಿ ಶಕ್ತಿಯ ಪ್ರತೀಕವಾಗಿಯೂ,ಕರದಲ್ಲಿರುವ ಪಾಶಾಂಕುಶ ಗಳು ನಮ್ಮಲ್ಲಿರುವ ರಾಗದ್ವೇಷಗಳನ್ನು ನಿಯಂತ್ರಿಸುವ ಸಾಧನ ವಾಗಿಯೂ, ಏಕದಂತವೂ ಏಕಾಗ್ರತೆಯ ಪ್ರತಿನಿಧಿ ಯಾಗಿಯೂ,ಮೋದವನ್ನು ನೀಡುವುದರಿಂದ ಮೋದ ದಾಯಕನಾಗಿಯೂ, ಅರಿಷಡ್ವರ್ಗಗಳನ್ನು ಮೆಟ್ಟಿನಿಂತ ಗಣ ಪತಿ ಮಾನವ ಆಂತರ್ಯದ ವಿಕಾಸದ ಉಜ್ವಲ ದೃಷ್ಟಾಂತ ವಾಗಿ ಕಾಣುತ್ತಾನೆ.

ಇಲ್ಲಿ ಅವಲೋಕಿಸಬೇಕಾದ ಮುಖ್ಯ ವಿಚಾರವೆಂದರೆ, ಗಣಪತಿಯ ಕಣ್ಣು, ಕಣ್ಣು ಇಂದ್ರಿಯಗಳಲ್ಲಿ ಪ್ರಧಾನವಾದುದು. ಗಣಪತಿಯ ಕಣ್ಣು ಚಿಕ್ಕದು. ಇದು ಸೂಕ್ಷ್ಮ ದೃಷ್ಟಿಯ ಸೂಚಕ. ಜೀವನದಲ್ಲಿ ಎಲ್ಲವನ್ನೂ ಸೂಕ್ಷ್ಮದೃಷ್ಟಿಯಲ್ಲಿ ನೋಡಬೇಕು, ಸೂಕ್ಷ್ಮತೆ ನಮ್ಮಲ್ಲಿರಬೇಕು ಎಂಬುದನ್ನು ಇದು ಪ್ರತಿಬಿಂಬಿ ಸುತ್ತದೆ. ದೃಷ್ಟಿ ಸರಿಯಾಗಿದ್ದರೆ ಬುದ್ಧಿ ಸರಿಯಾಗಿರುತ್ತದೆ. ಬುದ್ಧಿ ಸರಿಯಾಗಿದ್ದರೆ ಎಲ್ಲವೂ ಸಿದ್ಧಿಯಾಗುತ್ತದೆ.ಬುದ್ಧಿನಾಶಾತ್ ಪ್ರಣಶ್ಯತಿ-ಎಂಬ ಗೀತೆಯ ಮಾತನ್ನು ಇಲ್ಲಿ ಸ್ಮರಿಸಬಹುದು. ಈ ಮೇಲಿನ ಮಾತುಗಳ ಆಧಾರದಿಂದ ಒಂದು ಸಂಗತಿ ಸ್ಪಷ್ಟ ವಾಗುತ್ತದೆ ಇಂದ್ರಿಯಗಳ ಅಧಿಪತಿ ಗಣಪತಿಯನ್ನು ಆರಾಧಿ ಸುವುದು ಅಂದರೆ ನಮ್ಮ ಇಂದ್ರಿಯಗಳನ್ನು ಅಂಕೆ ತಪ್ಪದಂತೆ ನೋಡಿಕೊಳ್ಳುವ ಜಾಗೃತ ಪ್ರಜ್ಞೆಯನ್ನು ಗಣಪತಿಯ ಬಾಹ್ಯ ರೂಪದ ಮೂಲಕ ನಮ್ಮಲ್ಲಿ ಮೂಡಿಸುತ್ತಾನೆಂಬ ಅರ್ಥದಲ್ಲಿ ಅವನನ್ನು ಇಂದ್ರಿಯಗಳ ಅಧಿಪ ಎಂದು ಸಂಬೋಧಿಸಿದರೆ ಅನ್ಯಥಾ ಆಗಲಾರದು. ಗಣಪತಿಯ ಆರಾಧನೆಯ ಮುಖೇನ ಇಂದ್ರಿಯಗಳ ಚೈತನ್ಯವನ್ನು ಉದ್ದೀಪಿಸಿಕೊಳ್ಳುತ್ತ ಈ ಭವ ಸಾಗರದ ಕಷ್ಟ ಕೋಟಲೆಗಳನ್ನು ಜಯಿಸಬಹುದು. ಭಕ್ತನು ಕಂಪಿನಂ ದೇವ ಜಗತ್ಕಾರಣ ಮಚ್ಯುತಂ ಎನ್ನುತ್ತದೆ ಗಣಪತಿ ಅಥರ್ವಶೀರ್ಷ.ಇಂದ್ರಿಯಗಳ ಅಧಿಪತಿಯಾದ ಗಣಪತಿ ಆಕಾಶದ ಅಧಿದೇವತೆ. ಪಂಚ ಭೂತಗಳಲ್ಲಿ ಮೊದಲನೆಯದು ಆಕಾಶ.ಇದರಿಂದ ವಾಯು, ಅಗ್ನಿ, ನೀರು ಮತ್ತು ಮಣ್ಣುಗಳ ಸೃಷ್ಟಿಯಾಯಿತು. ಆಕಾಶಾತ್ ವಾಯುಃ ವಾಯೋರಗ್ನಿಃ ಅಗ್ನೇರಾಪಃ ಅದ್ಭ್ಯಃ ಪೃಥಿವೀ ಇದು ಉಪನಿಷತ್ತಿನ ಮಾತು. 'ಪಂಚಭೂತಗಳಿಂದಾದ ಈ ಪಾರಮಾರ್ಥಿಕ ಶರೀರದಲ್ಲಿ ಇಂದ್ರಿಯಗಳನ್ನು ಹಿಡಿತದಲ್ಲಿ ಇರಿಸಿ ನಮ್ಮ ಜೀವನವನ್ನು ಸುಗಮಗೊಳಿಸು ಹೇ ಗಣಪತಿ ಎಂಬ ಸದಿಚ್ಛೆಯ ಭಾವದಲ್ಲಿ ಗಣಪತಿ ಆರಾಧನೆ ಈ ದೇಹಕ್ಕೆ, ಈ ನೆಲಕ್ಕೆ, ಈ ಜನಕ್ಕೆ ಗಹನವಾದುದು ಎಂಬ ಅರಿವು ನಮ್ಮಲ್ಲಿ ಮೂಡಬೇಕಾದದು ಅನಿವಾರ್ಯವೂ ಅಗತ್ಯವೂ ಅವಶ್ಯವೂ ಆಗಿದೆ.

ಗಣಾನಾಂ ತ್ವಾಂ ಗಣಪತಿಂ ಹವಾ
ಮಹೇ ಕವಿಂ ಕವೀನಾಂ ಉಪಮಶ್ರವಸ್ತಮಂ
ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ
ಅನಃ ಶೃಣ್ವನ್ನೂತಿಭಿಃ ಸೀದಾ ಸದನಂ॥

ಋಗ್ವೇದದಲ್ಲಿ ಬರುವ ಈ ಋಕ್ಕು ಇಂದಿಗೂ ಗಣಪತಿ ಪೂಜೆಯ ಮುಖ್ಯ ಮಂತ್ರವಾಗಿದೆ.ಗಣಗಳಿಗೆ ಪತಿ, ಕವಿಗಳಿಗೆ ಕವಿ ಜ್ಯೇಷ್ಠ ರಾಜ, ಬ್ರಹ್ಮನಿಗೂ ಬ್ರಹ್ಮ, ತ್ರಿಮೂರ್ತಿಗಳಿಂದಲೂ ಪೂಜಿತನಾದ ಅಧಿದೇವರೆಂದರೆ ಗಣಪತಿ.

ಪ್ರಥಮ ಪೂಜಿತ, ವಿಘ್ನನಾಶಕ ಗಣಪ ಕೇವಲ ದೇವರಷ್ಟೇ ಅಲ್ಲ,ಅಮ್ಮನ ಮುದ್ದಿನ ಮಗನೂ ಹೌದು. ಮಗನನ್ನು ಬದುಕಿಸಿಕೊಳ್ಳುವುದಕ್ಕಾಗಿ ಭದ್ರಕಾಳಿಯಾದ ಪಾರ್ವತಿ, ವಿರೂಪದ ಮಗನನ್ನು ಪ್ರೀತಿಯಿಂದ ಸಾಕಿದ ಶ್ರೀ ಗೌರಿ ಮಾತೆಯರ ಮಾತೆಯಾಗಿ ಆದರ್ಶಳಾಗುತ್ತಾಳೆ. ತಾಯಿ- ಮಗನ ಬಂಧ ಅಪರೂಪ.

### ಸರ್ವಸಮಾನತೆಯ ದಿವ್ಯ ಸಂಕೇತ

ಗಣೇಶ ಚತುರ್ಥಿಗೆ ಸುದೀರ್ಘ ಇತಿಹಾಸವಿದೆ. ಆದರೆ ಹತ್ತೊಂಬತ್ತನೇ ಶತಮಾನದ ಕೊನೆಯ ದಶಕದವರೆಗೂ ಗಣೇಶನ ಹಬ್ಬ ಹಿಂದೂ ಧರ್ಮದವರ ಕುಟುಂಬದೊಳಗಿನ ಆಚರಣೆಯಾಗಿ ಉಳಿದಿತ್ತು. ದೇವಸ್ಥಾನಗಳಲ್ಲಿ ವಿಶೇಷ ಪೂಜೆ. ಕೆಲವು ಸಾರ್ವಜನಿಕ ಆಚರಣೆಗಳ ಮೂಲಕ ಹಳ್ಳಿಗಳಲ್ಲಿ ಸಣ್ಣ ಪ್ರಮಾಣದಲ್ಲಿ ಸಾಮುದಾಯಿಕ ರೂಪ ಪಡೆದುಕೊಂಡಿದ್ದರೂ ಅದಕ್ಕೊಂದು ಸಾರ್ವಜನಿಕ ರೂಪ ಸಿಕ್ಕಿರಲಿ.

ಎಲ್ಲ ಹಬ್ಬಗಳಂತೇ ಒಂದು ಸಾಮಾನ್ಯ ಹಬ್ಬವಾಗಿದ್ದ ಗಣೇಶ ಚತುರ್ಥಿಯನ್ನು ಸಾರ್ವಜನಿಕಗೊಳಿಸಿ ಅದಕ್ಕೊಂದು ಸಂಘಟನೆಯ ಆಯಾಮವನ್ನೂ ಕಲ್ಪಿಸಿದವರು ಲೋಕಮಾನ್ಯ ಬಾಲಗಂಗಾಧರತಿಲಕ್ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಜನರನ್ನು ಸಂಘಟಿಸುವುದೇ ಒಂದು ಸವಾಲಾಗಿತ್ತು. ಬಹಿರಂಗವಾಗಿ ಸ್ವಾತಂತ್ರ್ಯ ಹೋರಾಟದ ಸಮಾವೇಶಗಳನ್ನು ಏರ್ಪಡಿಸುವುದಕ್ಕೆ ಬ್ರಿಟಿಷ್ ಆಡಳಿತ ವ್ಯವಸ್ಥೆ ಅಡ್ಡಗಾಲಾಗಿತ್ತು. ಆದ್ದರಿಂದ 1893 ರಲ್ಲಿ ಬಾಲಗಂಗಾಧರತಿಲಕ್ ಅವರು ಧರ್ಮದ ಆಚರಣೆಯ ನೆಪದಲ್ಲಿ ಜನಸಂಘಟನೆಗೆ ಮುಂದಾದರು.

### ಮನೆಯಿಂದ ಬೀದಿಗೆ

ಮನೆಯೊಳಗೆ ಕೂಡಿಸುತ್ತಿದ್ದ ಗಣೇಶನ ಮೂರ್ತಿಯನ್ನು ಬೀದಿಯಲ್ಲಿ ತಂದು ಪ್ರತಿಷ್ಠಾಪಿಸಿದರು. ಪೂಜೆಯ ಭಕ್ತಿಯ ನೆಪದಲ್ಲಿ ಜನರನ್ನು ಸಂಘಟಿಸಿದರು. ಅಲ್ಲಿ ಬ್ರಿಟಿಷ್ ಆಡಳಿತದ ವಿರುದ್ಧ ಜನರಿಗೆ ಅರಿವು ಮೂಡಿಸಿ ಹೋರಾಟದ ರಣತಂತ್ರಗಳನ್ನು ರೂಪಿಸಲಾಗುತ್ತಿತ್ತು. ಒಂದರ್ಥದಲ್ಲಿ ಇದು ಗಣೇಶನ ಹೆಸರಲ್ಲಿ ನಡೆಯುತ್ತಿದ್ದ ಸ್ವಾಂತತ್ರ್ಯ ಹೋರಾಟ ಸಿದ್ಧತೆಯ ಸಮಾವೇಶವೇ ಆಗಿರುತ್ತಿತ್ತು.

ಇದಲ್ಲದೇ ಸಮಾಜದಲ್ಲಿ ಜಾತಿ ಸಂಘರ್ಷಗಳು.. ವರ್ಣ ಸಂಘರ್ಷಗಳನ್ನು ಮೀರಿ ಆಚರಣೆಯ ಹೆಸರಲ್ಲಿ ಎಲ್ಲ ರೀತಿಯ ಜನರನ್ನೂ ಒಂದೆಡೆ ಸೇರಿಸುವ ವೇದಿಕೆಯಾಗಿಯೂ ಗಣೇಶ ಹಬ್ಬ ಮಹತ್ವ ಪಡೆದುಕೊಂಡಿತ್ತು. ಮಹಾರಾಷ್ಟ್ರದಲ್ಲಿ ಪೇಶ್ವೆ ಆಡಳಿತದಲ್ಲಿ ಮುಖ್ಯ ಹಬ್ಬವಾಗಿದ್ದ ಗಣೇಶೋತ್ಸವ, ಸ್ವರಾಜ್ ಆಂದೋಲನದ ಸಂದರ್ಭದಲ್ಲಿ ಸಂಘಟಿತ ಸ್ವರೂಪ ಪಡೆಯಿತು. ಹೀಗೆ ರಾಷ್ಟ್ರೀಯ ಹಬ್ಬವಾಗಿ ರೂಪುಗೊಂಡ ಗಣೇಶನ ಹಬ್ಬವು ಸ್ವಾತಂತ್ರ್ಯಾ ನಂತರವೂ ಒಂದು ಪರಿಸ್ಥಿತಿಯಲ್ಲಿ ಇಂದು ಗಣೇಶ ಹಬ್ಬ ಹಾಡು ನೃತ್ಯ.ವಿವಿಧ ಕಾರ್ಯಕ್ರಮಗಳು,ಸ್ಪರ್ಧೆಗಳು ನಡೆಯುವ ಒಂದು ಸಾಂಸ್ಕೃತಿಕ ವೇದಿಕೆಯಾಗಿ ರೂಪುಗೊಂಡಿದೆ.

### ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

– ಕಾರ್ಯನಿರ್ವಹಣಾಧಿಕಾರಿ

# ವಾಮನ ದ್ವಾದಶಿ

ಬಲಿ ಚಕ್ರವರ್ತಿ ಪ್ರಹ್ಲಾದನ ವಂಶಸ್ಥ ಇಲ್ಲಿ, ವಾಮನನು ಭೂಮನ್ಯಾಕಾಶಗಳಿಗೂ ವ್ಯಾಪಿಸಿ. ಒಂದು ಹೆಜ್ಜೆಯನ್ನು ಭೂಮಿಗೂ, ಇನ್ನೊಂದು ಹೆಜ್ಜೆಯನ್ನು ಆಕಾಶಕ್ಕೂ ಹಾಗೂ ಮತ್ತೊಂದು ಹೆಜ್ಜೆಯನ್ನು ಬಲಿಯ ತಲೆಯ ಮೇಲಿಟ್ಟದ್ದು ಎಲ್ಲರಿಗೂ ತಿಳಿದ ವಿಷಯ. ಅಂತರಾರ್ಥವೆಂದರೆ, ನಾವೆಲ್ಲರೂ ಈ ಜಗತ್ತಿಗೆ ವಾಮನರಾಗಿಯೇ ಬಂದವರು. ಜ್ಞಾನದ ಮೂಲಕ, ಸಾಧನೆಯ ಮೂಲಕ, ತಪಸ್ಸಿನ ಮೂಲಕ, ಸರ್ವವ್ಯಾಪಕತ್ವದಿಂದ ತ್ರಿವಿಕ್ರಮರಾಗಿ ಬೆಳೆಯಬೇಕು. ತ್ರಿಕರಣಶುದ್ಧರಾಗುವುದೇ ಮೂರು ಹೆಜ್ಜೆಗಳು. ಅಹಂಕಾರವೆಂಬ ಸಂಕುಚಿತ ಭಾವವೇ ವಾಮನತ್ವ. ವಾಮನತ್ವದ ಬಲುಯಾದೊಡನೆಯೇ ವ್ಯಕ್ತಿಯು ತ್ರಿವಿಕ್ರಮನಾಗಿ ಬೆಳೆಯುತ್ತಾನೆಂಬುದು ಸಾರಾಂಶ. ಸಮಸ್ತ ಜಗತ್ತೂ ಮೂರು ವಕಾರಗಳಿಂದ ಸಂಪನ್ನವಾಗಿದೆ. ವ್ಯಕ್ತಿ, ವಸ್ತು ಹಾಗೂ ವಿಷಯಗಳು, ಇವು ಮೂರು ವಕಾರಗಳು, ಅಷ್ಟೇ ಅಲ್ಲ. ಮೂರು ವಿಕಾರಗಳು ಕೂಡಾ ! ಈ ಮೂರು ವಿಕಾರಗಳನ್ನು ಕ್ರಮಬದ್ಧವಾಗಿ ಕ್ರಮಿಸಿದಾಗ ಮಾನವನು ತನ್ನಲ್ಲಿರಬಹುದಾದ ದಾನವತ್ವವನ್ನು ಕಳೆದುಕೊಂಡು ದೈವತ್ವವನ್ನು ಹೊಂದುತ್ತಾನೆಂಬುದು ತತ್ತ್ವಾರ್ಥ, ಮಾನವ ವರ್ಗದ ಆರಂಭಿಕ ದಿನಗಳಲ್ಲಿ ಕಾಣಿಸಿಕೊಂಡವರು ಕುಬ್ಜರು ಎಂಬುದನ್ನು ಇದರ ಜೀವನ ಚಕ್ರದ ಸಂಕೇತದಲ್ಲಿ ಅರ್ಥಮಾಡಿಕೊಳ್ಳಬಹುದು. ಜೊತೆಗೆ ಈ ಕತೆ ಅಹಂಕಾರವನ್ನು, ವಾಮನನು ತುಳಿಯುವ ಕ್ರಿಯೆ ಹೇಳುವ ಮೂಲಕ ಇದಕ್ಕೆ ಅಹಂಕಾರ ಮರ್ದನನದ ಸಂಕೇತಾರ್ಥವನ್ನು ನೀಡಿ ಕಾವ್ಯಾತ್ಮವಾಗಿಯೂ ಸೊಗಸಾಗಿಯೂ ರೂಪುಗೊಂಡಿದೆ.

## ವಾಮನಾವತಾರ - ತಾತ್ತ್ವಿಕತೆ

ಭಾಗವತ ಪುರಾಣದಲ್ಲಿ ಒಂದು ಕಥೆ ಬರುತ್ತದೆ. ಈ ಕಥೆ ಮಹಾವಿಷ್ಣುವಿನ ಐದನೇ ಅವತಾರದ ಕುರಿತಾದದ್ದು. ದೈತ್ಯ ರಾಜ ಬಲಿ ಚಕ್ರವರ್ತಿ ಇಂದ್ರಲೋಕವೂ ಸೇರಿದಂತೆ ಭೂಮ್ಯಾಕಾಶಗಳನ್ನು ಗೆದ್ದುಕೊಂಡಿರುತ್ತಾನೆ.ಅದನ್ನು ಉಪಾಯದಿಂದ ಮರಳಿ ಗಳಿಸಿಕೊಳ್ಳಲು ವಿಷ್ಣುವು ವಾಮನನ ಅವತಾರ ತಾಳಿ ಬರುತ್ತಾನೆ. ಅದಕ್ಕಾಗಿಯೇ ಕಶ್ಯಪ ಪ್ರಜಾಪತಿ ಮತ್ತು ಆದಿತಿಯರ ಮಗನಾಗಿ ಹುಟ್ಟುತ್ತಾನೆ. ಕುಳ್ಳ ಗಾತ್ರದ-ಮುದ್ದು ಮುದ್ದಾದ ಬ್ರಾಹ್ಮಣ ವಟು ವಾಮನ, ಮಹಾಯಾಗ ನಡೆಸುತ್ತಿದ್ದ ಬಲಿಚಕ್ರವರ್ತಿಯ ಬಳಿ ಸಾರುತ್ತಾನೆ. ದಾನವಾಗಿ ಮೂರು ಹೆಜ್ಜೆ ಭೂಮಿಯನ್ನು ಕೇಳುತ್ತಾನೆ. ಅಸುರ ಗುರು ಶುಕ್ರಾಚಾರ್ಯರಿಗೆ ಸಂಚಿನ ವಾಸನೆ ಬಡಿಯುತ್ತದೆ. ಬಲಿಯನ್ನು ತಡೆಯುತ್ತಾರೆ. ಬಲಿ ಅವರ ಮಾತು ಕೇಳದೆ ಮೂರು ಹೆಜ್ಜೆ ದಾನ ನೀಡುತ್ತಾನೆ. ಅದನ್ನು ಪಡೆಯುತ್ತಲೇ ತ್ರಿವಿಕ್ರಮನಾಗಿ ಬೆಳೆಯುವ ವಾಮನ, ಎರಡು ಹೆಜ್ಜೆಗಳಿಂದ ಭೂಮ್ಯಾಕಾಶಗಳನ್ನು ಅಳೆದು, ಮೂರನೆಯದನ್ನು ಎಲ್ಲಿಡಲೆಂದು ಕೇಳುತ್ತಾರೆ. ಕೊಟ್ಟ ಮಾತು ತಪ್ಪದ ಬಲಿ ಚಕ್ರವರ್ತಿ, ತನ್ನ ತಲೆಯ ಮೇಲಿಡೆಂದು ಕೋರುತ್ತಾನೆ. ಅದರಂತೆ ಮೂರನೆ ಹೆಜ್ಜೆಯನ್ನು ಬಲಿಯ ತಲೆ ಮೇಲಿಟ್ಟು ಆತನನ್ನು ಪಾತಾಳಕ್ಕೆ ತಳ್ಳುತ್ತಾನೆ ತ್ರಿವಿಕ್ರಮ. ಅನಂತರ ದೈತ್ಯ ಚಕ್ರವರ್ತಿಯ ಸಜ್ಜನಿಕೆ, ಜನಪ್ರಿಯತೆಗಳಿಂದ ಸಂಪ್ರೀತನಾಗಿ ವರಗಳನ್ನು ನೀಡುವುದು ಬೇರೆ ವಿಷಯ. ಇದು ಭಾಗವತದಲ್ಲಿ ಬರುವ ವಾಮನವತಾರದ ಕತೆಯ ಸಾರಾಂಶ.

ವಾಮನ ಅಂದರೇನೆ ಕುಳ್ಳು ಎಂದು ಗಾತ್ರದಲ್ಲಿ, ಆಕಾರದಲ್ಲಿ ಕುಬ್ಜ, ಈ ರೂಪಯಾಕೆ? ಎದುರಿಗಿನ ವ್ಯಕ್ತಿಯ ವಿಶ್ವಾಸಗಳಿಸಲು. ಆತನ ಅಹಂಕಾರಕ್ಕೆ ಪುಷ್ಟಿ ಒದಗಿಸಲು ನಾವಾದರೂ ನೋಟಕ್ಕೆ ದುರ್ಬಲನಾಗಿ ಕಾಣುವ, ದೀನನಾಗಿ ಕಾಣುವ ವ್ಯಕ್ತಿಯನ್ನು ನಿರುಪದ್ರವಿ ಎಂದು ಕೊಳ್ಳುತ್ತೀವಲ್ಲವೆ? ಈ ಅನ್ನಿಸಿಕೆ ಹುಟ್ಟುವುದು, ನಾವು ದೇಹದೊಂದಿಗೆ ಗುರುತಿಸಿ ಕೊಂಡಿರುವಾಗ ಮಾತ್ರ, ಈ ಆಕಾರ ಏನು ಮಾಡಿತೆಂಬ ಅಹಂಕಾರ ನಮ್ಮೊಳಗೆ ಜಾಗೃತವಾಗುತ್ತದೆ. ನಾವು ಎಚ್ಚರ ತಪ್ಪುತ್ತೇವೆ.



ಬಲಿ ಚಕ್ರವರ್ತಿಗೆ ಆಗಿದ್ದೂ ಹಾಗೆಯೇ. ಆತ ಮೊದಲೇ ಮೂರು ಲೋಕ ಗೆದ್ದವನು. ಆ ಸಂಭ್ರಮಾಚರಣೆಗೆ ಮಹಾಯಾಗವನ್ನು ಮಾಡುತ್ತಿದ್ದವನು. ಈ ಸಂದರ್ಭದಲ್ಲಿ ಛತ್ರಿ ಹಿಡಿದು ಬಂದ ಕುಳ್ಳ ಬ್ರಾಹ್ಮಣ ವಟು ಮೂರು ಹೆಜ್ಜೆ ಭೂಮಿಯನ್ನು ದಾನ ಕೇಳಿದ್ದು ಆತನಿಗೆ ತಮಾಷೆಯಾಗಿ ಕಂಡಿರಬೇಕು. ಗುರುಶುಕ್ರಾ ಚಾರ್ಯರು ಆತನನ್ನು ತಡೆಯುತ್ತಾರೆ. ಅವರು ಜ್ಞಾನಿಗಳು. ಹೀಗೆ ಯಾಗದ ವೇಳೆ ಯಾರೋ ಒಬ್ಬ ಬಂದು ಮೂರು ಹೆಜ್ಜೆ ಕೇಳುತ್ತಾನೆ ಎಂದರೆ ಅದು ಸುಮ್ಮನೆ ಇರಲಿಕ್ಕಿಲ್ಲ ಎಂಬುದನ್ನು ಅವರು ಊಹಿಸ ಬಲ್ಲರು ಶುಕ್ರಾಚಾರ್ಯರು ದೇಹದ ಹೊರತಾಗಿ ಯೋಚಿಸುತ್ತಿದ್ದಾರೆ. ಅವರು ವಾಮನನ ಮನಸ್ಸನ್ನು ಓದಲು ಯತ್ನಿಸುತ್ತಿದ್ದಾರೆ. ಸ್ಥೂಲದ ಹಿಂದಡಗಿದ ಸೂಕ್ಷ್ಮದ ಸಾಮರ್ಥ್ಯವನ್ನು ಗ್ರಹಿಸುತ್ತಿದ್ದಾರೆ. ಆದ್ದರಿಂದಲೇ ಶುಕ್ರಾಚಾರ್ಯರು ಹೇಳುತ್ತಾರೆ.ತಡಿ ಚಕ್ರವರ್ತಿ ಕುಳ್ಳನಾದರೇನು? ಪ್ರಳಯಾಂತಕನಿವನು! ಎಂದು.

ಆದರೆ ಬಲಿ ಧರ್ಮಭೀರು. ಕೊಡುಗೈ ದಾನಿ ಎಂಬ ಹೆಸರು ಪಡೆದವನು ಹೀಗಿರುವಾಗ ಮಹಾಯಾಗದ ಸಮಯದಲ್ಲಿ ಕೇಳಿದ್ದನ್ನು ಇಲ್ಲ ಎಂದು ಹೇಳಲು ಸಾಧ್ಯವೇ? ಕೆಲವರು ಹೀಗೆ ಹೆಸರನ್ನು ಉಳಿಸಿಕೊಳ್ಳಲು ಹೋಗಿ ಪೆದ್ದುತನದ ಕೆಲಸವನ್ನು ಮಾಡುತ್ತಾರೆ. ಹೆಸರು ಕೆಟ್ಟರೂ ತಾನು ಕೆಡಬಾರದು ಎಂಬ

ಶ್ರೀಮತಿ . ಕೆ.ವಿ. ಪದ್ಮಾವತಿ
97437 22327



ಯೋಚನೆಗೆ ಅಂಥವರಲ್ಲಿ ಆಸ್ಪದವಿರುವುದಿಲ್ಲ. ತಾನೇ ಶಾಶ್ವತ ಅಲ್ಲ ಎಂದಾದ ಮೇಲೆ ಹೆಸರು ಉಳಿದು ಉಪಯೋಗವಾದರೂ ಏನು? ಇರುವಷ್ಟು ದಿನ ತನಕ ಸ್ಪಷ್ಟವಾಗಿ ಇರಬೇಕು. ಯಾರಿಗೂ ತೊಂದರೆ ಕೊಡದೆ ಇದ್ದರೆ ಸಾಕು ಎನ್ನುವುದು ಇಂಥಾ ಧೀರರಿಗೆ ಒಗ್ಗದ ಮಾತು. ಅವರ ಪ್ರಕಾರ ಯಾರಿಗೂ ತೊಂದರೆ ಮಾಡದೆ ಉಳಿಯುವುದರಲ್ಲಿ ಅಂಥಾ ಸ್ವಾರಸ್ಯವೇನಿಲ್ಲ, ಸ್ವಾರಸ್ಯ ಇರುವುದು ಇತರರಿಗೆ 'ಉಪಕಾರ' ಮಾಡುವುದರಲ್ಲಿ, ಏಕೆಂದರೆ ಅಲ್ಲಿ ಅವರ 'ಅಹಂ' ತೃಪ್ತಿಗೊಳ್ಳುತ್ತದೆ. ಬಲಿಚಕ್ರವರ್ತಿ ಮಾಡಿದ್ದೂ ಅದನ್ನೇ. ಈ ಕುಳ್ಳನಿಗೆ ಹೆದರಿ ಹೆಸರು ಕೆಡಿಸಿಕೊಳ್ಳುವುದೇ ಎಂದವನು ಯೋಚಿಸಿರಬೇಕು.ಆದ್ದರಿಂದಲೇ ಆತ ಗುರುವಿನ ಮಾತನ್ನು ಚಿಂತನೆಗಿಂತ ಗುರುವಾಕ್ಯಕ್ಕೆ ಮನ್ನಣೆ ಕೊಡುವುದೇ ಹೆಚ್ಚು ಧಾರ್ಮಿಕ ನಡವಳಿಕೆಯಾಗಿತ್ತು. ಇಲ್ಲಿ ಆತನ ಮನಸ್ಸನ್ನು ಅಸ್ತಿತ್ವವನ್ನು ಅಹಂಕಾರ ನುಂಗಿ ಹಾಕಿತ್ತು.

ವಾಮನನ ಕೈಗೆ ಕಮಂಡಲದ ಅರ್ಘ್ಯ ಬೀಳುತ್ತಲೇ ಪವಾಡ ನಡೆಯಿತು. ಮೂರಡಿ ದೇಹದ ಕುಳ್ಳ ಜಗದಾಕಾರ ಬೆಳೆದು ನಿಂತ. ಕೆಲಸವಾಗುವ ಮುನ್ನ ವಿನಯವಂತಿಕೆ ಭೂಷಣ ಕೆಲಸವಾಗುತ್ತದೆ. ನಾವು ಗೆಲ್ಲುತ್ತೇವೆ ಎಂಬ ಸುಳಿವು ಸಿಕ್ಕುತ್ತಲೇ ಆತ್ಮವಿಶ್ವಾಸ ಹಿಗ್ಗಿ ನಾವೇ ಮುಗಿಲಾಗಿ ಬಿಡುತ್ತೇವೆ. ಗೆಲುವಿನ ಸೂಚನೆ ನಮ್ಮಿಂದ ಎಂಥಾ ಕೆಲಸವನ್ನಾದರೂ ಸಾಧ್ಯವಾಗಿಸಿ ಬಿಡುತ್ತದೆ. ವಾಮನನಿಗೆ ಬಲಬಂತು. ಆತನಲ್ಲಿ ನೈತಿಕತೆಯೂ ಇತ್ತು. ಆದ್ದರಿಂದಲೇ ಆತನ ಬಲಕ್ಕೆ ಮತ್ತುಷ್ಟು ಪುಷ್ಟಿ ಬಂತು. ಅವನಲ್ಲಿದ್ದು ಎಂಥ ನೈತಿಕತೆ? ಮೂರು ಹೆಜ್ಜೆ ಭೂಮಿ ಕೇಳಿ ಲೋಕಕ್ಕೆ ಲೋಕವನ್ನೇ ಅಳೆಯಬಹುದೆ ಹಾಗೆಲ್ಲ? ಎಂದು ಕೇಳಬಹುದು. ವಾಮನ ದೇವತೆಗಳ ಪರವಾಗಿ ಬಂದವನು. ಆತನದ್ದು ದೇವ ಕಾರ್ಯ.ದೇವಕಾರ್ಯಗಳೆಲ್ಲವೂ ನೈತಿಕವೇ ಅಲ್ಲವೇ? ಅಲ್ಲೊಂದು ಸಂಕೇತ ಇರುತ್ತದೆ. ಲೋಕ ಕಲ್ಯಾಣದ ಉದ್ದೇಶ ಇರುತ್ತದೆ. ಆ ಹೊತ್ತಿಗೆ ಅದು ನಮ್ಮ ದೀರ್ಘ ಕಾಲದ ಫಲ ನೀಡುವಂಥದ್ದು. ಬಲಿಚಕ್ರವರ್ತಿ ಉಳಿದ ದೈತ್ಯರಂತಲ್ಲ. ಆತ ಧರ್ಮ ಪರಾಯಣ.ಪ್ರಜಾಪಾಲಕ, ಸಮರ್ಥ ಆಡಳಿತಗಾರ. ಎಲ್ಲರಿಗೂ ಅವನನ್ನು ಕಂಡರೆ ಪ್ರೀತಿ. ಆತ ತನ್ನ ತೋಳ್ಬಲದಿಂದಲೇ ಇಂದ್ರನನ್ನು ಸೋಲಿಸಿ ದೇವಲೋಕ ಗೆದ್ದು ಕೊಂಡಿದ್ದ.ಆದರೆ ಅವನು ದೈತ್ಯರ ಕುಲದವನು. ಅವನೊಬ್ಬ ಉತ್ತಮನಾಗಿದ್ದರೆ ಸಾಕಾಗುವುದಿಲ್ಲ ಅವನ ಪರಿವಾರವೂ ಆ ಯೋಗ್ಯತೆ ಹೊಂದಿರುವುದು ಮುಖ್ಯ ವಾಗುತ್ತದಲ್ಲವೆ? ಇದು ಹೇಗೆಂದರೆ,ಪ್ರಜಾಪ್ರಭುತ್ವದಲ್ಲಿ ನಮ್ಮಿಂದ ಪ್ರಧಾನಿಯಾಗಿಯೋ ಮುಖ್ಯಮಂತ್ರಿಯಾಗಿಯೋ ಚುನಾಯಿಸಲ್ಪಟ್ಟವರು ಉತ್ತಮರಾಗಿದ್ದರೆ ಸಂತೋಷವೇ.ಆದರೆ ಅವರ ಸಚಿವ ಸಂಪುಟದ ಸದಸ್ಯರು ಭ್ರಷ್ಟರು ದುಷ್ಟರೂ ಆಗಿದ್ದರೆ ಪ್ರಯೋಜನವೆಲ್ಲಿಯದು? ಅಂಥವರು ಕೈಗೆ ಅಧಿಕಾರ ಸಿಕ್ಕು ಮತ್ತಷ್ಟು ದುರ್ಗತಿಯೇ ಒದಗುವುದಲ್ಲವೆ? ಮುಖ್ಯ ಹುದ್ದೆಯಲ್ಲಿ ಇರುವವನಿಗೆ ಅವನದೇ ರಾಜಕಾರ್ಯಗಳಿರುತ್ತವೆ. ಆಡಳಿತಗಾರನೊಬ್ಬ ಮಾತ್ರವಲ್ಲ. ಅವನ ಪರಿಹಾರವೂ ಸಜ್ಜನಿಕೆ ಹೊಂದಿರುವುದು. ಉತ್ತಮ ಹಿನ್ನೆಲೆ ಹೊಂದಿರುವುದು ಅಗತ್ಯವಾಗುತ್ತದೆ.ಬಲಿಯನ್ನು ಮಟ್ಟ ಹಾಕುವಲ್ಲಿಯೂ ಇದೇ ತರ್ಕ ಅನ್ವಯವಾಗಿದ್ದು. ಆತನ ಕುಲದ ಹಿನ್ನೆಲೆ ಹೊಂದಿರುವುದು ಅಗತ್ಯವಾಗುತ್ತದೆ. ಬಲಿಯನ್ನು ಮಟ್ಟ ಹಾಕುವಲ್ಲಿಯೂ ಇದೇ ತರ್ಕ ಅನ್ವಯವಾಗಿದ್ದು. ಆತನ ಕುಲದ ಹಿನ್ನೆಲೆ ಮತ್ತು ಪರಿವಾರದ ದುಷ್ಟ ಕಾರ್ಯಗಳ ದಾಖಲೆಯೇ ಆತನ ನಿವಾರಣೆಗೆ ಮೂಲವಾಯಿತು. ಜೊತೆಗೆ ಬಲಿಯ ಅಹಂಕಾರದಿಂದ ಉಂಟಾದ ಮೈ ಮರೆವೂ ಸೇರಿಕೊಂಡಿತು ಆತನ ಈ ದೌರ್ಬಲ್ಯ ವಾಮನನ ಬಲವಾಯಿತು.

ಬಹಳ ಬಾರಿ ಹೀಗಾಗುತ್ತದೆ. ನಮ್ಮ ಬಲದ ಬಲವಂತೂ ಸರಿಯೇ ಎದುರಿಗೆ ಇರುವವರ ದೌರ್ಬಲ್ಯವೂ ನಮಗೆ ಹೆಚ್ಚುವರಿ ಬಲವಾಗಿ ಸೇರ್ಪಡೆಯಾಗುತ್ತದೆ.

ವಾಮನ ತ್ರಿವಿಕ್ರಮನಾಗಿ ಬೆಳೆದನೆಂಬ ಸಂಕೇತದ ತಿರುಳು ಇದೇ ಆಗಿದೆ. ಇದು ನಮ್ಮೊಳಗೆ ನಡೆಯಬಹುದು. ನಮ್ಮಲ್ಲಿ ನೈತಿಕತೆ ಇದ್ದರೆ, ನಮ್ಮ ಕಾರ್ಯೋದ್ದೇಶ ಒಳಿತಿನೆಡೆಗೆ ಇದ್ದರೆ ಹಾಗೂ ಎದುರಾಳಿಯಲ್ಲಿ ವ್ಯಕ್ತಿಗತ (ದೇಹದ ದೌರ್ಬಲ್ಯವಲ್ಲ) ದೌರ್ಬಲ್ಯವಿದ್ದರೆ ನಮ್ಮೊಳಗಿನ ವಾಮ ನಾಕಾರದ ಆತ್ಮವಿಶ್ವಾಸ ವರ್ಧಿಸಿ ತ್ರಿವಿಕ್ರಮ ನೆತ್ತರಕ್ಕೆ ಬೆಳೆಯಬಲ್ಲದು. ಮುಖ್ಯ ನಾವು ಅಂತಹ ಶುದ್ಧಿ ಮತ್ತು ಸಾಮರ್ಥ್ಯಗಳನ್ನು ನಮ್ಮದಾಗಿಸಿಕೊಳ್ಳಲು ಪ್ರಯತ್ನಿಸ ಬೇಕಷ್ಟೆ.





# ಮೋಹನದಾಸರ ಕೃತಿಗಳಲ್ಲಿ ದೇಸಿಯ ಸೊಗಡು

- ಡಾ ॥ ಶ್ರೀಮತಿ ರಾಜಶ್ರೀ ಕಲ್ಲೂರಕರ್

ಬಳ್ಳಾರಿ ಜಿಲ್ಲೆಯ ಚಿಪ್ಪಗಿರಿಯ ಭೀಮಪ್ಪ ನಾಯಕನೆಂಬ ಬೆಳ್ಳಿ ಬಂಗಾರ ಮಾರುವ ವ್ಯಾಪಾರಿಯು ತನ್ನ ಆಸ್ತಿಯನ್ನು ಗರ್ಭಿಣಿಯಾದ ತನ್ನ ಹೆಂಡತಿಗೆ ಜೀವನೋಪಾಯಕ್ಕಾಗಿಯೂ ಕೊಡದೆ ತನ್ನ ತಮ್ಮಂದಿರಿಗೆ ಒಪ್ಪಿಸಿದನು. ಅವನ ಮರಣಾನಂತರ ಅವನ ತಮ್ಮಂದಿರು ಅತ್ತಿಗೆಯನ್ನು ಮನೆಯಿಂದ ಹೊರ ಹಾಕಿದರು. ತವರಿನಲ್ಲಿ ತಾಯಿಯನ್ನು ಕಳೆದುಕೊಂಡು ಅನಾಥಳಾದ ಈಕೆ ತನ್ನ ಹಸುಗೂಸಿನೊಂದಿಗೆ ಆನೆಗೊಂದಿಗೆ ಬಂದಳು ಮಗುವಿಗೆ ಆರೈಕೆಯಿಲ್ಲದೆ ಮೈಯೆಲ್ಲಾ ಕಜ್ಜಿಯಾಗಿ, ಅದರ ಸಂಪರ್ಕದಿಂದ ತಾಯಿಗೂ ಕಜ್ಜಿಯುಂಟಾಗಿತ್ತು. ಚಕ್ರತೀರ್ಥ ಬಳಿ ಶ್ರೀಪುರಂದರದಾಸರ ಆರಾಧನೆಯ ಪ್ರಯುಕ್ತ ಶ್ರೀ ವಿಜಯದಾಸರು ಅನ್ನ ಸತ್ರ ಏರ್ಪಡಿಸಿದರು. ಅಲ್ಲಿ ಹೋದ ಈಕೆಗೆ ಅವಮಾನವಾಯಿತು. ಇದರಿಂದ ಸಾಯಲು ನಿರ್ಧರಿಸಿದಳು. ಅದನ್ನು ತಡೆದ ವಿಜಯದಾಸರು ಮಗುವಿಗೆ "ಮೋಹನ" ಎಂಬ ಹೆಸರಿಟ್ಟು ಸಾಕಿದರು. ಮುಂದೆ ಶ್ರೀಮೋಹನವಿಠಲ ಎಂದು ಅಂಕಿತಪ್ರದಾನ ಮಾಡಿದರು. ಆ ಅಂಕಿತದಿಂದ ಮೋಹನದಾಸರು ಅನೇಕ ಕೀರ್ತನೆಗಳನ್ನು ಸುಳಾದಿ, ಉಗಾಭೋಗಗಳನ್ನು ರಚಿಸಿದರು. ಸಂಪ್ರದಾಯದ ಹಾಡುಗಳಲ್ಲಿ ಕೋಲುಪದ ಹಸೆಗೆ ಕರೆಯುವ ಹಾಡು, ಉರುಟಣಿ, ಹಾಡು, ಬಾಗಿಲು ತೆರೆಯುವ ಹಾಡು ಎಂಬ ಹಾಡುಗಳನ್ನು ಮೋಹನದಾಸರು ಬರೆದಿದ್ದಾರೆ.

## ಕೋಲುಪದ

೨೧೭ ನುಡಿಗಳು ಸುವಿಸ್ತಾರವಾದ ಕೋಲು ಪದವನ್ನು ಮೋಹನದಾಸರು ರಚಿಸಿದ್ದಾರೆ. ಪ್ರಾರಂಭದಲ್ಲಿ ಆಕಾಶಕಭಿಮಾನಿ, ಶ್ರೀಕಂಠವರ ಪುತ್ರ, ಏಕದಂತ, ವಿಘ್ನೇಶ ಎಂದು ಗಣಪತಿಯನ್ನು ಸ್ತುತಿಸುತ್ತಾರೆ. ನೆನೆಯಕ್ಕಿ, ನೆನೆಗಡಲೆ, ಬಾಳೆಯಗೊನೆ ಚಿಗುಳಿ, ತುಂಬಿಟ್ಟಿನ ನೈವೇದ್ಯ ಮಾಡುವೆ, ಗಣಪತಿಯನ್ನು ಮತಿಯನ್ನು ಕೊಡು ಎಂದು ಪ್ರಾರ್ಥಿಸುವರು.

"ಮಚ್ಚ, ಕೂರುಮ, ವರಾಹ ನರಸಿಂಹ ವಾಮನ
ಸ್ವಚ್ಛ ಭೃಗುರಾಮ ರಘುರಾಮ ಕೋಲೆ
ಸ್ವಚ್ಛ ಭೃಗುರಾಮ ರಘುರಾಮ ಕೃಷ್ಣ ಬೌದ್ಧ
ಅಚ್ಚ ಕಲ್ಕಿಯ ಬಲಗೊಂಬೆ ಕೋಲೆ"

ಎಂದು ಕೆಲವೇ ಸಾಲುಗಳಲ್ಲಿ ಶ್ರೀಹರಿಯ ದಶಾವತಾರವನ್ನು ಸ್ಮರಿಸುವರು. ಅಲ್ಲದೇ ಈಶ ಬ್ರಹ್ಮರಿಗೆ ನಿಯಾಮಕನಾಗಿದ್ದು ಘೋಷಿಸುತಿಪ್ಪ ಪರಮಾತ್ಮನಾದ ಶ್ರೀಕೇಶವನ ಮೊದಲೆ ಬಲಗೊಂಬೆ ಕೋಲೆ ಎನ್ನುತ, ನಾರಾಯಣ ಮಾಧವ, ಗೋವಿಂದ ವಿಷ್ಣು ಮಧುಸೂದನ ವಿಕ್ರಮ, ವಾಮನ, ಶ್ರೀಧರ, ಹೃಷೀಕೇಶ ಪದುಮನಾಭ ದಾಮೋದರ ಸಂಕರುಷಣ, ವಾಸುದೇವ ಪ್ರದ್ಯುಮ್ನ ಅನಿರುದ್ಧ, ಪುರುಷೋತ್ತಮ, ಅಧೋಕ್ಷಜ, ನಾರಸಿಂಹ ಅಚ್ಯುತ ಜನಾರ್ಧನ ಉಪೇಂದ್ರ ಎಂದು ಶ್ರೀಹರಿಯ ನಾಮಸ್ಮರಣೆಯನ್ನು ಮಾಡುತ್ತ ಅವರಿಗೆ ಬಲಗೊಂಬೆ ಪ್ರದಕ್ಷಿಣೆ ಹಾಕುತ್ತ ನಮಸ್ಕರಿಸುವ

ಹಯಗ್ರೀವ ದತ್ತ ಋಷಭ ಸಂಕರ್ಷಣಾ
ಭಯರಹಿತ ಬಾದರಾಯಣ ಕೋಲೆ
ಭಯರಹಿತ ಬಾದರಾಯಣ ಮಹಿದಾಸ
ವೈಕುಂಠ ಹರಿಯ ಬಲಗೊಂಬೆ ಕೋಲೆ

ಎಂದು ಪರಮಾತ್ಮನ ಅವತಾರಗಳನ್ನು ಸ್ತುತಿಸುತ್ತಾರೆ. ಮುಂದೆ ಕಂಗಳಾಪಾಂಗದಿಂ ಕಮಲಾಸನಾದಿಗಳ ಸಂಗಾತ ಸೃಷ್ಠಂ ಮಹಾಲಕ್ಷ್ಮೀಯನ್ನು ಸ್ಮರಿಸುತ್ತ " ಶ್ರೀ ಮಾಯಾ ಜಯಾಕೃತಿ ಶಾಂತಿ ಇಂದಿರಾದೇವಿ

ಕಾಮನ ಜನನಿ ಜಯಂತಿ ಕೋಲೆ
ಕಾಮನ ಜನನಿ ಜಯಂತಿ ಜಾನಕಿ ಸತ್ಯ

ಭಾಮಾ ರುಕ್ಮಿಣಿಯ ಬಲಗೊಂಬೆ"

ಎನ್ನುತ್ತ ದಾಸರವೈಶಿಷ್ಟ್ಯವಾದ ದೇವರ ತಾರತಮ್ಯೋಕ್ತವಾಗಿ ಎಲ್ಲರನ್ನು ಸ್ಮರಿಸುವನು. ಮುಂದೆ ಯತಿ ತಾರತಮ್ಯವನ್ನು ಸ್ತುತಿಸುವರು.-

ಶ್ರೀಮಧ್ವಮುನಿ ಪದ್ಮನಾಭ ನರಹರಿ ತೀರ್ಥ
ಶ್ರೀಮಾಧವಾರ್ಯ ಅಕ್ಷೋಭ್ಯ ಕೋಲೆ
ಶ್ರೀಮಾಧವಾರ್ಯ ಅಕ್ಷೋಭ್ಯ ಜಯತೀರ್ಥ

ಸ್ವಾಮಿಗಳ ಮೊದಲೆ ಬಲಗೊಂಬೆ ಕೋಲೆ ಎನ್ನುತ್ತ ಬ್ರಹ್ಮಣ್ಯ ಮುನಿಗಳ ಹಸ್ತವನಜ ಸಂಭವರಾದ ಶ್ರೀಪಾದರಾಯ, ದೇಶಾಧಿಪತಿಗೆ ಬಂದ

ಕುಯೋಗವನೇ ನೂಕಿದ ಶ್ರೀವ್ಯಾಸರಾಯ,ತುಂಗಭದ್ರಾ ತೀರ ಮಂತ್ರಾಲಯದಲ್ಲಿ ಮಂಗಳ ಮಹಿಮರಾದ ಶ್ರೀರಾಘವೇಂದ್ರರ ಶ್ರೀಸತ್ಯಾಭಿನವ ತೀರ್ಥ ಶ್ರೀಸತ್ಯಾಧಿರಾಜ, ಶ್ರೀಸತ್ಯಬೋಧರ ಪರಮ ಗುರು ಪುರಂದರ ರಾಯರ, ವಿಜಯರಾಯರ ಹೀಗೆ, ದಾಸವರೇಣ್ಯರ ಸ್ಮರಿಸುವರು. ಮುಂದೆ ಶ್ರೀಕೃಷ್ಣ ಚರಿತ್ರೆಯನ್ನು ಹೇಳುವರು. ಹೆತ್ತ ತಾಯಿಯ ಮೊಲೆಯರ್ತಿಅ ನಲಿದುಂಡ ಮತ್ತೆ ಬಾಲ ಲೀಲೆ ತೋರಿ ತೋಷವ ಪಡಿಸಿ ಮುತ್ಯಾಗೆ ಪಟ್ಟು ಕಟ್ಟಿದ ಎಂದು ಕಂಸನ ಕೊಂದು ಶೂರಸೇನನಿಗೆ ಪಟ್ಟಿ ಕಟ್ಟಿದ ಎಂದು ಕಂಸನ ಕೊಂದು ಶೂರಸೇನಿಗೆ ಪಟ್ಟ ಕಟ್ಟಿದ ವಿವರಣೆ ಕೊಡುವರು.ಮುಂದೆ ವಿಶ್ವಕರ್ಮನನ್ನು ಕರೆಸಿ,ದ್ವಾರಕಪುರವ ನಿರ್ಮಿಸಿದನು ಶ್ರೀಕೃಷ್ಣ ಆ ಪುರದ ವರ್ಣನೆ ಮಾಡಲು ಮೂರುಕಣ್ಣವನಿಗೆ ವಶವಲ್ಲ. ನಾಲ್ಕಾರು ಮೋರೆಯವರಿಗೆ ವಶವಲ್ಲ ದ್ವಾರದ್ವಾರಗಳಿಗೆ ತಳಿರು ತೋರಣ

"ಮೇರುವಿಗೆ ಪೊನ್ನ ಕಲಶವು ಕೋಲೆ
ಮೇರುವಿಗೆ ಪೊನ್ನ ಕಲಶ ಕನ್ನಡಿ ಮನೋ
ಹಾರವಾಗಿರುವುದು ಸಟೆಯಲ್ಲ"

ಎಂದು ಬಣ್ಣಿಸುವರು. ಶ್ರೀಭೂರಮಣನಾದ ಶ್ರೀಕೃಷ್ಣರ ಮನೆಗೆ ಸುಭದ್ರೆ ಮುಯ್ಯ ತರುತ್ತಾಳೆ. ಗಜಪುರ ಭೂಭುಜಕೆಲ್ಲ ಬರುತ್ತಾರೆ ಎಂದು ತನ್ನ ತೌರುಮನೆಗೆ ಮುಯ್ಯ ತರುವ ಸುಭದ್ರೆಯ ಜೊತೆಗೆ ಪಾಂಡವರು ಹೊರ ಹೊರಟಾಗ ದಿಕ್ಪಾಲಕರು ಕೂರ್ಮೆಯಿಂದ ಬರುತ್ತಾರೆ."ಎಂದು ವರ್ಣಿಸುತ್ತಾ ದಿಕ್ಪಾಲಕರ ವಾಹನ ಸತಿಯರೊಡನೆ ಅವರವರ ವಾಹನ ವೇರಿ ಬರುವುದನ್ನು ವರ್ಣಿಸುತ್ತಾರೆ.

"ಇಂದ್ರನು ತನ್ನ ಗಜೇಂದ್ರನೇರಿಕೊಂಡು
ಮಂದಗಮನೆ ಶಚಿ ಸಹಿತಲಿ,
ಹುತು ಭುಜ ತನ್ನ ಸತಿ ಸ್ವಾಹಾದೇವಿಯ ಕೂಡಿ

ಅತಿಶಯದಿಂ ಮೇಷ ವೇರುತ್ತ ಎಲ್ಲರೂ ಶ್ರೀಧರನ ಮನೆಗೆ ಬರುತ್ತಾರೆ.

"ಕಸವೆಲ್ಲ ಪರಿಮಳ ಕೆಸರೆಲ್ಲ ಶ್ರೀಗಂಧ
ಬಿಸರುಹನೇತ್ರನ ಅರಮನೆಯೊಳಗೆಲ್ಲ
ಕುಸುಮದ ಮಳೆಯು ಗರೆವುದು"

ಶ್ರೀವಿಷ್ಣುವಿನ ಅರಮನೆಯು ಕುಸುಮಗಳ ಮಳೆ ಇದ್ದಂತೆ ನೆಮ್ಮದಿಯ ನೆಲೆ ಎಂಬಂತೆ ವರ್ಣನೆಯು "ಕಸವ ಹೊಡೆವ ಕೈ ಕಸ್ತೂರಿ ನಾತವು" ಎಂಬ ಜನಪದ ನುಡಿಯನ್ನು ನೆನಪಿಸುತ್ತದೆ.

ಹೆಣ್ಣುಮಕ್ಕಳಿಗೆ ತಾಯಿ ಮತ್ತು ತವರುಮನೆ ಎಂದರೆ ವಿಪರೀತ ಪ್ರೀತಿ, ವ್ಯಾಮೋಹ ತವರು ಮನೆಗೆ ಬಂದ ಸುಭದ್ರೆಗೆ ತನ್ನನ್ನು ಒಳಕರೆಯುವವರು ಯಾರು ಇಲ್ಲದ್ದು ನೋಡಿ ಮನಸ್ಸು ತಳಮಳಗೊಳ್ಳುವುದು.

ಅತ್ತಿಗೆ ಮನೆಗೆ ಬಂದು ಹತ್ತು ಘಳಿಗಾಯಿತು
ಎತ್ತ ಓಡುದಲೋ ನಮಗಂಜಿ
ಇತ್ತ ಬಾ ಆಭಯ ಕೊಡುತ್ತೇವೆ ಎಂದು

ತಮಗೆ ಹೆದರಿ ಅತ್ತಿಗೆ ಎಲ್ಲಿ ಹೋದಳೋ ಹೆದರಬೇಡ ಬಾ ಎಂದು ಕರೆಯುವರು. ಆದರೂ ರುಕ್ಮಿಣಿ ಹೊರಗೆ ಬರಲಿಲ್ಲ. ಅಣ್ಣನ ಮನೆಗೆ ಬಂದು ಸಣ್ಣ ಹೊತ್ತಾಯಿತು ಅಣ್ಣನ ಮಡದಿ ಬರಲಿಲ್ಲ. ಸತ್ಯಭಾಮೆ ಇನ್ನು ಬಾ ಅಭಯ ಕೊಡುತ್ತೇವೆ ಎನ್ನುವಳು. ಕೊನೆಗೆ ಅಪಮಾನ, ಅಳುಕು ತಡೆಯದೆ

ತಾಯಿ ಮನೆಗೆ ಬಂದು ಬಹಳ ಹೊತ್ತಾಯಿತು
ತಾಯಿ ಸೊಸೇರು ಬರಲಿಲ್ಲ ನಮಗಂಜಿ
ಬಾಯಿ ಬಿಡುತಾರೆ ಬಳಗೆಲ್ಲ
ಎಂದಾಗ ರುಕ್ಮಿಣಿಯು

ಮಂದಹಾಸಬೀರುತ್ತ ಬಂದು ಬಂದವರು ಯಾರ ಮನೆಯವರು ಎಂದು ವಿಚಾರಿಸುವಳು.

ಶುಂಡಾಲ ನಗರದ ಪಾಂಡು ಭೂಪರ ಸೊಸೆ
ಗಂಡುಗಲಿ ಪಾರ್ಥನರ್ಧಾಂಗಿ, ಮುಯ್ಯವ
ಕೊಂಡು ಬಂದಳು ತಿರುಗಿಸು

ಎಂದು ಹಸ್ತಿನಾಪುರದ ಅರಸು ಪಾಂಡು ರಾಜನ ಸೊಸೆ ಪಾರ್ಥನ ಹೆಂಡತಿಯಾದ ಸುಭದ್ರೆ ಮುಯ್ಯ ತಂದಿರುವ ಅದನ್ನು ತಿರುಗಿಸು ಎನ್ನುವಳು. ಕೋಲು ಪದ ಈಗ ಮುಯ್ಯ ತರುವ ಹಾಡಿನ ರೂಪ ತಾಳುವುದು ಆಗ ರುಕ್ಮಿಣಿಯು ಬಾರವ್ವಾ ಸುಭದ್ರ ವಿರವ್ವ ಸೋಪಾನ, ತೋರವ್ವ ನಿನ್ನ ವಚನ ಎನ್ನುತ್ತ ಅವಳಕ್ಕೆ ಹಿಡಿಯುವಳು.ಇದರಿಂದ ಮುನಿದ ಸುಭದ್ರೆಯು ಸಾಮಾನ್ಯ ಸ್ತ್ರೀಯಂತೆ ರುಕ್ಮಿಣಿಯನ್ನು.

"ಓಡಿ ಬಂದವಳು ಒಳಗೆ ಸೇರಿಕೊಂಡು
ನೋಡುವಳೆ ನಮ್ಮ ನುಡಿಸುವಳೆ ನಮ್ಮಣ್ಣ
ಮಾಡಿದ ಮೋಹ ತಲೆಗೇರಿತು" ಎಂದು

ಹಂಗಿಸುವಳು ಇದರಿಂದ ಕುಪಿತಗೊಂಡ ರುಕ್ಮಿಣಿಯು "ಅತ್ತೆಯ ಮಗಳೆಂದು ಹತ್ತೆಂಟು ತಾಳಿದೆ ಉತ್ತರ ನಿಮಗೊಂದು ಕೊಡುತ್ತೇನೆ ಚಿತ್ತಕ್ಕೆ ಹೋಗಿ ನೆಡುವಂತೆ ಎಂದು ಎಚ್ಚರಿಸಿದ ರುಕ್ಮಿಣಿಯು

ಅಣ್ಣನ ವಂಚಿಸಿ ಓಡಿ ಬಂದವಳೆಂದು
ಕಣ್ಣಿಲಿ ನೋಡಿ ಕರೆಯುವಳೆ
ಎನ್ನ ನೀ ನುಡಿವೆ ಸುಭದ್ರೆ ಕೇಳು ನಾ
ಸಂನ್ಯಾಸಿಯೊಡನೆ ಬರಲಿಲ್ಲ ಕೋಲೆ

ಎಂದು ಕಳ್ಳ ಸನ್ಯಾಸಿಯಾಗಿ ಬಂದ ಅರ್ಜುನ ನೊಂದಿಗೆ ಓಡಿಹೋದ ಸುಭದ್ರೆಯನ್ನು ಅಣಕಿಸುವಳು. ಅತ್ತಿಗೆ ನಾದಿನಿಯರ ಕಟು ಮತ್ತು ಸಲುಗೆಯ ಸಂಬಂಧವನ್ನು ತುಂಬಾ ಸ್ವಾರಸ್ಯವಾಗಿ ದಾಸರು ಚಿತ್ರಿಸಿದ್ದಾರೆ.





# ಶ್ರೀ ಪ್ರಸನ್ನವೆಂಕಟದಾಸರ ಸಂಕ್ಷಿಪ್ತ ಜೀವನ ಚರಿತ್ರೆ

– ಡಾ|| ಸುಭಾಸ್ ಕಾಖಂಡಕಿ

79754 42458

**ಪೀಠಿಕೆ:**

ಹರಿದಾಸ ಸಾಹಿತ್ಯದಲ್ಲಿ ಎರಡನೆಯ ಕಾಲಘಟ್ಟದಲ್ಲಿ ಬಂದ ಉತ್ತರ ಕರ್ನಾಟಕದ ಹರಿ -ದಾಸರೆಂದರೆ ಮಹಿಪತಿದಾಸರು ಹಾಗೂ ಪ್ರಸನ್ನ ವೆಂಕಟದಾಸರು. ಪ್ರಸನ್ನ ವೆಂಕಟದಾಸರ ಜೀವನವನ್ನು ಅವಲೋಕಿಸಿದರೆ, ಅದು ಸಾಮಾನ್ಯ ಜನರ ಜೀವನಕ್ಕೆ ಹತ್ತಿರವಾದದ್ದು. ವಿದ್ಯೆ, ಬುದ್ಧಿ ಇಲ್ಲದೆ ದನ ಕಾಯುತ್ತಿದ್ದ ಒಬ್ಬ ಅಜ್ಞಾನಿ ಬಾಲಕ, ಬಾಲ್ಯದಲ್ಲಿ ತಾಯಿ ಬಿತ್ತಿದ "ನಿನ್ನ ಕಾಪಾಡುವ ನಿಜವಾದ ತಾಯಿ-ತಂದೆ ಎಂದರೆ ತಿರುಪತಿಯ ತಿಮ್ಮಪ್ಪ,ಅವನನ್ನು ನಂಬಿ ಭಜಿಸು" ಎಂಬ ಸಮರ್ಪಣ ಭಾವದ ಭಕ್ತಿ ಬೀಜವನ್ನು ತಮ್ಮ ಅಂತರಂಗದಲ್ಲಿ ಬೆಳೆಸಿ ಕೇವಲ ತಮ್ಮ ಸರ್ವಸಮರ್ಪಣಭಾವದ ಭಕ್ತಿಯ ಪರಾಕಾಷ್ಠತೆಯಿಂದ ಶ್ರೀನಿವಾಸನನ್ನು ಸಾಕ್ಷಾತ್ಕರಿಸಿ ಕೊಂಡು, ಅವನಿಂದಲೇ ಅಂಕಿತ ಪಡೆದು, ಅಪರೋಕ್ಷ ಜ್ಞಾನಿಗಳಾದ ಏಕೈಕ ಹರಿದಾಸರೆಂದರೆ ಶ್ರೀ ಪ್ರಸನ್ನ ವೆಂಕಟದಾಸರು. ಇವರು ದೇವಾಂಶರು, ರುದ್ರಾಂಶರೆಂದು ಪ್ರತೀತಿ.

ಶ್ರೀಪ್ರಸನ್ನವೆಂಕಟದಾಸರು ವಿಜಯದಾಸರ ಸಮಕಾಲೀನ ದಾಸರಾದರೂ ಅವರಿಗಿಂತ ವಯಸ್ಸಿನಲ್ಲಿ ಹಿರಿಯರು.ಅವರ ಸಮಕಾಲೀನ ಹರಿದಾಸರಾದ ವಿಜಯದಾಸರು, ಗೋಪಾಲದಾಸರು, ಗುರುಗೋಪಾಲ-ವಿಠಲದಾಸರು, ಮೋಹನದಾಸರು, ಶ್ರೀಪ್ರಸನ್ನವೆಂಕಟದಾಸರ ಸಾಹಿತ್ಯ,ಜ್ಞಾನಸಂಪತ್ತು, ಆಧ್ಯಾತ್ಮಿಕ ಸಾಧನೆಗಳನ್ನು ಹಾಡಿ ಹೊಗಳಿ ಕೀರ್ತನೆ ರಚಿಸಿರುವುದು ಕಂಡು ಬರುತ್ತದೆ. ಶ್ರೀಗುರುಗೋಪಾಲವಿಠ್ಠಲದಾಸರು, ಶ್ರೀಪ್ರಸನ್ನವೆಂಕಟದಾಸರು ಕೇವಲ ಶ್ರೀಮದ್ಭಾಗವತವೊಂದೇ ಕನ್ನಡಿಕರಿಸಿದ ಕೃತಿ ರಚಿಸಿಲ್ಲ, ಶ್ರೀಮಧ್ವಾಚಾರ್ಯರು ರಚಿಸಿದ ಮೇರು ಕೃತಿಯಾದ "ಅನುವ್ಯಾಖ್ಯಾಯನ"ವನ್ನು ಕೂಡ ಕನ್ನಡದಲ್ಲಿ ಕಾವ್ಯ ರೂಪದಲ್ಲಿ ರಚಿಸಿದ್ದಾರೆಂದು ದಾಖಲಿಸಿದ್ದಾರೆ.ಅಲ್ಲದೇ ಶ್ರೀಪ್ರಸನ್ನವೆಂಕಟರು ಕೂಡ ಪುರಂದರದಾಸರಂತೆ "ಠಾಯಿ" ಪ್ರಕಾರದ ಕೃತಿಗಳನ್ನು ರಚಿಸಿದ್ದಾರೆಂಬುದನ್ನು ತಮ್ಮ ಕೀರ್ತನೆಯಲ್ಲಿ ಸ್ಪಷ್ಟವಾಗಿ ದಾಖಲಿಸಿದ್ದಾರೆ.ದ್ವಿತೀಯ ಘಟ್ಟದ ಇನ್ನೊಬ್ಬ ಪ್ರಮುಖ ಹರಿದಾಸರಾದ ಶ್ರೀ ಜಗನ್ನಾಥ ದಾಸರು ಕೂಡ ತಮ್ಮ "ಸಾಣಿಗಿರಿ ಪ್ರಾಣನಾಥ" ಎಂಬ ಕೀರ್ತನೆಯಲ್ಲಿ ದಾಸರ ಆಧ್ಯಾತ್ಮಿಕ ಸಾಧನೆಯನ್ನು ಉಲ್ಲೇಖಿಸಿದ್ದಾರೆ.

ದಾಸ ಚತುಷ್ಟೆಯರಲ್ಲಿ ಮೂವರು ಹರಿದಾಸರು ಹಾಗೂ ಅವರ ಕಾಲದ ಬಹುತೇಕ ಪ್ರಮುಖ ಹರಿದಾಸರು ಶ್ರೀಪ್ರಸನ್ನವೆಂಕಟದಾಸರ ಸಾಹಿತ್ಯ. ಸಾಧನೆ,ಆಧ್ಯಾತ್ಮಿಕ ತೇಜಸ್ಸು ಮುಂತಾದವುಗಳನ್ನು ಮುಕ್ತಕಂಠದಿಂದ ಸ್ತುತಿ ಮಾಡಿದಾಗ, ದಾಸರ ಸಾಹಿತ್ಯದ, ಜ್ಞಾನದ ಆಳ ಹಾಗೂ ಅವುಗಳ ಗುಣಮಟ್ಟ ಯಾವರೀತಿಯದಿತ್ತು ಎಂದು ಊಹಿಸಬಹುದು ಶ್ರೀಪ್ರಸನ್ನವೆಂಕಟದಾಸರು ಸಾವಿರಾರು ಕೃತಿಗಳನ್ನು ರಚಿಸಿದ್ದಾರೆಂಬ ಉಲ್ಲೇಖವಿದೆ ಆದರೆ ಇಂಥಾ ಮಹಾನ್ ದಾಸರ ಒಟ್ಟು ರಚಿಸಿದ ಕೃತಿಗಳು 450 ಇದ್ದದ್ದು, ಇತ್ತೀಚೆಗಿನ ಸಂಶೋ ಧನೆಯಿಂದ 693 ಆಗಿವೆ. ವಿಶೇಷ ಕೃತಿಗಳು 6 ಇದ್ದದ್ದು 20 ಆಗಿವೆ. ಈಗ ದೊರಕಿರು ವುದು ಅವರು ರಚಿಸಿದ ಒಟ್ಟು ಕೃತಿಗಳ ಕಾಲುಭಾಗಕ್ಕೂ ಕಡಿಮೆ ಇರಬಹುದು. ಆದರೂ ಅವರ ಸಮಕಾಲೀನ ಹರಿದಾಸರು ಕಂಡು ಹೊಗಳಿದ ಇನ್ನೂ ನೂರಾರು ಶಾಸ್ತ್ರ ಪ್ರಮೇಯಗಳುಳ್ಳ ಅಮೂಲ್ಯ ಕೃತಿಗಳು ದೊರಕಿಲ್ಲವೆಂದು ಖೇದದಿಂದ ಹೇಳಬೇಕಾಗಿದೆ. ಈ ನಿಟ್ಟಿನಲ್ಲಿ ಗಂಭೀರವಾದ ಸಂಶೋಧನೆ ನಡೆಯಬೇಕಾಗಿದೆ.

ಇಂಥ ವೈಶಿಷ್ಟ್ಯ ಪೂರ್ಣವಾದ ಸಾಹಿತ್ಯವನ್ನು ನೀಡಿದ ಈ ಉತ್ತರ ಕರ್ನಾಟಕದ ಶ್ರೀಪ್ರಸನ್ನವೆಂಕಟದಾಸರ ಸಂಕ್ಷೀಪ್ತಿ ಜೀವನ ಚರಿತ್ರೆಯನ್ನು ಅರಿಯೋಣ.:

ಸುಮಾರು ಕ್ರಿ.ಶ. 1680 ಶಾಲಿವಾಹನಶಕೆ 1602 ರಲ್ಲಿ ಬಾಗಲಕೋಟೆಯಲ್ಲಿ ಕಾಶ್ಯಪ ಗೋತ್ರಜರಾದ ಶ್ರೀನರಸಪ್ಪಯ್ಯ ಮತ್ತು ಲಕ್ಷ್ಮೀಬಾಯಿ ಎಂಬ ಸಾತ್ವಿಕ ದಂಪತಿಗಳಿಗೆ ಜನಿಸಿದ. ಇವರ ಮೊದಲಿನ ಹೆಸರು ವೆಂಕಣ್ಣ. (ವೆಂಕಟೇಶ) ಶ್ರೀವಿಜಯದಾಸರು, ಗೋಪಾಲದಾಸರು ಹಾಗೂ ಹೆಳವನಕಟ್ಟೆ ಗಿರಿಯಮ್ಮ ಅವರು ಇವರ ಸಮಕಾಲೀನರೆಂದು, ತಿಳಿದು ಬರುತ್ತದೆ. ತಂದೆ ತಾಯಿಯ ಮರಣದಿಂದ, ಬಾಲಕ ವೆಂಕಣ್ಣನಿಗೆ ವಿದ್ಯೆಯ ಸಂಪತ್ತು ಸಿಗಲಿಲ್ಲ. ವೆಂಕಣ್ಣಗೆ ಬರುವ ಪಾಠವೆಂದರೆ ಅವರ ತಾಯಿ ಇದ್ದಾಗ ಅವಳು ಹೇಳುವ ದಾಸರ ಕೀರ್ತನೆಗಳು, ವೆಂಕಟೇಶ ಪಾರಿಜಾತದ ಹಾಡುಗಳು, ವೆಂಕಟೇಶ ಸ್ತೋತ್ರ "ಯಾರಿಲ್ಲದವರಿಗೆ ಭಗವಂತನಿದ್ದಾನೆ"ಎನ್ನುವ ಸುಸಂಕೃತವಾದ ಮಾತುಗಳು. ತಂದೆ ತಾಯಿ ಹೋದ ಮೇಲೆ ಅಣ್ಣನ ಲಗ್ನವಾಗಿ ಅತ್ತಿಗೆ ಮನೆಗೆ ಬಂದ ಮೇಲೆ ವೆಂಕಣ್ಣನ ಜೀವನಯಾತನಾಮಯವಾಗಿತ್ತು. ಕೂತರೆ ನಿಂತರೆ ಅತ್ತಿಗೆಯಿಂದ

ಹೀನಾಯವಾದ ಮಾತುಗಳು. "ಕೂಳಿಗೆ ದಂಡ ನಿನ್ನ ಹೊಟ್ಟೆ ದಂಡ" ಎನ್ನುವ ಮಾತುಗಳು ಗರಗಸದಂತೆ ಅವನ ಮನಸ್ಸನ್ನು ಘಾಸಿಗೊಳಿಸುತ್ತಿದ್ದವು. ಅತ್ತಿಗೆ ಇವನನ್ನು ವಿದ್ಯೆ ಕಲಿಸಲು ಗುರುಕುಲಕ್ಕೆ ಕಳಿಸದೆ ದನಕಾಯಲು ಕಳಿಸು ತ್ತಿದ್ದುದು ಅವನಿಗೆ ಹೀನಾಯವೆನಿಸುತ್ತಿತ್ತು. ಬೇಸಿಗೆ ಕಾಲದಲ್ಲಿ ಒಂದು ದಿನ ಬಾಯಾರಿ ಕುಡಿಯಲು ಮಜ್ಜಿಗೆಯನ್ನು ಕೇಳಿ ದಾಗ ಅತ್ತಿಗೆ ಆಡಿದ ಕರ್ಣ ಕಠೋರ ನುಡಿಗಳು ವೆಂಕಟೇಶನ ಮನಸ್ಸಿನ ಮೇಲೆ ಅಪಾರವಾದ ಆಘಾತವನ್ನುಂಟು ಮಾಡಿ ದವು. ಇನ್ನು ಮುಂದೆ ಅವರ ಆಶ್ರಯದಲ್ಲಿ ಇರುವುದು ಬೇಡ ವೆನಿಸಿ ಮನೆಬಿಟ್ಟು ತಿರುಪತಿ ಕಡೆಗೆ ಹೊರಟನು. ಭಕ್ತರ ಗುಂಪೊಂದರ ಜೊತೆಗೆ ಇನ್ನು ಶ್ರೀನಿವಾಸನ ಪಾದವೇ ಗತಿ ಎಂದು ನಂಬಿ ಹೊರಟ ಸಜ್ಜನ ಭಕ್ತರ ಸತ್ ಸಂಗದಿಂದ ಅವನ ಮನಸ್ಸು ಇನಿಷ್ಟು ಪಕ್ವವಾಗಿ ಭಕ್ತಿಯ ಪರಾಕಾಷ್ಠೆ ಯನ್ನು ತಲುಪಿತು.


ಪಯಣದ ಮೇಲೆ ಪಯಣ ಮಾಡುತ್ತ ಬೆಟ್ಟವನ್ನೇರಿ ಸ್ವಾಮಿ ಪುಷ್ಕರಣಿಯಲ್ಲಿ ಮಿಂದು, ಗುಡಿಗೋಪುರ ಕಾಣು ತ್ತಿದ್ದಂತೆ ವೆಂಕಣ್ಣನಲ್ಲಿ ಅದ್ಯಾವುದೋ ಭಕ್ತಿಯ ಪ್ರಭೆ ಹೃದಯ ದಲ್ಲಿ ಜಾಜ್ವಲವಾಗಿ ಬೆಳಗುತ್ತಿದ್ದಂತೆ ಭಗವಂತನ ಆ ದಿವ್ಯ ಪಾದದ ದರ್ಶನ ಮಾಡಬೇಕೆಂಬ ಅನಂತ ಆಶೆಯಲ್ಲಿ ಗರ್ಭ ಗುಡಿಯೊಳ ಬಂದು ಆ ದಿವ್ಯ ಪಾದಗಳನ್ನೇ ನೋಡುತ್ತಾ ಅವನ ಅನಂತ ಆನಂದಮಯ ಮೂರ್ತಿಯನ್ನೇ ನೋಡುತ್ತ ಪ್ರಪಂಚವನ್ನೇ ಮರೆತು "ಶ್ರೀಹರಿ ಅನಾಥ ರಕ್ಷಕ ನಿನ್ನ ಪಾದದ ಮೇಲೆ ಬಿದಿದ್ದೇನೆ" ಎಂದು ಸರ್ವಸಮರ್ಪಣ ಭಾವದಿಂದ ಹರಿಯ ಪಾದಗಳನ್ನು ಗಟ್ಟಿಯಾಗಿ ಹಿಡಿದು ವಿಸ್ಮರಣೆಯಲ್ಲಿ ಮಲಗಿದ್ದ ವೆಂಕಣ್ಣನ ಅನನ್ಯ ಭಕ್ತಿಗೆ ಮೆಚ್ಚಿ ಶ್ರೀನಿ ವಾಸನು ಅವರ ನಾಲಿಗೆಯ ಮೇಲೆ "ಪ್ರಸನ್ನವೆಂಕಟ"ನೆಂಬ ಬೀಜಾ ಕ್ಷರ ಬರೆದು ಅಂಕಿತ ಕೊಟ್ಟ ಮೇಲೆ, ಜ್ಞಾನಿಯಾದ ಅವರು ಭಗವಂತನ ಅಪ್ಪಣೆಯಂತೆ ತಿರುಗಿ ಬಾಗಲ ಕೋಟೆಗೆ ಬಂದು ಗಲಗಲಿಯ ಮುದ್ಗಲಾಚಾರ್ಯರಿಂದ ವೇದ ಶಾಸ್ತ್ರಗಳನ್ನು ಅಧ್ಯಯನ ಮಾಡಿ, ಬದುಕಿನುದ್ದಕ್ಕೂ ಭಗವಂತನನ್ನು ಸಾಕ್ಷಾ ತ್ಕರಿಸಿಕೊಂಡು, ಸಾವಿರಾರು ಕೀರ್ತನೆಗಳು, ಉಗಾಭೋಗ, ಸುಳಾದಿ, ಮುಂಡಿಗೆ ಹಾಗೂ ವಿಶೇಷ ಕೃತಿಗಳನ್ನು ರಚಿಸಿ ಊರಿಂದ ಊರಿಗೆ ಸಂಚಾರ ಮಾಡಿ ಧರ್ಮ ಜಾಗೃತಿ ಮಾಡಿ ದರು.

ಅಪರೋಕ್ಷ ಜ್ಞಾನಿಗಳು, ರುದ್ರಾಂಶ ಸಂಭೂತರೂ ಆದ ಇವರಿಂದ ಭಗವಂತನು ಅನೇಕ ಪವಾಡ ಸದೃಶ ಲೀಲೆ ಗಳನ್ನು ಮಾಡಿಸಿದನು. ಉದಾಹರಣೆಗೆ: ಒಂದೇ ದಿನ. ಒಂದೇ ಸಮಯ ದಲ್ಲಿ ಭಕ್ತರಿಬ್ಬರು ಬಂದು ತಮ್ಮ ಮನೆಯಲ್ಲಿ ದೇವತಾ ಕಾರ್ಯ ವಿದೆಯೆಂದೂ ಅದಕ್ಕಾಗಿ ತೀರ್ಥ ಪ್ರಸಾದಕ್ಕಾಗಿ ಬರಬೇಕೆಂದು ಹೇಳಿದ್ದರು. ಇಬ್ಬರೂ ಬೇರೆ ಬೇರೆಯಾಗಿ, ಬೇರೆ ಸಮಯದಲ್ಲಿ ಬಂದು ಕರೆದಿದ್ದರು. ಭಗವಂತನ ಧ್ಯಾನದಲ್ಲಿದ್ದ ದಾಸರು ತಮ್ಮದೇ ಆದ ಭಗವದ್ ಚಿಂತನೆಯಲ್ಲಿ ಇಬ್ಬರ ಔತಣಕ್ಕೂ ಒಪ್ಪಿದರು. ಆದರೆ ಮರುದಿನ. ಇಬ್ಬರ ಮನೆಯಲ್ಲೂ ಒಂದೇ ಸಮಯದಲ್ಲಿ ತೀರ್ಥಪ್ರಸಾದ ಸ್ವೀಕರಿಸಿದ್ದು ಊರಿನ ಜನಗಳಲ್ಲಿ ಅಚ್ಚರಿ ಉಂಟುಮಾಡಿತು. ಇದೊಂದು ಭಗವಂತನ ಲೀಲೆಯೇ. ಭಗವಂತ ತನ್ನಿಂದ ಇಂತಹ ಪವಾಡ ಮಾಡಿಸಿ ದ್ದಾನೆ ಎಂಬುದು ದಾಸರ ಸಮರ್ಪಣಭಾವದ ಪ್ರತೀಕವೇ ಸರಿ. ಅದರಂತೆ ಅಡವಿಯಲ್ಲಿ ಶಿಷ್ಯರೊಡನೆ ಸಂಚಾರ ಮಾಡುವಾಗ ಎದುರಿಗೆ ಬಂದ ಕ್ರೂರ ಹುಲಿಯನ್ನು ಕಂಡ ಶಿಷ್ಯರು ಭಯದಿಂದ ನಡುಗಿದ್ದು ಆಗ ದಾಸರು ಕ್ರೂರ ಹುಲಿಗೆ ಶ್ರೀತುಳಸಿಗಿರಿ ಆಂಜನೇಯನ ಅಂಗಾರ ಹಚ್ಚಿ ಸಾಧುಪ್ರಾಣಿ ಮಾಡಿ ಅದರ ಬೆನ್ನ ಮೇಲೆ ದೇವರ ಪೆಟ್ಟಿಗೆ ಇಟ್ಟಾಗ ಅದು ಸಾಧು ಪ್ರಾಣಿಯಂತೆ ಅವರೊಡನೆ ನಡೆದದ್ದು ದಾಸರ ಮಹಿಮಾನ್ವಿತೆಗೆ ಸಾಕ್ಷಿಯಾಗಿದೆ. ಅದರಂತೆ ಇವರು ನುಡಿಯುವ ಮಾತುಗಳು ಸತ್ಯವಾಗಿ ಖರೇಬಾಯಿ ದಾಸರೆಂದು ಪ್ರಸಿದ್ಧವಾದದ್ದು. ಅಂತ್ಯ. ಕಾಲಕ್ಕೆ ಬಾಲರೂಪಿ ಯಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿ ಕೊಂಡು ಬಾದಾಮಿಯು ಅಗಸ್ತ್ಯ ತೀರ್ಥದ ದಡದಲ್ಲಿ ಕ್ರಿ.ಶ. 1752 ಶಾಲಿವಾಹನ ಶಕೆ 1674 ಭಾದ್ರಪದ ಶುಕ್ಲಪಕ್ಷ ಏಕಾದಶಿ ಯಂದು ಮುಕ್ತಿಯ ಮಾರ್ಗ ಹಿಡಿದರು.

ಶ್ರೀಪ್ರಸನ್ನವೆಂಕಟದಾಸರ ಸಾಹಿತ್ಯ ಸೃಷ್ಟಿ ವಿಪುಲ ವಾಗಿದೆ. ಇದುವರೆಗೆ ಇವರ ಪ್ರಸನ್ನವೆಂಕಟ, ಪ್ರಸನ್ನ ವೆಂಕಟ ಕೃಷ್ಣ ಅಂಕಿತದಲ್ಲಿ 693 ಕೃತಿಗಳು ದೊರಕಿವೆ. "ಶ್ರೀ ಪ್ರಸನ್ನ ವೆಂಕಟರ ಭಾಗವತ"ವೆಂದೇ ಪ್ರಸಿದ್ಧವಾದ ದಶಮ ಸ್ಕಂಧ ಭಾಗವತ - ಪೂರ್ವಾರ್ಧ, ಸೃಷ್ಟಿಪ್ರಕ್ರಣ ಸತ್ಯಭಾಮಾ ವಿಲಾಸ, "ಕನ್ನಡದ ವಿಷ್ಣುಸಹಸ್ರ ನಾಮ" ವೆಂದು ಪ್ರಸಿದ್ಧವಾದ ಸಮಸ್ತ ಮಣಿಗಣ ಷಟ್ ಚರಣ ಪದ್ಯಮಾಲಾ, ನಾರಾಯಣ ಪಂಜರ ಭೇದಮುಕ್ತಾವಲಿ ಮುಂತಾದ 19 ದೀರ್ಘಕೃತಿಗಳು 10 ಸುಳಾದಿಗಳು 18 ಉಗಾಭೋಗಗಳು, 3 ಮುಂಡಿಗೆಗಳು ಹಾಗೂ 643 ಕೀರ್ತನೆಗಳು. ಇವರ ಕೃತಿಗಳನ್ನು 1. ದೇವತಾ ಸ್ತುತಿ, 2.ಗುರುಸ್ತುತಿ 3.ಆತ್ಮನಿವೇದನೆ 4. ಲೋಕನೀತಿ, 5.ತತ್ವ ವಿವೇಚನೆ,6.ಸಂಪ್ರದಾಯಕ ಕೀರ್ತನೆಗಳು. 7. ಇತರ ಕೀರ್ತ ನೆಗಳು ಎಂಬ ವಿಭಾಗದಲ್ಲಿ ವಿಂಗಡಿಸಬಹುದು. ಹರಿದಾಸ ಸಾಹಿತ್ಯದ ದ್ವಿತಿಯ ಘಟ್ಟದ ದಾಸರಲ್ಲಿ ಶ್ರೀ ಪ್ರಸನ್ನವೆಂಕಟ ದಾಸರು ಪ್ರಮುಖರು ಇವರೂ ಕೂಡ ದಾಸ ಚತುಷ್ಟಯ ರಂತೆಯೇ ಶ್ರೇಷ್ಠ ಹರಿದಾಸರೆಂಬುದು ವಿಜಯದಾಸರು, ಗೋಪಾಲದಾಸರು. ಮೋಹನದಾಸರು,ಗುರುಗೋಪಾಲ ವಿಠಲದಾಸರು ಮತ್ತು ಜಗನ್ನಾಥದಾಸರು ಇವರ ಆಧ್ಯಾತ್ಮಿಕ ತೇಜಸ್ಸು ಜ್ಞಾನ ಸಂಪತ್ತನ್ನು ಹಾಡಿ ಹೊಗಳಿ ರಚಿಸಿದ ಕೀರ್ತನೆ ಗಳಿಂದ ಕಾಣಬಹುದು. ತಮ್ಮ ಅಸಾಧಾರಣ ವ್ಯಕ್ತಿತ್ವ ಮತ್ತು ಕೃತಿಗಳಿಂದ ಇವರು ಅವಿಸ್ಮರಣೀಯರಾಗಿದ್ದಾರೆ.



# ಪುಸ್ತಕ ವಿಮರ್ಶೆ




**ಪುಸ್ತಕದ ಹೆಸರು :** ಭಕ್ತರ ಪ್ರಾಣ ಮುಖ್ಯಪ್ರಾಣ

**ಲೇಖಕರು :** ಡಾ|| ಪ್ರಕಾಶ್ ಕೆ.ನಾಡಿಗ್

**ದೂರವಾಣಿಸಂಖ್ಯೆ:** 9945511411

**ಪುಟಗಳು :** 1000

**ಬೆಲೆ :** ರೂ.150/-

**ಮುದ್ರಣ:** ಅನ್ನಪೂರ್ಣ ಪ್ರಿಂಟರ್ಸ್
ಶಿವಾಜಿನಗರ, ರಾಜಾಜಿನಗರ,
ಬೆಂಗಳೂರು-560010

"ಭಕ್ತರ ಪ್ರಾಣ ಮುಖ್ಯ ಪ್ರಾಣ" (ಭಾರತೀಯ ಸಂಸ್ಕೃತಿಯಲ್ಲಿ ಹನುಮ) ಡಾ|| ಪ್ರಕಾಶ್ ಕೆ.ನಾಡಿಗ್ ಅವರ ಕೃತಿ.

ಹನುಮಂತನ ಜನನ, ಪ್ರತೀ ಹನುಮ ದೇವಾಲಯದ ಸ್ಥಾಪನೆ, ಹಿನ್ನೆಲೆ, ಕಾಲ ಸ್ಥಳಮಹಿಮೆ... ಮೊದಲಾದ ವಿವರ ವೈಶಿಷ್ಟ್ಯಗಳಿವೆ. ಲೇಖಕರು ತಮ್ಮ ಅಭಯ್ ರಾಘವಿ ಪ್ರಕಾಶನ ತುಮಕೂರು (೯೪೪೫೫೧೧೪೧೧) ವತಿಯಿಂದ ಈ ಕೃತಿಯನ್ನು ಪ್ರಕಟಿಸಿದ್ದಾರೆ. ಶ್ರೀಹನುಮ ಭಕ್ತರಿಗೆ ತುಂಬ ಅಚ್ಚುಮೆಚ್ಚಾಗುವ ಕೃತಿಯಿದು "ಹನುಮ ವಿಶ್ವಕೋಶ' ಎಂದೇ ಕರೆಯಬಹುದು. ಡಾ|| ಅರಳುಮಲ್ಲಿಗೆ ಪಾರ್ಥಸಾರಥಿ ಅವರು ತಮ್ಮ ಮುನ್ನುಡಿಯಲ್ಲಿ ಹನುಮ ದೇವಾಲಯಗಳು ಜನರಿಗೆ ದುಃಖ, ಭಯ, ಕಳವಳ, ಕಾತುರ, ಅನುಮಾನ, ತೊಂದರೆ, ನಿರಾಶೆ, ಆತಂಕಗಳನ್ನು ನಿವಾರಿಸಿ, ವಿಶ್ವಾಸ, ಭರವಸೆ, ನಂಬಿಕೆ, ಧೈರ್ಯ, ಆತ್ಮಸ್ಥೈರ್ಯಗಳನ್ನು ಉದ್ದೀಪಿಸುವ ಚೈತನ್ಯ ಮಂದಿರ ಗಳಾಗಿವೆ. ಹನುಮನ ಕುರಿತು ಸಮಗ್ರ ವಿವರಗಳಿರುವ ಈ ಕೃತಿಯು ಸಂಗ್ರಹಯೋಗ್ಯ ಹನುಮಂತನ ಜನನ ಕರ್ನಾಟಕದಲ್ಲಿಯೇ ಆಗಿದೆ ಎಂಬುದಕ್ಕೆ ಸಾಕ್ಷ್ಯ ಹೇಳಿದೆ. ಇದೊಂದು ಮೌಲಿಕ ಸಾರಸ್ವತ ಸೇವೆ' ಎಂದಿದ್ದಾರೆ.

ಈ ಕೃತಿಯಲ್ಲಿ ೩೪ ಮುಖ್ಯ ಅಧ್ಯಾಯಗಳಿವೆ. ಇವುಗಳಲ್ಲಿ ಹನುಮಂತನ ಉಗಮ ಮತುತ ವಿಕಾಸ, ಆಂಜನೇಯನ ಜನನ ಅಂಜನಾದ್ರಿಯಲ್ಲೇ ಎಂಬುದಕ್ಕಿರುವ ಪುರಾಣೋಲ್ಲೇಖ, ಭವಿಷ್ಯೋತ್ತರ ಹಾಗೂ ಬ್ರಹ್ಮಾಂಡ ಪುರಾಣದಲ್ಲಿ ಅಂಜನಾದ್ರಿಯ ಉಲ್ಲೇಖ, ಹನುಮಂತನ ಬಗ್ಗೆ ಬಹಳ ಜನರಿಗೆ ತಿಳಿಯದಿರುವ ವಿಶೇಷ ಸಂಗತಿಗಳು.ಬ್ರಹ್ಮನಿಗೆ ಗೌರವ ನೀಡಿದ ಹನುಮ, ಗೀತೋಪದೇಶ ಕೇಳಿದ ಹನುಮ, ಹನುಮನಿಗೆ ಸಂಬಂಧಿಸಿದ ಬೇರೆ ಬೇರೆ ರೀತಿಯ ಪೂಜೆ, ಅಲಂಕಾರಾದಿ, ಶ್ರೀ ವ್ಯಾಸರಾಜ ಪ್ರತಿಷ್ಠಾಪಿತ ಹನುಮ ದೇಗುಲಗಳ ವಿವರ.. ಮೊದಲಾದುವು ತುಂಬ ಸ್ವಾರಸ್ಯಕರವಾಗಿದೆ. ಹನುಮಭಕ್ತರು ಓದಲೇ ಬೇಕಾದ ಕೃತಿಯಿದು.

ಇಲ್ಲಿನ ಅಧ್ಯಾಯಗಳಲ್ಲೆಲ್ಲ ಮುಖ್ಯವಾದುದು ಕರ್ನಾಟಕದಲ್ಲಿರುವ ೪೮ ಜಾಗೃತ ಹನುಮಕ್ಷೇತ್ರಗಳ ದರ್ಶನ, ಮಹತ್ವ ಹಾಗೂ ವಿಶೇಷತೆ ಎಂಬ ಭಾಗ. ಲೇಖಕರು ನಮ್ಮನ್ನು ಈ ೪೮ ಹನುಮಕ್ಷೇತ್ರಗಳಲ್ಲೂ ಸುತ್ತಾಡಿಸಿ ಹನುಮ ದರ್ಶನದಿಂದ ಪಾವನತೆ ಅನುಭವಿಸುವಂತೆ ಮಾಡಿದ್ದಾರೆ. ಅಂಜನಾದ್ರಿಯ ಆಂಜನೇಯ, ಮಂತ್ರಾಲಯದ ಬಳಿಯ ಪಂಚಮುಖಿ ಆಂಜನೇಯ ಹಂಪಿಯ ಯಂತ್ರೋದ್ಧಾರಕ ಹನುಮ,ಕುರಂಕೋಟೆಯ ದೊಡ್ಡ ಕಾಯಪ್ಪ,ಗಂಗೂರಿನ ಉದ್ದಾಮಾಂಜನೇಯ, ಗುಬ್ಬಿಯಲ್ಲಿನ ವಿದ್ಯಾಂಜನೇಯ, ಶ್ರೀಗಿರಿಪುರದ ಪ್ರಸಾದ ಆಂಜನೇಯ, ಅಡ್ಡೂರಿನ ಶ್ರೀಮುಖ್ಯ ಪ್ರಾಣ, ಬೆಲಗೂರಿನ ಶ್ರೀವೀರ ಪ್ರತಾಪ ಆಂಜನೇಯ, ಬಂಗಾರಮಕ್ಕಿಯ ಶ್ರೀವೀರಾಂಜನೇಯ, ಗೂಳೂರಿನ ಶೂಲದ ಆಂಜನೇಯ, ಅರಸಿನದ ಹಳ್ಳಿಯ ಕಂಬದ ಆಂಜನೇಯ, ಗಿರಿನಗರದ ಕಾರ್ಯಸಿದ್ಧಿಹನುಮ, ಕನಕಪುರದ ಹೊಳೆ ಆಂಜನೇಯ, ಬೈರಸಂದ್ರದ ಮುಖ್ಯಪ್ರಾಣ, ನುಗ್ಗಿಕೇರಿಯ ಬಲಭೀಮಹನುಮ, ದೊಡ್ಡಬಳ್ಳಾಪುರದ ನೆಲದಾಂಜನೇಯ, ಶಿವಮೊಗ್ಗದ ಶ್ರೀಕೋಟೆ ಆಂಜನೇಯ, ಪಾವಗಡದ ಮುಖ್ಯಪ್ರಾಣ, ಬ್ಯಾಟರಾಯನಪುರ ಗಾಳಿ ಆಂಜನೇಯಸ್ವಾಮಿ... ಮೊದಲಾದ ೪೮ ಹನುಮ ದೇಗುಲಗಳ ದರ್ಶನದಿಂದ ಮನ ಪುನಿತ, ಬದುಕು ಪಾವನ.

ಡಾ|| ಪ್ರಕಾಶ್ ಕೆ. ನಾಡಿಗ್ ಅವರ ಈ 'ಭಕ್ತರ ಪ್ರಾಣ ಮುಖ್ಯಪ್ರಾಣ' ಓದುತ್ತಿದ್ದಂತೆ ನಾವು ಹನುಮಲೋಕದಲ್ಲಿ ವಿಹರಿಸಬಹುದು. ಹನುಮ ತೋರಿದ ಬಗೆಬಗೆಯ ಅಸಾಮಾನ್ಯ ಕಾರ್ಯಗಳನ್ನು ನೆನೆಯಬಹುದು. ಓದುತ್ತಲೇ ಹನುಮನಿಗೆ ನಮನಗಳ ಸಲ್ಲಿಸಬಹುದು. ಡಾ|| ನಾಡಿಗ್ ಅವರ ಹನುಮಕ್ಷೇತ್ರದರ್ಶನ ಕಾರ್ಯ ಅಸಾಧಾರಣವಾದುದು ಈ ಕೃತಿ ಓದುವಾಸೆ ಮೂಡಿದರೆ ಲೇಖಕರ ೯೮೪೫೫೭೯೭೮೯ ಮೊ. ಸಂಖ್ಯೆಗೆ ಕರೆ ಮಾಡಬಹುದು. ಹನುಮಧ್ಯಾನ ಮಾಡುತ್ತ ವಿಶೇಷಾನುಭೂತಿಯಿಂದ ಧನ್ಯರಾಗಬಹುದು.

# ಸಂಸ್ಕೃತ ಕಲಿಯೋಣ...!!

## एकादशः पाठः

### ಹನ್ನೊಂದನೆಯ ಪಾಠ

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ
ನಿರ್ವಹಣೆ:- ಮಹಾ ಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ

1. बालकः = ಬಾಲಕ 2. इव = ಇಲ್ಲಿ 3. स्नानं = ಸ್ನಾನವು 4. ब्राह्मणः = ಬ್ರಾಹ್ಮಣ ಅಥವಾ ವಿಪ್ರ

5. खलु = ಹೀಗೆಯೇ 6. स्नानानि = ಸ್ನಾನದಿಂದ 7. अनुजः = ತಮ್ಮ 8. अहो = ಕೇಳಿರಿ

9. भोजनं = ಭೋಜನ

### ಪ್ರಶ್ನೆ

1. सर्वे ब्राह्मणाः तत्र भोजनं कुर्वन्ति?
2. वयं अत्र भोजनं कुर्मः।
3. यूयं कुत्र स्नानं कुरुथ?
4. सर्वे बालकाः तत्र न सन्ति?
5. अत्र एकः अपि भोजनं न करोति।
6. सः बालकः इवास्ति ?
7. एते स्नानं कुर्वन्ति खलु।
8. न कुर्वन्ति।
9. किमर्थम्?
10. ते बालकाः इव सन्ति।

### ಉತ್ತರ

1. ಎಲ್ಲ ಬ್ರಾಹ್ಮಣರು ಅಲ್ಲಿ ಭೋಜನ ಮಾಡುತ್ತಿದ್ದಾರೆ.
2. ನಾವೆಲ್ಲರೂ ಅಲ್ಲಿ ಭೋಜನವನ್ನು ಮಾಡಿದೆವು.
3. ತಾವೆಲ್ಲರೂ ಎಲ್ಲಿ ಸ್ನಾನವನ್ನು ಮಾಡಿದ್ದೀರಿ?
4. ಎಲ್ಲ ಬಾಲಕರು ಅಲ್ಲಿ ಏಕೆ ಇಲ್ಲ?
5. ಇಲ್ಲಿ ಯಾರೊಬ್ಬರು ಭೋಜನವನ್ನು ಮಾಡುವುದಿಲ್ಲ
6. ಆ ಬಾಲಕ ಇಲ್ಲಿರುತ್ತಾನೆಯೇ ?
7. ಈ ಎಲ್ಲ ಬಾಲಕರು ಸ್ನಾನವನ್ನು ಮಾಡುತ್ತಾರಲ್ಲವೋ
8. ಮಾಡಿರುವುದಿಲ್ಲ
9. ಯಾತಕ್ಕಾಗಿ
10. ಅವರೆಲ್ಲ ಬಾಲಕರು ಇಲ್ಲಿಯೇ ಇದ್ದಾರೆ.

### ಪ್ರಶ್ನೆ

1. ಎಲ್ಲ ಬ್ರಾಹ್ಮಣರು ಎಲ್ಲಿದ್ದಾರೆ?
2. ಅವರೆಲ್ಲರೂ ಸ್ನಾನ ಮಾಡುತ್ತಿದ್ದಾರೆ.
3. ಇಂದು ಅಲ್ಲಿ ಏನಿದೆ?
4. ಏನೂ ಕೂಡ ಇಲ್ಲ
5. ಕೆಲವು ಬಾಲಕರು ಅಲ್ಲಿ ಭೋಜನವನ್ನು ಮಾಡುತ್ತಾರೆ.
6. ನಾವೆಲ್ಲರೂ ಇಲ್ಲಿಯೇ ಸ್ನಾನವನ್ನು ಮಾಡೋಣ
7. ಇಲ್ಲಿ ಎಷ್ಟು ಜನ ಬಾಲಕರಿದ್ದಾರೆ?
8. ಬಾಲಕರೆಲ್ಲರೂ ಇಲ್ಲಿಯೇ ಇದ್ದಾರೆ.
9. ತಾವೆಲ್ಲರೂ ಸ್ನಾನವನ್ನು ಏಕೆ ಮಾಡಿಲ್ಲ?
10. ಕೇಳಿರಿ! ತಾವೆಲ್ಲ ಬಾಲಕರೆಲ್ಲರೂ ಅಲ್ಲಿ ಎಲ್ಲಿ ಭೋಜನವನ್ನು ಮಾಡುತ್ತೀರಿ?

### ಉತ್ತರ

1. सर्वे ब्राह्मणाः कुत्रासन्?
2. ते स्नानं कुर्वन्ति।
3. अत्र अद्य किमस्ति?
4. किमपि नास्ति।
5. केचन बालकाः तत्र भोजनानि कुर्वन्ति।
6. वयं सर्वे अत्र स्नानं कुर्मः।
7. अत्र कति बालकाः सन्ति?
8. बालकाः सर्वे अत्रैव सन्ति।
9. यूयं स्नानं न कुरुथ किम्!
10. अहो! यूयं बालकवत् तत्र कुतः भोजनानि कुरुथ?

# ರಂಗವೊಲಿದ ಶ್ರೀ ಜಗನ್ನಾಥದಾಸರು



– ಶ್ರೀಧರ ರಾಯಸಂ
98453 27129

ದಾಸಪಂಥ ನಿರೂಪಿಸಿರುವಂತೆ ಜಗನ್ನಾಥದಾಸರ ಮೂಲ ರೂಪ ಪ್ರಹ್ಲಾದ ರಾಜನ ತಮ್ಮ ಸಹ್ಲಾದ ಎಂದು ಪ್ರತೀತಿ. ಸುಧಾಂತ ವೇದಾಂತಗಳ ಸಂಸ್ಕೃತ ಭಾಷೆಯ ಪಾಂಡಿತ್ಯದ ಜೊತೆಗೆ, ಕನ್ನಡ ಭಾಷೆಯಲ್ಲೂ ಪ್ರಗಲ್ಭ ಪಾಂಡಿತ್ಯ ಪಡೆದ ಶ್ರೀಜಗನ್ನಾಥದಾಸರು, ಕನ್ನಡಕ್ಕೆ ಅಮೂಲ್ಯ ಕೊಡುಗೆ ಎನ್ನಬಹುದು. ಮಧ್ವಸಿದ್ಧಾಂತದ ಮಹಿಮೆಯನ್ನು ದೇಶದ ಉದ್ದಗಲ ಹರಡಿದ ಮಾನ್ವಿಮುನಿಪುಂಗವ ಶ್ರೀಜಗನ್ನಾಥದಾಸರು.

ಹರಿದಾಸ ಸಾಹಿತ್ಯ ಪ್ರಚಾರ ಮೊದಲು ನರಹರಿತೀರ್ಥರಿಂದ ಪ್ರಾರಂಭಗೊಂಡು,ಜಯತೀರ್ಥರು,ಶ್ರೀಪಾದರಾಜರು, ಶ್ರೀವ್ಯಾಸರಾಜರು, ಶ್ರೀವಾದಿರಾಜರು,ಪುರಂದರದಾಸರು, ಕನಕದಾಸರು, ವೈಕುಂಠದಾಸರು ಮುಂತಾದವರು ಭಕ್ತಿ ಕೀರ್ತನೆಗಳನ್ನು ರಚಿಸಿ ದಾಸಸಾಹಿತ್ಯದ ವ್ಯಾಪ್ತಿ ಹೆಚ್ಚಿಸಲು ಕಾರಣರಾದರು. ಶ್ರೀರಾಘವೇಂದ್ರ ಸ್ವಾಮಿಗಳ ನೇತೃತ್ವದಲ್ಲಿ ಮತ್ತೊಮ್ಮೆ ಬೆಳಗಿ, ಸಂಗೀತ ಕ್ಷೇತ್ರಕ್ಕೆ, ಕನ್ನಡ ಭಾಷೆಗೆ ಮಹೋನ್ನತ ಪ್ರಾಧಾನ್ಯತೆ ದೊರಕಿತು. ಇದರ ಸ್ಫೂರ್ತಿಯಲ್ಲಿ ವಿಜಯದಾಸರು, ಪ್ರಸನ್ನ ವೆಂಕಟದಾಸರು ಮೋಹನದಾಸರ ಶಿಷ್ಯ. ಪರಂಪರೆ ಬೆಳೆಯಿತು ಗೋಪಾಲದಾಸರು, ವಿಜಯದಾಸರ ಶಿಷ್ಯ ವರ್ಗದಲ್ಲಿ ಪ್ರಧಾನವೆನಿಸಿದರೆ ಇವರಿಬ್ಬರ ಕರುಣೆಯ ಕೂಸು ಶ್ರೀಜಗನ್ನಾಥದಾಸರು! ಸಾಹಿತ್ಯ, ಸಂಗೀತ, ಆಧ್ಯಾತ್ಮಿಕ ತ್ರಿವೇಣಿ ಸಂಗಮದ ಹರಿದಾಸ ಸಾಹಿತ್ಯ ಧುರೀಣ ಶ್ರೀಜಗನ್ನಾಥದಾಸರು ಕರ್ನಾಟಕಕ್ಕೆ ಮತ್ತು ಕನ್ನಡ ಭಾಷೆಗೆ ಅಪ್ರತಿಮ ಕೊಡುಗೆ ಎಂದು ಹೇಳಬಹುದು.

ದಾಸಚತುಷ್ಟಯದಲ್ಲಿ ಕೊನೆಯವರಾಗಿ, ಪುರಂದರದಾಸರು, ವಿಜಯದಾಸರು, ಗೋಪಾಲದಾಸರ ಅನುಗ್ರಹಕ್ಕೆ ಪಾತ್ರರಾಗಿ ಜಗನ್ನಾಥದಾಸರು ರಾಯಚೂರು ಜಿಲ್ಲೆ ಮಾನ್ವಿತಾಲೂಕಿನ ಬ್ಯಾಗವಟ್ಟಿ ಎಂಬ ಗ್ರಾಮದಲ್ಲಿ ಜನಿಸಿದರು. ನರಸಪ್ಪ ಮತ್ತು ಲಕ್ಷ್ಮಮ್ಮನವರು ಬಹು ಕಾಲ ತಿರುಪತಿಯ ಶ್ರೀನಿವಾಸನನ್ನು ಸೇವಿಸಿದ ಫಲ, ಶ್ರೀನಿವಾಸ ಎಂಬ ಮಗು ಬ್ಯಾಗವಟ್ಟಿಯಲ್ಲಿ ಕೀಲಕನಾಮ ಸಂವತ್ಸರ ಶ್ರಾವಣ ಶುದ್ಧ ಬಿದಿಗೆ ಕ್ರಿ.ಶ. 1727 ರಲ್ಲಿ ಜನಿಸಿತು. ಶ್ರೀನಿವಾಸ ಆಶು ಕವಿಯಾಗಿ,ವಿವಿಧ ಶಾಸ್ತ್ರಗಳಲ್ಲಿ ಪಾಂಡಿತ ಪಡೆದು ಶ್ರೀನಿವಾಸಾಚಾರ್ಯ ಎಂಬ ಹೆಸರಾದರು. ಮುಂದೆ ಬಲ ರಾಮಾಚಾರ್ಯರು (ವರದೇಂದ್ರ ತೀರ್ಥರು) ಇವರ ವಿದ್ಯಾ ಗುರುಗಳಾಗಿ ಅನೇಕ ಸಂಸ್ಕೃತ ಗ್ರಂಥಗಳ ಅಧ್ಯಯನ ಮಾಡಿಸಿದರು. ಅಧ್ಯಯನ ಕ್ಷೇತ್ರ ಮಂತ್ರಾಲಯವಾಗಿದ್ದು ವಿಶೇಷ. ಉತ್ತರಾಧಿ ಮಠದ ಶ್ರೀಸತ್ಯಬೋಧತೀರ್ಥರಿಗೂ ತುಂಬಾ ಪ್ರಿಯರಾಗಿದ್ದರು.

ತಾರುಣ್ಯದಲ್ಲಿ ಪಂಡಿತರಾಗಿ ಕನ್ನಡ ಭಾಷೆ ಕರತಳಾಮಲಕ ಮಾಡಿಕೊಂಡು ಅನೇಕ ಕೃತಿಗಳನ್ನು ರಚಿಸಿದರು.ಒಮ್ಮೆ ಪ್ರಾರಬ್ಧಕರ್ಮದ ಫಲವಾಗಿ,ವಿಜಯದಾಸರಿಗೆ ಅಪಚಾರ ಮಾಡಿ ಶ್ರೀನಿವಾಸಾಚಾರ್ಯರು ಭಯಂಕರ ಉದರಶೂಲಿ, ಅಪಮೃತ್ಯುಯೋಗ ಎದುರಿಸಬೇಕಾಯಿತು. ಅಪಾರ ಪಶ್ಚಾತ್ತಾಪಪಟ್ಟು ವಾಯುದೇವರ ಸೇವೆ ಮಾಡಿ ಅವರ ಮಾರ್ಗದರ್ಶನ ಪಡೆದು ಪರಿಹಾರಕ್ಕೆ ವಿಜಯದಾಸರಲ್ಲೇ ಕ್ಷಮೆಯಾಚಿಸಿದರು. ವಿಜಯದಾಸರ ಆದೇಶದಂತೆ ಅವರ ಶಿಷ್ಯರಾದ ಗೋಪಾಲದಾಸರಿಂದ ರೋಗ ಪರಿಹಾರ ಮತ್ತು ಅವರಿಂದ 40ವರ್ಷ ಆಯುರ್ದಾನ ಪಡೆದಿದ್ದು ಇತಿಹಾಸವಾಯಿತು. ಪೂರ್ಣಾಯುಷ್ಯ ಪಡೆದು ಶ್ರೀನಿವಾಸಾಚಾರ್ಯರು ಹರಿದಾಸನಾಗುವ ಹೆಬ್ಬಯಕೆಯಿಂದ ಗೋಪಾಲದಾಸರ ಆದೇಶದಂತೆ ಪಂಢರಪುರಕ್ಕೆ ಪ್ರಯಾಣಿಸಿದರು. ಶ್ರೀನಿವಾಸಾಚಾರ್ಯರು ಪಂಢರಪುರದ ಹತ್ತಿರ ಹರಿಯುವ ಚಂದ್ರಭಾಗಾ (ಭೀಮಾ) ನದಿಯಲ್ಲಿ ಸ್ನಾನ ಮಾಡುವಾಗ " ಜಗನ್ನಾಥವಿಠಲ" ನಾಮಾಂಕಿತ ಶಿಲಾಫಲಕ ಅಂಕಿತಪ್ರಾಪ್ತಿಯಾಯಿತು. ಅಂದಿನಿಂದ ಜಗನ್ನಾಥದಾಸರೆಂದು ಪ್ರಖ್ಯಾತಿಯಾದರು. ತದನಂತರ ಪಾಠ ಪ್ರವಚನ, ಅನೇಕ ಕೃತಿ ರಚನೆ, ತೀರ್ಥಯಾತ್ರೆ, ಅರ್ತರ ಉದ್ಧಾರ ತತ್ವ

ಪ್ರಸಾರಕ್ಕೆ ತಮ್ಮ ಜೀವನವನ್ನೇ ಮುಡುಪಿಟ್ಟರು ಪೂರ್ಣಾಯುಷ್ಯಕ್ಕೆ ಕಾರಣರಾದ ಗೋಪಾಲ ದಾಸರನ್ನು ಭಕ್ತಿಯಿಂದ ಹೀಗೆ ಕೊಂಡಾಡಿದ್ದಾರೆ.

ಗೋಪಾಲದಾಸರಾಯ ನಿನ್ನಯ ಪಾದ
ನಾಪ್ಪೊಂದಿದೆನು ನಿಶ್ಚಯ
ಈ ಪೀಡಿಸುವ ತ್ರೈತಾಪಗಳೋಡಿಸಿ
ಕೈ ಪಿಡಿದೆನ್ನನು ನೀ ಪಾಲಿಸನುದಿನ...

ಈ ಕೀರ್ತಿನೆಯಲ್ಲಿ ತಮ್ಮ ಪೂರ್ವ ಚರಿತ್ರೆ ಹೇಳಿಕೊಂಡು ಗುರುಗಳನ್ನು ಸ್ಮರಿಸಿದ್ದಾರೆ ಜಗನ್ನಾಥದಾಸರು.

ಒಮ್ಮೆ ಮಾನ್ವಿ ತಾಲ್ಲೂಕಿನ ಚೀಕಲಪರವಿಯ ಅಶ್ವತ್ಥ ವೃಕ್ಷದ ಬಳಿ ವಿಜಯದಾಸರು ಬಾದರಾಯಣದಾಸರೇ ಮೊದಲಾದ ದಾಸರಿಗೆ ಉಪದೇಶ ಮಾಡುತ್ತಾ ಕುಳಿತ್ತಿದ್ದರು. ವಿಜಯದಾಸರ ಮೋಹದ ಮಗ ಮೋಹನದಾಸರು ಗಾನ ಮಾಡುತ್ತಿದ್ದರು. ಆ ಸಮಯಕ್ಕೆ ಗೋಪಾಲ ದಾಸರು ಜಗನ್ನಾಥದಾಸರೊಡಗೂಡಿ, ಈ ಹರಿದಾಸ ಗೋಷ್ಠಿಗೆ ಬಂದರು ಜಗನ್ನಾಥ ದಾಸರು ಈ ಅಪೂರ್ವಸಂಗಮ ನೋಡಿ ತಕ್ಷಣ ಮತ್ತು ಪ್ರಥಮ ಕೀರ್ತನೆ ಅಲ್ಲೇ ರಚಿಸಿದರು.

ರತುನ ದೊರಕಿತು ಎನ್ನ ಜನ್ಮ ಪ
ವಿತ್ರವಾಯಿತು ಈ ದಿನದಿ ನಾ
ಯತ್ನಗೈಯುತ ಬರುತಿರಲು ಪ್ರ
ಯತ್ನ ವಿಲ್ಲದೆ ವಿಜಯರಾಯರೆಂಬ...

ವಿಜಯದಾಸರು ಜಗನ್ನಾಥದಾಸರನ್ನು ಹತ್ತಿರ ಕರೆದು ಆದರಿಸಿ ಪಕ್ಕದಲ್ಲಿ ಕೂಡಿಸಿಕೊಂಡರು. ಶ್ರೀಪಾದರಾಜರು, ವ್ಯಾಸರಾಜರು, ವಾದಿರಾಜರು, ಪುರಂದರದಾಸರು ನಿಮ್ಮಲ್ಲಿ ನಿಂತು ಮಹಾಲೋಕ ಕಾರ್ಯ ನಡೆಸುವರು. ಗೋಪಾಲದಾಸರು ಮಾಡಿದ ಆಯುರ್ದಾನವು ಲೋಕಸೇವೆಗೆ ಸಹಕಾರಿಯಾಗಿದೆ. ನಿಮ್ಮ ದುಃಖ ಪ್ರಾರಬ್ಧ ತೀರಿ ಸುಖ ಪ್ರಾರಬ್ಧ ಆರಂಭವಾಗಿದೆ. ರಾಜಾಧಿರಾಜರು ಪೂಜಿಸುವರು ಮಠಾಧಿಪತಿಗಳು ಮನ್ನಿಸುವರು. ಜನರು ನಿಮ್ಮ ದಾಸಾನುದಾಸರಾಗುವರು ನಿಮ್ಮ ವಾಕ್ಕಿನಲ್ಲಿ ಜಯಲಕ್ಷ್ಮಿಯು ನೆಲೆಸಿ ಕೀರ್ತಿ ತರುವಳು ಎಂದು ತುಂಬು ಹೃದಯದಿಂದ ವಿಜಯದಾಸರು ಜಗನ್ನಾಥದಾಸರನ್ನು ಕೊಂಡಾಡಿದ ದೃಶ್ಯ ಅಪೂರ್ವ .

ರಂಗೋಲಿಯಲ್ಲಿ ಚಿತ್ರ ರಚಿಸುವ ಕಲೆ ಅದರಲ್ಲಿ ಹರಿಯನ್ನು ಅನುಸಂಧಾನ ಮಾಡುವ ಜಗನ್ನಾಥದಾಸರಿಗೆ "ರಂಗೋಲಿದಾಸ" ಎಂದು ಕರೆಯುತ್ತಿದ್ದರು. ಉತ್ತರಾಧಿಮಠದ ಸತ್ಯಬೋಧತೀರ್ಥರು, ಸತ್ಯಸಂಧ ತೀರ್ಥರು, ಸತ್ಯ ವೀರತೀರ್ಥರು. ಸತ್ಯಧರ್ಮತೀರ್ಥರು, ವರದೇಂದ್ರ ತೀರ್ಥರು, ಧೀರೇಂದ್ರ ತೀರ್ಥರು, ಭುವನೇಂದ್ರಿ ತೀರ್ಥರು, ವ್ಯಾಸತತ್ವಜ್ಞರು, ಮಾದನೂರು ವಿಷ್ಣು ತೀರ್ಥರು ಮೊದಲಾದ ಸಮಕಾಲೀನ ಮಹನೀಯರ ಪ್ರೀತಿಗೆ ಪಾತ್ರರಾಗಿದ್ದರು ಶ್ರೀಜಗನ್ನಾಥದಾಸರು.

ಪ್ರಾಣೇಶದಾಸರು ಕರ್ಜಗಿ ಶ್ರೀದವಿಠಲದಾಸರು, ಮೋಹನ ವಿಠಲ ದಾಸರು, ಭೀಮೇಶವಿಠಲದಾಸರು, ಅಭಿನವ ಜನಾರ್ದನ ವಿಠಲದಾಸರು ಇವರ ಪ್ರಮುಖ ಶಿಷ್ಯರು. ಮೈಸೂರಿನ ದಿವಾನ್ ಪೂರ್ಣಯ್ಯನವರು ಜಗನ್ನಾಥ ದಾಸರಿಗೆ ವಿಶೇಷ ಸೇವೆಸಲ್ಲಿಸಿದ ಮಹನೀಯರು ಜಗನ್ನಾಥದಾಸರು ಪಂಢರಪುರ, ತಿರುಪತಿ, ನಿವೃತ್ತಿ ಸಂಗಮ ಮಂತ್ರಾಲಯ ಶ್ರೀರಂಗ, ಉಡುಪಿ, ಸುಬ್ರಹ್ಮಣ್ಯ, ಸೋದೆ, ಹರಿಹರ, ಹರಪನಹಳ್ಳಿ ಹಂಪೆ, ನವವೃಂದಾವನ ಮೊದಲಾದ ಸ್ಥಳಗಳನ್ನು ಸಂದರ್ಶಿಸಿದರು. ಉತ್ತರ ಭಾರತದ ತೀರ್ಥ ಕ್ಷೇತ್ರಗಳು, ಗಂಗಾ ಯಮುನಾ ನದಿಗಳ ವರ್ಣನೆ ಇವರಿಂದ ರಚಿತವಾದ ಕೃತಿಗಳು ಆಧಾರವಾಗಿವೆ. ತಿಮ್ಮಣ್ಣದಾಸರು, ದಾಮೋದರದಾಸರು ಇವರ ಪುತ್ರರು. ದಾಮೋದರ ದಾಸರು ಇವರ ಕೃತಿಗಳ ಲಿಪಿಕಾರರಾಗಿದ್ದು ವಿಶೇಷ ಮಾನ್ವಿಯಲ್ಲಿ ಇವರು ಪೂಜಿಸುತ್ತಿದ್ದ ದೇವರ ಪ್ರತಿಮೆಗಳು ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನ ಪಾಠ ಪ್ರವಚನಕ್ಕೆ ಕುಳಿತುಕೊಳ್ಳುತ್ತಿದ್ದ ಕಂಭ, ಉಪಯೋಗಿಸುತ್ತಿದ್ದ ತಂಬೂರಿ, ಚಿತ್ರಿಸಿದ ಚಿತ್ರ ಪಟಗಳು, ಸತ್ಯಬೋಧರು ಅನುಗ್ರಹಿಸಿದ ಅವರ ಪಾದುಕೆಗಳು, ಒರುಗುಮಣಿ, ಮಂತ್ರಾಕ್ಷತೆ ತಟ್ಟಿ, ಮುಮ್ಮಡಿ ಕೃಷ್ಣರಾಜ ಒಡೆಯರ್, ಮೈಸೂರು ದಿವಾನ್ ಪೂರ್ಣಯ್ಯ ಅರ್ಪಿಸಿದ ದೊಡ್ಡ ಮೇನೆ ಮೊದಲಾದವು ಗುಡಿಯಲ್ಲಿ ಸಂರಕ್ಷಿಸಲ್ಪಟ್ಟಿವೆ. ಪಂಢರಪುರದಲ್ಲಿ ದೊರಕಿದ ಜಗನ್ನಾಥವಿಠಲ ಎಂಬ ಅಂಕಿತ ಶಿಲಾಫಲಕ ಮಾನ್ವಿಯಲ್ಲಿ ಇತ್ತೆಂದು ಪ್ರತೀತಿ.

ಶ್ರೀನರಸಿಂಹ ಸುಳಾದಿ ರಚಿಸಿದ್ದು, ಬಡವರನ್ನು ಉದ್ಧಾರ ಮಾಡಿದ್ದು, ಉಡುಪಿಯಲ್ಲಿ ಮೂಕನಿಗೆ ಮಾತು ಬರಿಸಿದ್ದು ಇವರನ್ನು ಪರೀಕ್ಷಿಸಲು ಬಂದ ವಾಗ್ಮಿಯನ್ನು ಮೂಕನನ್ನಾಗಿ ಮಾಡಿದ್ದು, ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳೊಂದಿಗೆ ನೇರ ಸಂಭಾಷಣೆ ಭಾಗ್ಯ ದೊರಕಿದ್ದು ಇವರ ಪುಣ್ಯ ಪ್ರಾಪ್ತಿ ಎನ್ನಬಹುದು ಶಿಷ್ಯರಾದ ಜನಾರ್ದನ ವಿಠಲದಾಸರ ಅಪಮೃತ್ಯ ಪರಿಹರಿಸಿದ್ದು ಅನೇಕ ಇವರ ಮಹಿಮೆ ಅಪಾರ. ಮಾನ್ವಿಯಲ್ಲಿ ದೇಸಾಯಿ ಮನೆಯಲ್ಲಿ ನೆಲೆಸಿ ಪಾಠ ಪ್ರವಚನದಿಂದ ಬ್ರಹ್ಮ ರಾಕ್ಷಸ ಬಾಧೆ ಪರಿಹರಿಸಿದ್ದು ವಿಶೇಷ.

**ಜಗನ್ನಾಥದಾಸರ ಕೃತಿಗಳು:**

**ಹರಿಕಥಾಮೃತಸಾರ.**

ತತ್ವಸುವ್ವಾಲಿಗಳು, ಇನ್ನೂರಕ್ಕೂ ಹೆಚ್ಚು ಕೀರ್ತನೆಗಳು ಉಗಾಭೋಗಗಳು, ಸುಳಾದಿಗಳು, ಶ್ರೀ ಪಾದರಾಜರ ಮಧ್ವ ನಾಮ ಮತ್ತು ವರದೇಂದ್ರ ತೀರ್ಥರ ಕನ್ನಡ ತಂತ್ರಸಾರಕ್ಕೆ ರಚಿಸಿದ ಫಲಶ್ರುತಿಗಳು, ಸತ್ಯಬೋಧತೀರ್ಥರ ಪಂಚರತ್ನ ಎಂಬ ಸಂಸ್ಕೃತ ಕೃತಿ ದಾಸರ ಉಪಲಬ್ದ ಕೃತಿಗಳು. ವ್ಯಾಸ ರಾಜರು, ವಾದಿರಾಜರು, ಪುರಂದರದಾಸರ ಪ್ರೇರಣಾನುಸಾರ ಜಗನ್ನಾಥದಾಸರು ಅತ್ಯಂತ ಶ್ರೇಷ್ಠಕೃತಿ' ಹರಿಕಥಾ ಮೃತ ಸಾರ" ನಳನಾಮ ಸಂವತ್ಸರ ಪುಷ್ಯ ಶುದ್ಧ ದಶಮಿ ಕ್ರಿ.ಶ. 1796 ರಂದು ತಮ್ಮ ಇಳಿವಯಸ್ಸಿನಲ್ಲಿ ರಚಿಸಿದರು 32 ಸಂಧಿ ಯುಳ್ಳ 988 ಪದಗಳು, ಭಾಮಿನಿಷಟ್ಪದಿಯಲ್ಲಿ ಹರಿಕಥಾ ಮೃತಸಾರ ಉತ್ಕೃಷ್ಟ ಗ್ರಂಥ ರಚಿಸಿ, ವರದೇಂದ್ರ ತೀರ್ಥರಿಗೆ ತೋರಿಸಿ, ನಾರಾಯಣನಿಗೆ ಸಮರ್ಪಿಸಿದರು. ಈ ಕೃತಿಯಲ್ಲಿ ಗಂಭೀರ ನಿರೂಪಣೆ, ಪ್ರೌಢ ಚಿಂತನೆ, ಸಮಯೋಚಿತ ದೃಷ್ಟಾಂತಗಳು, ಸಮೃದ್ಧ ವಿಷಯ ಸಂಪತ್ತು, ಸರಳ ಕನ್ನಡ ಶೈಲಿ, ಲಲಿತಪದಗಳು, ಆಸ್ತಿಕ್ಯದ ಅಮೃತ ಸೇಚನ ಮಾಡುವ ಮಾಂತ್ರಿಕ ಸ್ಪರ್ಶ ಈ ಕೃತಿಯ ಪರಿಮಳವಾಗಿದೆ.

ಈ ಕೃತಿಯಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳ ಮೂರು ಅವತಾರದ ವರ್ಣನೆ ಭಕ್ತಿಯಿಂದ ಕೊಂಡಾಡಿದ್ದಾರೆ. ಬಾರೋ ರಾಘವೇಂದ್ರ ಬಾರೋ ಕಾರುಣ್ಯ ವಾರಿಧಿ ಬಾರೋ.... ಕೀರ್ತನೆ ಬಹು ಪ್ರಚಾರದಲ್ಲಿರುವುದಾಗಿದೆ.

ಇವರ ತತ್ವ ಪ್ರಸಾರಕ್ಕೆ ಮಾರುಹೋಗಿ ಅನೇಕ ದಾಸರು ಕೊಂಡಾಡಿದ್ದಾರೆ. ಪ್ರಾಣೇಶದಾಸರು, ಶ್ರೀದವಿಠಲದಾಸರು, ಗುರುಶ್ರೀಷವಿಠಲದಾಸರು, ವಿಜಯಹಯಗ್ರೀವದಾಸರು ಶ್ರೀನಿವಾಸವಿಠಲದಾಸರು, ಮನೋಹರವಿಠಲದಾಸರು ಮುಂತಾ ದವರು ಸ್ತೋತ್ರದ ಹೊಳೆಯನ್ನೇ ಹರಿಸಿದ್ದಾರೆ.

ದಾಸಚತುಷ್ಟಯದಲ್ಲಿ ಕೊನೆಯವರಾದ ಜಗನ್ನಾಥ ದಾಸರು ವೇದ ವೇದಾಂತಗಳೆಂಬ ಸಾಗರದ ಜಲವನ್ನು ಹರಿ ಕಥಾಮೃತಸಾರವೆಂಬ ಕೃತಿಯೆಂಬ ಬೊಗಸೆಯಲ್ಲಿ ತುಂಬಿಸಿ ಕೊಂಡ ಕಲಿಯುಗದ ಅಗಸ್ತ್ಯರು !! ಅನೇಕ ಶಿಷ್ಯರಿಗೆ ಮಧ್ವ ಸಿದ್ಧಾಂತದ ಮಹಿಮೆ ಉಪದೇಶಿಸಿ ಕ್ರಿ.ಶ. 1809 ರಲ್ಲಿ ಭಾದ್ರಪದ ಶುಕ್ಲ ನವಮಿಯಂದು ಮಾನ್ವಿಯಲ್ಲಿ ವೈಕುಂಠ ವಾಸಿಯಾದರು.

ಪ್ರತಿ ವರ್ಷ ಇವರ ಆರಾಧನೆ ಮಾನ್ವಿ ಮತ್ತು ಇನ್ನಿತರ ಸ್ಥಳಗಳಲ್ಲಿ ಜರುಗುತ್ತದೆ.


## ಶ್ರೀ ವೆಂಕಟೇಶ್ವರ ನಿತ್ಯ ಅನ್ನದಾನ ಟ್ರಸ್ಟ್

- ಅನ್ನದಾನ ಸಮಂ ದಾನಂ ತ್ರಿಲೋಕೇಷು ನ ವಿದ್ಯತೇ - ಎಂದರೆ ಅನ್ನದಾನದ ಸಮನಾದ ಮತ್ತೊಂದು ದಾನ ಮೂರು ಲೋಕಗಳಲ್ಲಿಯೂ ಇಲ್ಲ. ಎಲ್ಲ ದಾನಗಳಲ್ಲಿ ಅನ್ನದಾನ ಅತಿಶ್ರೇಷ್ಠ.
- 1984ರಲ್ಲಿ ತಿ.ತಿ.ದೇವಸ್ಥಾನಗಳಿಂದ ಆರಂಭವಾದ ಈ ಟ್ರಸ್ಟ್ ಪ್ರಸ್ತುತ 75 ಸಾವಿರ ಮಂದಿ ಯಾತ್ರಿಕರಿಗೆ ಭೋಜನ ಸದುಪಾಯವನ್ನು ಪ್ರತಿದಿನವೂ ತಿರುಮಲೆಯ ಅತಿದೊಡ್ಡ ಅನ್ನದಾನ ಭವನವಾದ ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನದಾನ ಸಮುದಾಯದಲ್ಲಿ ಒದಗಿಸುತ್ತಿದೆ.
- ಇಲ್ಲಿಯೇ ಅಲ್ಲದೆ, ದೇವರ ದರ್ಶನದ ಸರದಿಯಸಾಲು, ಕಾಯುವ ಕೋಣೆಗಳು, ತಿ.ತಿ.ದೇ. ಆಸ್ಪತ್ರೆಗಳ ರೋಗಿಗಳು, ತಿ.ತಿ.ದೇ. ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಗೂ ಸಹ ಉಚಿತ ಭೋಜನ ಸೌಲಭ್ಯ ದೊರೆಯುತ್ತಿದೆ.
- ಈ ಟ್ರಸ್ಟ್‌ಗೆ ಉದಾರವಾಗಿ ವಂತಿಗೆಯನ್ನು ನೀಡುತ್ತ ಈ ಧರ್ಮಕಾರ್ಯದಲ್ಲಿ ಭಾಗಿಗಳಾಗಿರಿ. ಅಧಿಕ ಪ್ರಮಾಣದ ತರಕಾರಿಗಳನ್ನು ಸಹ ಈ ಟ್ರಸ್ಟ್‌ಗೆ ವಂತಿಗೆ ನೀಡಬಹುದು.

ಇತರ ವಿವರಗಳಿಗೆ 0877 - 2264376 ಅಥವಾ 2264237 ಗೆ ಕರೆ ಮಾಡಿರಿ.

**website - www.tirumala.org**
**e-mail - svannadanamtrust@tt devasthanams.org.**

ಧಾರಾವಾಹಿ - 4

# ಆಳ್ವಾರರ ಭಗವದನುಭವ

ಡಾ॥ ಸಿ. ಎಸ್. ಊರ್ಮಿಳಾ
93804 26830

ನಮ್ಮಾಳ್ವಾರರು ಭಗವಂತನ ವೈಭವವನ್ನು ನಿಂತಲ್ಲೇ ಕುಳಿತಲ್ಲೇ ಸ್ಮರಿಸುತ್ತಾ ಹೀಗೆನ್ನುತ್ತಾರೆ.

ನಿನ್ನ ವಾರುಮ್ ಇರುನ್ದವಾರಮ್ ಕಿಡಂದವಾರಂ
ನಿನೈಪ್ಪರಿಯನ---

ಪಾವಿಯೇರ್ರೋಕ್ನು ನನ್‌ಗುರೈ ಯಾಯ್ ಉಲಹ
ಮುಂಡವೊಣ್ ಶುಡರೇ

ತಿರುವಾಯ್‌ಮೊಳಿ -5-10-6

ಶ್ರೀ ವೈಷ್ಣವ ದಿವ್ಯ ಕ್ಷೇತ್ರಗಳಲ್ಲಿ ಭಗವಂತ ಮೂರು ಭಂಗಿಯಲ್ಲಿ ಉಪಸ್ಥಿತನಾಗಿದ್ದಾನೆ. ಅವು ಯಾವುವೆಂದರೆ ನಿನ್ರಕೋಲಂ (ನಿಂತಿರುವ ಭಂಗಿ) ಅಮರ್ಂದ ಇರುಂದ ಕೋಲಂ (ಕುಳಿತಿರುವಭಂಗಿ ) ಶಯನ ಕೋಲಾಂ (ಶಯನಿಸಿರುವ ಭಂಗಿ) ಇವುಗಳ ಬಗ್ಗೆ ಆಳ್ವಾರರು ತಮ್ಮ ಪ್ರಬಂಧದಲ್ಲಿ ವರ್ಣಿಸುತ್ತಾರೆ.

ಇತ್ತೀಚೆಗೆ ನಮ್ಮಲ್ಲಿ ದಿವ್ಯ ಕ್ಷೇತ್ರಗಳಿಗೆ ಹೋಗಬೇಕು. ದೇವರನ್ನು ಕಣ್ಣಾರೆ ಕಾಣಬೇಕು. ಆ ಕ್ಷೇತ್ರಗಳ ನಿಸರ್ಗ ಸೌಂದರ್ಯವನ್ನು ಕಂಡು ಅನುಭವಿಸಬೇಕು ಎಂಬ ಆಸೆ ತೀವ್ರವಾಗಿದೆ. ಆ ಕ್ಷೇತ್ರಗಳಿಗೆ ಹೋದರೆ ನಮ್ಮಲ್ಲಿ ಒಂದು ರೀತಿಯ ನಿರ್ಮಲವಾದ ಮನಸ್ಸು ಯಾವೊಂದೂ ಸಂಸಾರದ ಗೊಂದಲದ ಬಗ್ಗೆ ಯೋಚಿಸದೆ ಆ ಭಗವಂತನನ್ನೇ ದರ್ಶನ ಮಾಡಬೇಕೆಂಬ ಕಾತರ ನಮ್ಮಲ್ಲಿ ಇರುತ್ತದೆ. ಆ ಒಂದು ಜಾಗೃತ ಮನೋಭಾವ ಹೆಚ್ಚಾಗಿದೆ. ಇದು ಒಳ್ಳೆಯದೇ ಆದರೆ ಕೆಲವರಿಗೆ ಅದು ಸಾಧ್ಯವಾಗುವುದಿಲ್ಲ. ಅಂತಹವರು ಮನೆಯಲ್ಲಿಯೇ, ಮನದಲ್ಲಿಯೇ ಭಗವಂತನನ್ನು ಧ್ಯಾನಿಸಬಹುದು. ಅಂತಹ ಅಸಾಧಾರಣ ಭಕ್ತರೂ ಸಹ ನಮ್ಮಲ್ಲಿ ಇದ್ದಾರೆ ಖಂಡಿತವಾಗಿಯೂ ಅವರಿಗೂ ಭಗವಂತನ ಕೃಪೆ ಇದ್ದೇ ಇರುತ್ತದೆ.


"ನತೇ ರೂಪಂ ನ ಚಾಕಾರಃ ನಾಯುಧಾನಿ ನ ಚಾ ಸ್ಪದಂ

ತಥಾಪಿ ಪುರಷಾಕಾರಃ ಭಕ್ತನಾಂ ತ್ವಂಪ್ರಕಾಶಸೇ"

ಎಂದು ಜಿತಂತಾಸ್ತೋತ್ರದಲ್ಲಿ ಹೇಳಿರುವಂತೆ ಎಲ್ಲ ಭಕ್ತರನ್ನು ಅವನು ಸಲಹುತ್ತಾನೆ. ಶಠಕೋಪರೆಂದು ಪ್ರಸಿದ್ಧರಾದ ನಮ್ಮಾಳ್ವಾರರು ನಾಲ್ಕು ವೇದಗಳ ಸಾರವನ್ನೆಲ್ಲಾ ಭಟ್ಟಿ ಇಳಿಸಿ ತಮಿಳು ದಿವ್ಯ ಪ್ರಬಂಧವನ್ನು ನೀಡಿದ್ದಾರೆ.

ಕುಲಶೇಖರಾಳ್ವಾರರು ಭಗವಂತನನ್ನು ಹೇಗೆ ದರ್ಶನ ಮಾಡಿದರು ಎಂಬುದನ್ನು ಮುಂದೆ ನೋಡೋಣ.

ಒಣ್‌ಪವಳ ಮೇಲ್ಕೈ ಉಲವು ತಣ್ ಪಾರ್ಕಡಲುಳ್...
...ಶೆಣ್ ಬಹಮಾಯ್ ನಿರ್ಕುಂ ತಿರುವುಡೈಯೇನ್ ಅವೇನೇ?
ಪೆರುಮಾಳ್ ತಿರುಮೊಳಿ - 4-4



ಈ ಮಾನವ ಜನ್ಮ, ದೇವರ ಕೈಂಕರ್ಯದ ಜೊತೆಗೆ ಐಹಿಕ ಭೋಗವನ್ನು ಅಪೇಕ್ಷಿಸುತ್ತದೆ. ಭಗವಂತ ಲೀಲಾಮಯ. ಆಳ್ವಾರರು ತಿರುಪತಿ ತಿಮ್ಮಪ್ಪನ ಕಟಾಕ್ಷಕ್ಕೆ ಪಾತ್ರರಾಗಲು ತಾನು ಆ ಬೆಟ್ಟದಲ್ಲಿ ಶೆಣ್ ಬಹವೃಕ್ಷ ಚಂಪಕ ವೃಕ್ಷವಾಗಿ ಜನ್ಮಪಡೆವಂತೆ ಅನುಗ್ರಹಿಸು ದೇವಾ ಎಂದು ಕೇಳಿಕೊಳ್ಳುತ್ತಾರೆ. ಯಾತ್ರಾ ಸ್ಥಳಗಳಲ್ಲಿ ದೇವಾಲಯಗಳಲ್ಲಿ ಸ್ಥಳ ವೃಕ್ಷ ಇರುತ್ತವೆ. ಚಂಪಕವೃಕ್ಷ ಪಾರಿಜಾತ ಮುಂತಾದ ವೃಕ್ಷಗಳು ಇದ್ದೇ ಇರುತ್ತವೆ. ಅನೇಕ ಮಹಾನುಭಾವರು ವೃಕ್ಷವಾಗಿ, ಬೆಟ್ಟವಾಗಿ, ಪಕ್ಷಿಗಳಾಗಿ, ಮೃಗಗಳಾಗಿ ಹೀಗೆ ವಿವಿಧ ರೂಪದಲ್ಲಿದ್ದು ಭಗವಂತನ ಸೇವೆಯನ್ನು ಮಾಡುತ್ತಿರುತ್ತಾರೆ ಎಂಬುದು



ನಂಬಿಕೆ. "ಅನೇನ ಜೀವೇನ ಆತ್ಮನಾ ಅನುಪ್ರವಿಶ್ಯ ನಾಮ ರೂಪೇ ವ್ಯಾಕರವಾಣಿ ಎಂಬುದು ಉಪನಿಷತ್ ರಹಸ್ಯ. ಇದೇ ಸೃಷ್ಟಿಕರ್ತನ ರಹಸ್ಯ ಈ ವಸ್ತು ಸಾಮಾನ್ಯವು ಕಣ್ಣಿಗೆ ಬೀಳಲೆಂದೇ ಪ್ರತಿಯೊಂದು ಜಡದಲ್ಲೂ ಒಂದೊಂದು ಅಭಿಮಾನಿ ಜೀವಾತ್ಮಗಳನ್ನು ಸೃಷ್ಟಿಸಿದ್ದಾನೆ. ಆದ್ದರಿಂದಲೇ Nature is God : Nature is a teacher ಧರ್ಮೋ ರಕ್ಷತಿ ರಕ್ಷಿತಃ - ವೃಕ್ಷೋ ರಕ್ಷತಿ ರಕ್ಷಿತಃ ಎಂಬ ಸತ್ಯವನ್ನು ಕುಲಶೇಖರರು ತಮ್ಮ ಪಾಶುರದಲ್ಲಿ ತಿಳಿಸಿದ್ದಾರೆ.

All things Bright and Beautiful
All things Great and Small
All Things Wise and Wonderful
The Good God made them all

ಎಂಬ ಆಂಗ್ಲ ಕವಿತೆಯನ್ನು ಇಲ್ಲಿ ಸ್ಮರಿಸಿಕೊಳ್ಳೋಣವೇ?

ಶೆಟಿಯಾಯ್‌ವಲ್ ವಿನೈಹಳ್ ತೀರ್ಕುಮ್ ತಿರುಮಾಲೇ ..
...ಪಡಿಯಾಯ್ ಕಿಡನ್ದು ಉನ್ ಪವಳವಾಯ್ ಕಾಣ್ಬೇನೇ

(ಪೆರುಮಾಳ್ ತಿರುಮೊಳಿ 5-9ನೇ ಪಾಶುರ)

ನಮ್ಮ ಜೀವನ ಒತ್ತಾದ ಪೊದರಾಗಿ ಅಂದರೆ ಬಿಡಿಸಿಕೊಳ್ಳಲಾಗದಷ್ಟು ಕಗ್ಗಂಟಾಗಿದೆ. ಇವೆಲ್ಲಾ ನಾವು ಮಾಡುವ ಶುಭಾ ಶುಭ ಕರ್ಮವೇ ಸರಿ ಅವು ಗಳೆಲ್ಲವನ್ನೂ ಅಂದರೆ ಪಾಪ, ಪುಣ್ಯಗಳೆಂಬ ಎರಡು ಋಣಗಳನ್ನು ಸಹಿಸುವವನು ನೀನೇ ದೇವಾ ! ಎಲೈ ವೆಂಕಟೇಶಾ ಗರುಡ, ವಿಶ್ವಕ್ಸೇನರು, ಸ್ವರ್ಗಲೋಕದ ಸುರರು ರಂಬೆಯರೂ ನಿನ್ನನ್ನು ನೋಡಲು ಪೂಜಿಸಲು ಮುತ್ತಿಕೊಂಡೇ ಇರುತ್ತಾರೆ. ಒಳಕ್ಕೂ ಹೊರಗೂ ಇವರೆಲ್ಲಾ ಸಂಚರಿಸುತ್ತಲೇ ಇರುತ್ತಾರೆ. ಅವರು ವೈಕುಂಠದಲ್ಲೂ ಸಿಗದೆ ಇರುವ ದಯೆ, ವಾತ್ಸಲ್ಯ ಸೌಶೀಲ್ಯ, ಸೌಲಭ್ಯ ಮುಂತಾದ ನಿನ್ನ ಮಹಾ ಗುಣಗಳನ್ನು ಕಂಡು ಅನುಭವಿಸುವ ಉದ್ದೇಶದಿಂದ ಆಕಾಶದಿಂದ ಇಳಿದು ಬಂದಿದ್ದಾರೆ. ಹೀಗೆ ಆ ಕೈಂಕರ್ಯ ಪರರು ಒಳಗೂ ಹೊರಗೂ ನಡೆದಾಡಿ ಬಲು ಮೆದುವಾಗಿರುವ ಗರ್ಭಗುಡಿಯ ದ್ವಾರದ ಹೊಸಲಿ ನಂತೆ ನನ್ನನ್ನು ಹುಟ್ಟಿಸು ಸ್ವಾಮಿ, ಆಗ ನಾನು ಹವಳಕ್ಕೂ ಮೆರುಗು ನೀಡುವಂತಹ ನಿನ್ನ ತುಟಿಯನ್ನು ನೋಡುತ್ತಾ ಹಗಲಿರುಳು ಕಾಲ ಕಳೆಯುತ್ತೇನೆ ಎಂದು ಕುಲಶೇಖರರು ಪ್ರಾರ್ಥಿಸುತ್ತಾರೆ. ಜಡವತ್ ಪಾರತಂತ್ರ, ಅಂತಹ ಶೇಷತ್ವವೇ ನಮಗೆ ಬೇಕು ಎಂದು ಆಶಿಸಿದ್ದಾರೆ. ಇಂದಿಗೂ ನಾವು ತಿರುಮಲೆಯ ದೇವಾಲಯದ ಗರ್ಭಗುಡಿಯಲ್ಲಿ 'ಕುಲಶೇಖರಪ್ಪಡಿ 'ಯನ್ನು ಕಾಣಬಹುದು.

ಕುಲಶೇಖರರು ಕೇರಳ ದೇಶದ ಕೋಳಿಕ್ಕೋಡು ಎಂಬ ಪ್ರಸಿದ್ಧವಾದ ನಗರದಲ್ಲಿ ಜನಿಸಿದವರು. ಇವರು ಈ ರಾಜ್ಯವನ್ನು ಆಳಿದ ಸುಪ್ರಸಿದ್ಧರಾಜ. ಅವರು ರಾಜಕಾರ್ಯ ಮುಗಿದ ನಂತರ ಪ್ರತಿ ದಿನ ರಾಮಾಯಣದ ಪ್ರವಚನವನ್ನು ಕೇಳುತ್ತಾ ಸತ್ಸಂಗದಲ್ಲಿ ತಮ್ಮ ಕಾಲವನ್ನು ಸಾರ್ಥಕಪಡಿಸಿಕೊಳ್ಳುತ್ತಿದ್ದರು. ಒಮ್ಮೆ ಕುಲಶೇಖರರು ರಾಮಾಯಣದ ಖರದೂಷಣರ ಯುದ್ಧದ ಪ್ರಸಂಗದ ಬಗ್ಗೆ ಪ್ರವಚನವನ್ನು ಕೇಳುತ್ತಿದ್ದರು. ರಾಮ ಏಕಾಂಗಿಯಾಗಿ ಯುದ್ಧ ಮಾಡಿದನೆಂಬ ಮಾತನ್ನು ಕೇಳಿದಾಕ್ಷಣ ಅದರಿಂದ ಪ್ರಭಾವಿತರಾಗಿ ತಾವೇ ಯುದ್ಧ ಸನ್ನದ್ಧರಾಗುವರು.

ಈ ಭಾವಾವೇಶವನ್ನು ಅರಿತ ಭಾಗವತರು ಖರದೂಷಣರ ಮರಣ ವೃತ್ತಾಂತವನ್ನು ತಿಳಿಸಿದರು. ಆಗ ಕುಲಶೇಖರರ ಭಾವತೀ ವ್ರತೆ ಇಳಿಯಿತು. ಹೀಗೆ ತಿರುವಾಂಕೂರಿನ ರಾಜ ಕುಲಶೇಖರಾಳ್ವಾರರ ಭಗವದನುಭವ ಅತ್ಯಂತ ರೋಚಕವಾದುದು. ಅಷ್ಟೇ ಅಲ್ಲದೆ ಭಾಗ ವತಾಪಚಾರ ಎಂಬುವುದು ಎಂದೆಂದಿಗೂ ಅಕ್ಷಮ್ಯ ಅಪರಾಧ ಎಂಬುದನ್ನು ತಮ್ಮ ಜೀವನದ ಒಂದು ಪ್ರಸಂಗ (ಘಟಸರ್ಪ ದೀವ್ಯ)ದಲ್ಲಿ ವ್ಯಕ್ತಪಡಿಸಿದ್ದಾರೆ.

(ಮುಂದುವರಿಯುವುದು)

**ಕರ್ನಾಟಕದ ವೈಷ್ಣವ ದೇವಾಲಯಗಳು**

**11**

# ಮಾವಿನಕೆರೆ ರಂಗನಾಥ ದೇವಾಲಯ



- ಕೆಂಗೇರಿ ಚಕ್ರಪಾಣಿ
94483 86886

ಮಾವಿನಕೆರೆಯು ಹೊಳೆನರಸೀಪುರ - ಹಾಸನ ರಸ್ತೆಯಲ್ಲಿದ್ದು ರಂಗನಾಥ ದೇವಾಲಯದಿಂದ ಪ್ರಸಿದ್ಧಿಯನ್ನು ಪಡೆದಿರುತ್ತದೆ. ಮಾವಿನಕೆರೆಯ ಗ್ರಾಮದಲ್ಲಿ ವೆಂಕಟರಮಣ ದೇವಾಲಯ ಹಾಗೂ ಸಮೀಪದ ಬೆಟ್ಟದ ಮೇಲೆ ರಂಗನಾಥ ದೇವಾಲಯವಿದೆ.

ರಂಗನಾಥ ದೇವಾಲಯವು ಬೆಟ್ಟದ ಮೇಲಿದ್ದು , ಬೆಟ್ಟದ ರಂಗನಾಥನೆಂದೇ ಪ್ರಸಿದ್ಧಿ. ಈ ದೇವಾಲಯವು ಮೂಲತಃ ಒಂದು ಸಣ್ಣ ಗುಹಾಂತರ ದೇವಾಲಯವಾಗಿದ್ದು, ಇಲ್ಲಿರುವ ಮೂಲ ಮೂರ್ತಿ ಗುಂಡಾದ ಸಾಲಿಗ್ರಾಮ ಶಿಲೆಯಾಗಿರುತ್ತದೆ. ಈ ದೇವಾಲಯದ ಬಗ್ಗೆ ಸ್ಥಳೀಯವಾಗಿ ಜನಜನಿತವಾದ ಐತಿಹ್ಯವಿದೆ. ಹೊಳೆನರಸೀಪುರದ ಪಾಳೆಯಗಾರನಾದ ನರಸಿಂಹನಾಯಕನಿಗೆ ಗೋವು ಬೆಟ್ಟದ ಮೇಲೆ ಪ್ರತಿದಿನವೂ ಹಾಲು ನೀಡಿ ಬರುತ್ತಿದ್ದುದು ತಿಳಿದು ಬರುತ್ತದೆ. ಆಗ ಆತನು ಅಲ್ಲಿಗೆ ಬಂದು ಪರಿಶೀಲಿಸಿದಾಗ ನಿರಾಕಾರವಾದ ಒಂದು ಗುಂಡುಕಲ್ಲು ಗೋಚರಿಸಿತಂತೆ. ಅದು ಯಾವ ಆಕಾರವನ್ನೂ ಹೊಂದದೇ ಇರುವುದರಿಂದ ಅದು ಶಿವಲಿಂಗವೋ, ವಿಷ್ಣು ಮೂರ್ತಿಯೋ ಎಂಬ ಜಿಜ್ಞಾಸೆಗೆ ಆತ ಒಳಗಾದನು. ನಂತರ ಆತ ದೇವರಿಗೆ ಪಂಥವನ್ನು ಇಟ್ಟನು. ಇದು ವಿಷ್ಣುಮೂರ್ತಿಯೇ ಆದರೆ ಎದುರಿಗೆ ಆತನ ಭಂಟ ಆಂಜನೇಯ ಮರುದಿನ ಗೋಚರಿಸಬೇಕು ಎಂದು ಸವಾಲೊಡ್ಡಿದನಂತೆ. ಅದೇ ಪ್ರಕಾರ ಆತ ಮರುದಿನ ಬಂದು ನೋಡಿದಾಗ ಎದುರಿಗೆ ಶ್ರೀ ಆಂಜನೇಯನು ಒಡ ಮೂಡಿದ್ದನಂತೆ. ಇದರಿಂದ ಸಂತೃಪ್ತನಾದ ನಾಯಕನು ದೇವಾಲಯಕ್ಕೆ ದಾನ-ದತ್ತಿಗಳನ್ನು ಬಿಟ್ಟು ಶ್ರದ್ಧಾ ಭಕ್ತಿಯಿಂದ ನಡೆದುಕೊಂಡನೆಂಬುದಾಗಿ ತಿಳಿದು ಬರುತ್ತದೆ.

ಈ ರೀತಿ ನಿರಾಕಾರವಾಗಿರುವ ಮೂರ್ತಿಗಳ ಪ್ರಾಚೀನತೆಯನ್ನು ಮೂರ್ತಿ ಶಿಲ್ಪದ ಲಕ್ಷಣದಿಂದ ತಿಳಿದು ಬರುವುದಿಲ್ಲವಾದರೂ ಪ್ರಸಿದ್ಧ ವಿದ್ವಾಂಸರಾದ ಶ್ರೀ ಎಸ್.ಕೆ. ರಾಮಚಂದ್ರ ರಾಯರ ಪ್ರಕಾರ ಮೂರ್ತಿ ಶಿಲ್ಪಾರಾಧನೆಗಿಂತಲೂ ಹಿಂದಕ್ಕೆ ಕೇವಲ ಕಲ್ಲುಗುಂಡುಗಳನ್ನು ಇಟ್ಟು ಪೂಜಿಸುವುದು ಕಂಡು ಬರುವುದರಿಂದ ಇಲ್ಲಿಯ ರಂಗನಾಥಸ್ವಾಮಿ ಬಹಳ ಪ್ರಾಚೀನವಾದುದೆಂದು ಹೇಳಬಹುದು. ಆದರೆ ಇದಕ್ಕೆ ಸೂಕ್ತ ಆಧಾರಗಳಿಲ್ಲ. ಮೂಲತಃ ಗುಹಾಂತರ ದೇವಾಲಯವಾದ ರಂಗನಾಥ ದೇವಾಲಯವನ್ನು ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ವಿಸ್ತರಿಸಲಾಗಿದೆ. ಇಲ್ಲಿ ಮತ್ತೊಂದು ಮೆಚ್ಚತಕ್ಕ ಸಂಗತಿಯೆಂದರೆ ಯಾವ ರೀತಿಯ ಬಣ್ಣಗಳನ್ನು ಬಳಸದೆ ಕೇವಲ ಶ್ವೇತ ವರ್ಣದಿಂದಲೇ ದೇವಾಲಯದ ಸೊಗಸನ್ನು ಹೆಚ್ಚಿಸಿರುವುದು. ಆಧುನಿಕ ಬಣ್ಣಗಳು ಕಣ್ಣಿಗೆ ರಾಚುತ್ತದೆಯೇ ಹೊರತು ಮನಸ್ಸಿಗೆ ಸಮಾಧಾನ ದೊರೆಯುವುದಿಲ್ಲ.

ಮಾವಿನಕೆರೆ ರಂಗನಾಥಸ್ವಾಮಿ ಮತ್ತು ಲಕ್ಷ್ಮೀ ವೆಂಕಟರಮಣ ಸ್ವಾಮಿ ಟ್ರಸ್ಟ್ ಹಾಗೂ ಸ್ಥಳೀಯ ಶಾಸಕರ ಸಹಕಾರದಿಂದ ದೇವಾಲಯವು ಅಭಿವೃದ್ಧಿಯತ್ತ ತನ್ನ ದಾಪುಗಾಲನ್ನು ಹಾಕುತ್ತಿದೆ. ಬೆಟ್ಟಕ್ಕೆ ಹೋಗಲು ಸೊಗಸಾದ ರಸ್ತೆಯಿದೆ. ಬೆಟ್ಟವನ್ನು ಪ್ರವೇಶಿಸುವ ಆರಂಭದಲ್ಲಿ ಅಂದವಾದ ಕಮಾನು



ಸ್ವಾಗತಿಸುತ್ತದೆ. ಬೆಟ್ಟದ ಮೇಲೆ ಭಕ್ತಾದಿಗಳು ಇಳಿದುಕೊಳ್ಳಲು ಸಕಲ ಸೌಲಭ್ಯಗಳ ಅತಿಥಿಗೃಹವು ನಿರ್ಮಾಣವಾಗಿದೆ. ರಂಗನಾಥ ಸ್ವಾಮಿಗೆ ನಿತ್ಯ ಪೂಜೆ, ಪಕ್ಷ ಪೂಜೆಗಳು ಬಹು ಸಾಂಗವಾಗಿ ನೆರವೇರುತ್ತದೆ. ಬೆಟ್ಟದ ಮೇಲೆ ನಿಂತು ಇಲ್ಲಿಯ ಸುತ್ತಮುತ್ತಲಿನ ಪ್ರಾಕೃತಿಕ ಸೊಬಗನ್ನು ಸವಿಯುವುದೇ ಆನಂದದಾಯಕ.



ಮಾವಿನಕೆರೆ ಗ್ರಾಮದಲ್ಲಿ ಶ್ರೀವೆಂಕಟೇಶ್ವರ ದೇವಾಲಯವಿದೆ. ಸಾಮಾನ್ಯವಾಗಿ ಹಿಂದೆ ಬೆಟ್ಟದ ಮೇಲೆ ದೇವಾಲಯವಿದ್ದಾಗ ಊರಿನಲ್ಲಿ ಉತ್ಸವ ಮೂರ್ತಿಗಳನ್ನು ದೇವರ ಆಭರಣಗಳನ್ನು ರಕ್ಷಣೆಗಾಗಿ ಪ್ರತ್ಯೇಕ ದೇವಾಲಯವನ್ನು ಈ ಊರಿನಲ್ಲಿ ಸ್ಥಾಪಿಸುವುದು ವಾಡಿಕೆ, ಹಾಗೆಯೇ ಶ್ರೀವೆಂಕಟೇಶ್ವರ ದೇವಾಲಯ ಸುಮಾರು 200 ವರ್ಷಗಳ ಕೆಳಗೆ ರೂಪುಗೊಂಡಿರುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ.

ಶ್ರೀವೆಂಕಟೇಶ್ವರ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ.ದೇವಾಲಯದ ಸುತ್ತಲೂ ವಿಶಾಲವಾದ ಪ್ರಾಕಾರವಿದೆ. ಸ್ವಾಮಿಯ ಬಲ ಭಾಗದಲ್ಲಿ ಲಕ್ಷ್ಮೀದೇವಿಗೆ ಪ್ರತ್ಯೇಕ ಗರ್ಭಗುಡಿ ಇದೆ.ದೇವಾಲಯದ ಸುತ್ತಲೂ ಭಕ್ತಾದಿಗಳು ಇಳಿದು ಕೊಳ್ಳುವುದಕ್ಕೆ ಆಧುನಿಕ ಸೌಕರ್ಯಗಳಿಂದ ಕೂಡಿದ ವಸತಿ ಗೃಹಗಳಿವೆ.



ಸಮೀಪದಲ್ಲಿ ಹೇಮಾವತಿ ನದಿಯು ಹರಿಯುವುದು. ಅಲ್ಲಿಯ ನಿರ್ಮಲ ವಾತಾವರಣ ಮನಸ್ಸನ್ನು ಶಾಂತಗೊಳಿಸುತ್ತದೆ.

ಮಾವಿನಕೆರೆ ರಂಗನಾಥಸ್ವಾಮಿಯ ರಥೋತ್ಸವವು ಮಾಘ ಶುದ್ಧ ತ್ರಯೋದಶಿ ಪುಷ್ಯ ನಕ್ಷತ್ರದಲ್ಲಿ ಬಹು ಸಾಂಗವಾಗಿ ನೆರವೇರುತ್ತದೆ.

**ಹೀಗೆ ಬನ್ನಿ:**

ಮಾವಿನಕೆರೆಯು ಹೊಳೆನರಸೀಪುರ - ಹಾಸನ ರಸ್ತೆಯಲ್ಲಿ ಹೊಳೆನರಸೀಪುರದಿಂದ 13 ಕಿ.ಮೀ. ದೂರದಲ್ಲಿದೆ. ಹೊಳೆನರಸೀಪುರದಿಂದ ಹಾಸನಕ್ಕೆ ಬರುವಾಗ ಸುಮಾರು 15 ಕಿ.ಮೀ. ದೂರದಲ್ಲಿ ಮಾವಿನಕೆರೆ ರಂಗನಾಥನ ಬೆಟ್ಟ ಬಲಭಾಗದಲ್ಲಿ ಗೋಚರಿಸುತ್ತದೆ. ರಸ್ತೆಯ ಆರಂಭದಲ್ಲಿ ಕಮಾನು ಇದೆ. ಅಲ್ಲಿ ಬಲಕ್ಕೆ ತಿರುಗಿ ಸುಮಾರು 3 ಕಿ.ಮೀ. ಬೆಟ್ಟವನ್ನು ಏರಿದರೆ ಸಿಗುವುದೇ ಶ್ರೀರಂಗನಾಥ ದೇವಾಲಯ ಇನ್ನು ಊರಿನ ಮಧ್ಯದಲ್ಲಿ ಶ್ರೀವೆಂಕಟೇಶ್ವರ ದೇವಾಲಯವಿದೆ.



ಧಾರಾವಾಹಿ - 6

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ


- ಇಂಗ್ಲೀಷ್ ಮೂಲ : ಡಾ|| ಎನ್.ರಮೇಶನ್

- ಕನ್ನಡಾನುವಾದ : ದಿ|| ಬಿ.ಎನ್. ಶ್ರೀನಿವಾಸನ್


## ಕಲ್ಯಾಣಿ ಚಾಲುಕ್ಯರು ಹಾಗೂ ಚೋಳ ಸಾಮ್ರಾಟರು-

ಕ್ರಿ.ಶ. 973 ರಲ್ಲಿ ರಾಷ್ಟ್ರಕೂಟರನ್ನು ಕಲ್ಯಾಣಿಯ ಪಶ್ಚಿಮ ಚಾಳುಕ್ಯರು ಹಿಂದಿಕ್ಕಿದರು. ಆದರೆ ಈ ಭೂಭಾಗ ಚೋಳರ ಆಧೀನದಲ್ಲಿಯೇ ಮುಂದುವರೆಯಿತು.ನಂತರ ಆಳಿದ ರಾಜರೆಂದರೆ ಒಂದನೇ ರಾಜರಾಜ (ಕ್ರಿ.ಶ. 985-1016) ಒಂದನೇ ರಾಜೇಂದ್ರ (1012-1044) ಒಂದನೇ ರಾಜಾಧಿರಾಜ (1052-1063) ವೀರರಾಜೇಂದ್ರ (1063-1069) ಆಧಿರಾಜೇಂದ್ರ (1067-68-1070) ಇವರಲ್ಲಿನ ಒಂದನೇ ರಾಜೇಂದ್ರನ ಆಳ್ವಿಕೆಯ ಮೂವತ್ತು ವರ್ಷಗಳು ಚೋಳಸಾಮ್ರಾಜ್ಯದ ಉತ್ಥಾನ ಕಾಲವಾಯಿತು. ಅವನು ಸಿಂಹಾಸನವನ್ನೇರಿದಾಗ,ರಾಷ್ಟ್ರಕೂಟರ ಹೊಡೆತಗಳಿಂದ ಬಹುಕಿರಿದಾಗಿದ್ದ ಚೋಳಸಾಮ್ರಾಜ್ಯ ಹಿರಿದಾಗಿ ವ್ಯವಸ್ಥಿತವಾಗಿ ಇವನ ಕಾಲದಲ್ಲಿ ಬೆಳೆಯಿತು. ಇವನ, ಮತ್ತಿತರ ಚೋಳರಾಜರ ಆಳ್ವಿಕೆಗಳು, ಇಲ್ಲಿನ ಹಲವಾರು ಆಲಯಗಳಿಗೆ ಆಗಿಂದಾಗ್ಗೆ ರಾಜರು ನೀಡುತ್ತಿದ್ದ ಕಾಣಿಕೆಗಳ ಶಾಸನಗಳಿಂದ ವಿವರವಾಗಿ ದಾಖಲೆಯಾಗಿವೆ. ಈ ದತ್ತಿ ದಾನಗಳಿಂದ ಬಂದ ಆದಾಯವನ್ನು ಇಲ್ಲಿನ ಆಲಯಗಳನ್ನು ನೋಡಿಕೊಳ್ಳುವಲ್ಲಿ ವ್ಯಯಮಾಡಲಾಗುತ್ತಿತ್ತು. ದೇವಾಲಯಗಳಿಗಾಗಿ ದಾನ ನೀಡಿದ ಜಾನುವಾರುಗಳನ್ನು ಗೊಲ್ಲರಿಗೆ ಒಪ್ಪಿಸಲಾಗುತ್ತಿದ್ದು. ಅವರು ಆಲಯದ ನಂದಾದೀಪಕ್ಕೆ ತುಪ್ಪವನ್ನು ಒದಗಿಸುತ್ತಿದ್ದರು.ಇತರ ಕೆಲವು ಶಾಸನಗಳು ಪುಷ್ಕರಿಣಿ ನಿರ್ಮಾಣವನ್ನು,ಗುಡಿ, ಗೋಪುರ ನಿರ್ಮಾಣವನ್ನು ತೆರಿಗೆಯೆತ್ತುವುದನ್ನು, ಮನ್ನಾ ಮಾಡುವುದನ್ನು ವಿವರಿಸುತ್ತವೆ.

ಕ್ರಿ.ಶ. 1070 ರಲ್ಲಿ ಪೂರ್ವ ಚಾಲುಕ್ಯರ ರಾಜಕುಮಾರ ರಾಜೇಂದ್ರನು ಚೋಳ ಸಿಂಹಾಸನವನ್ನು ಕುಲೋತ್ತುಂಗ ಎಂಬ ಹೆಸರಿನಲ್ಲಿ ಅಧಿರೋಹಿಸಿದ (ಕ್ರಿ.ಶ. 1070-1120) ಚೋಳ ಚರಿತ್ರೆಯಲ್ಲಿ ಇವನ ಸಿಂಹಾಸನವೇರುವಿಕೆ ಒಂದು ಹೊಸಯುಗವನ್ನುಂಟು ಮಾಡಿತು. ವೆಂಗಿಯ ರಾಜ್ಯ ಚೋಳ ಸಾಮ್ರಾಜ್ಯದ ಒಂದು ಭಾಗವಾಗಿ,ರಾಜರು ಚಾಲುಕ್ಯ-ಚೋಳರಾಜರೆಂದು ಕರೆಯಲ್ಪಟ್ಟರು. ಇವನು ಅನಗತ್ಯವಾದ ಯುದ್ಧಗಳನ್ನು ತೊರೆದು, ಪ್ರಜಾಭಿವೃದ್ಧಿಯತ್ತ ನಿಜವಾದ ಆಸಕ್ತಿ ತೋರಿಸಿದ. ಕುಲೋತ್ತುಂಗನ ನಂತರ ಬಂದವರೆಂದರೆ ಕ್ರಮವಾಗಿ ವಿಕ್ರಮಚೋಳ (ಕ್ರಿ.ಶ. 1118-1135) ಎರಡನೇ ಕುಲೋತ್ತುಂಗ (ಕ್ರಿ.ಶ. 1135-1150) ಎರಡನೇ ರಾಜರಾಜ (ಕ್ರಿ.ಶ.1146-1173) ಮತ್ತು ಎರಡನೇ ರಾಜಾಧಿರಾಜ. ಈ ಜಿಲ್ಲೆಯ ಮೇಲಣ ಅವರ ಹಿಡಿತ ಹೇಗಿತ್ತೆಂಬುದು ಅವರ ಶಾಸನಗಳಿಂದ

ತಿಳಿದುಬರುತ್ತದೆ.ಒಂದು ವಿಶೇಷ ಲಕ್ಷಣವೆಂದರೆ ಈ ನೆರೆ ಹೊರೆಯ ಜಿಲ್ಲೆಗಳಲ್ಲಿ ಚೋಳ ಸಾಮ್ರಾಟರ ಆಶ್ರಿತ ರಾಜರಾಗಿ ತೆಲುಗು ಚೋಳರು ಪ್ರಭಾವಶಾಲಿಗಳಾದರು. ತಮ್ಮ ಸಾಮ್ರಾಟರನ್ನು ಮೀರಿ ನಡೆಯುವಷ್ಟು ಬಲವಿಲ್ಲದ ಇವರುಗಳು ಶ್ರೀಕಾಳಹಸ್ತಿ, ತಿರುಮಲೆ ದೇವಾಲಯಗಳಿಗೆ ಹಲವಾರು ಬಳುವಳಿಗಳನ್ನು ಕೊಟ್ಟಿರುವುದು ದಾಖಲೆ ಯಾಗಿದೆ.

ಒಂದನೇ ಆದಿತ್ಯನು ಆಕ್ರಮಿಸಿದ ನಂತರ ತೊಂಡಮಂಡಳವು ಚೋಳ ಸಾಮ್ರಾಜ್ಯದ ಒಂದು ಭಾಗ ವಾಗಿ 13 ನೇ ಶತಾಬ್ದಿಯವರೆಗೆ ಮುಂದುವರಿಯಿತು. ಈ ಬಗ್ಗೆ ದೊರೆತಿರುವ ಮೊದಲಶಾಸನವೆಂದರೆ (232 ಜಿ.ಟಿ.) ಒಂದನೇ ಪರಾಂತಕನ (ಕ್ರಿ.ಶ.907-955) ಆಡಳಿತದ 29 ನೇ ವರ್ಷಕ್ಕೆ ಸಂಬಂಧಿಸಿದ್ದು. ಕ್ರಿ.ಶ. 956 ರಿಂದ ಹದಿನೈದು ವರ್ಷಗಳ ಕಾಲ ಅವನ ಮಗ ಪಾರ್ಥಿವೇಂದ್ರವರ್ಮನು ತೊಂಡಮಂಡಲದ ರಾಜ್ಯ ಪಾಲನಾಗಿದ್ದ.ಅವನ ಆಳ್ವಿಕೆಯ 14 ನೇ ವರ್ಷದಲ್ಲಿ ಎಂದರೆ ಕ್ರಿ.ಶ.970ರಲ್ಲಿ ಅವನ ಆಧೀನದಲ್ಲಿದ್ದ ಪಲ್ಲವರಾಜನ ಪತ್ನಿ ಸಾಮವೈ ತಿರುಮಲೆಯ ದೇವಾ ಲಯದಲ್ಲಿ ಮೂಲವರರ ಹೋಲಿಕೆಯ ಪ್ರತಿಮೆಯನ್ನು ಸ್ಥಾಪಿಸಿ ಉತ್ಸವಗಳನ್ನು ನಡೆಸಲು ದಾನ ನೀಡಿದಳು. (8-9-ಟಿ.ಟಿ.) ಒಂದನೇ ರಾಜರಾಜನ (985-1014) ಮೂರು ಶಾಸನಗಳು ಈ ಪ್ರಾಂತದಲ್ಲಿದ್ದು ಅವುಗಳಲ್ಲಿ ಒಂದು (170 ಟಿ.ಟಿ.) ತಿರುಮಲೆಗೆ ಸಂಬಂಧಿಸಿದ್ದು ಎರಡನೇ ಪರಾಂತ ಕನ ಪತ್ನಿ ನೀಡಿದ ಚಿನ್ನದ ಪಟ್ಟ (ಹಣೆಗೆ ಸುತ್ತುವ ಆಭರಣ) ದ ಸಮರ್ಪಣೆಯನ್ನು ಸೂಚಿ ಸುತ್ತದೆ.

ನಂತರ ರಾಜನಾದ ರಾಜೇಂದ್ರ ಚೋಳನ ಕಾಲದ ಎರಡು ದಾಖಲೆಗಳಿವೆ.ಅದರಲ್ಲೊಂದು (ಜಿ,ಟಿ. 224) ಕಪಿಲತೀರ್ಥದಲ್ಲಿ ಕಪಿಲೇಶ್ವರ ಆಲಯ ನಿರ್ಮಾಣವನ್ನು ಕುರಿತು ಹೇಳುವುದು.

ಒಂದನೇ ಕುಲೋತ್ತುಂಗನ ಹನ್ನೊಂದು ಶಾಸನ ಗಳು (ಕ್ರಿ.ಶ.1070-1120)ಜಿ.ಟಿ.381,382, 387, 388, ಹಾಗೂ ಟಿ.ಟಿ.71,110,112,131,144, 298,657)ತಿರುಮಲೆಯಲ್ಲೂ,ಯೋಗಿ ಮಲ್ಲಾವರ ದಲ್ಲೂ ಇವೆ. ವಿಕ್ರಮಚೋಳನ (ಜಿ.ಟಿ.386) ಒಂದು ದಾಖಲೆಯೂ ಇದೆ.

ನಂತರದ ದೊರೆಯಾದ ಮೂರನೇ ರಾಜ ರಾಜನ ಏಳು ಶಾಸನಗಳಿವೆ. ಈ ಪ್ರಾಂತ್ಯದ ದೇವಾ ಲಯಗಳ ಲಕ್ಷಣವನ್ನು ಪರಿವರ್ತಿಸಿ, ಇಂದಿನ ರೂಪವನ್ನು ತಂದು ಕೊಟ್ಟ ಒಂದು ಘಟನೆಯನ್ನು ಇಲ್ಲಿ ಉಲ್ಲೇಖಿಸು ವುದು ಸೂಕ್ತ. ವೈಷ್ಣವ ಸಂತರಾದ ಆಳ್ವಾರರು ಭಕ್ತಿ ತತ್ವ ವನ್ನು ಹರಡಿ ಜನ ವಿಷ್ಣುಪೂಜೆಗೆ ತೊಡಗುವುದರಲ್ಲಿ ನೆರ ವಾದರು.ನಂತರ ಬಂದ ಆಚಾರ್ಯರುಗಳು ಈ ವಿಷ್ಣು ಭಕ್ತಿಗೆ ಭದ್ರ ಬುನಾದಿಯನ್ನು ಒದಗಿಸಿ,ವೈಷ್ಣವತೆಗೆ ಒಂದು ಸ್ವರೂಪವನ್ನು ತಂದುಕೊಟ್ಟರು.ಇವರಲ್ಲಿ ಅತ್ಯುನ್ನತಿ ಯನ್ನು ಪಡೆದವರು ರಾಮಾನುಜಾಚಾರ್ಯರು. ಅವರು ಶ್ರೀರಂಗವನ್ನು ಕೇಂದ್ರವಾಗಿಸಿಕೊಂಡು ತಮ್ಮ ವೈಷ್ಣವ ಭಕ್ತಿ ಪ್ರಸಾರದಲ್ಲಿ ನಿರತರಾದರು.ಅವರ ನೂತನ ವೇದಾಂತ ದರ್ಶನ-ವಿಶಿಷ್ಟಾದ್ವೈತವೆಂದು ಹೆಸರು ಪಡೆದು ಶೀಘ್ರ ಬೆಳವಣಿಗೆಗೆ ಒಳಗಾಯಿತು. ಆಲಯಗಳಲ್ಲಿ ತಮಿಳು ಪ್ರಬಂಧಗಳನ್ನು ಹಾಡುವ ಪರಂಪರೆಗೆ ಮೂಲಕಾರಕ ರಾದ ನಾಥಮುನಿಗಳು ತಮ್ಮ ತೀರ್ಥಯಾತ್ರೆಯ ಕಾಲ ದಲ್ಲಿ ತಿರುಮಲೆಗೂ ಆಗಮಿಸಿದ್ದರು.ನಂತರದ ಆಚಾರ್ಯ ರಾದ ಆಳವಂದಾರರೂ (ಯಮುನಾಚಾರ್ಯರು) ತಿರು ಮಲೆಯನ್ನು ಸಂದರ್ಶಿಸಿದ್ದರು. ಅವರು ತಮ್ಮ ಮೊಮ್ಮ ಕ್ಕಳಲ್ಲಿ ಒಬ್ಬರಾದ ತಿರುಮಲನಂಬಿಯನ್ನು ತಿರುಮಲೆ ಯಲ್ಲಿಯೇ ವಾಸವಾಗಿದ್ದು ಪವಿತ್ರವಾದ ದೇವಾಲಯಕ್ಕೆ ಪುಷ್ಪಕೈಂಕರ್ಯ ಹಾಗೂ ತೀರ್ಥಕೈಂಕರ್ಯ ಮಾಡಿ ಕೊಂಡು ಬರಲು ನಿಯಮಿಸಿದ್ದರು.ತಿರುಮಲನಂಬಿ ತಿರು ಮಲೆಗೆ ವಲಸೆ ಬಂದು ಇಲ್ಲಿಯೇ ನಿಂತು ತಮ್ಮ ಇಡೀ ಬಾಳನ್ನು ಸ್ವಾಮಿಯ ಸೇವೆಯಲ್ಲಿ ಕಳೆದರು, ನಂತರ ದವರೇ ರಾಮಾನುಜರು. ಈ ಆಚಾರ್ಯರು ತಿರುಮಲೆ ಯನ್ನು ಮೂರುಬಾರಿ ಸಂದರ್ಶಿಸಿರಬೇಕು, ಮೊದಲಿ ಬಾರಿ ಅವರು ತಿರುಮಲನಂಬಿಯೊಡನೆ ಒಂದು ವರ್ಷ ಕಾಲವಿದ್ದು ನಂಬಿಗಳಿಂದ ರಾಮಾಯಣ ರಹಸ್ಯಾರ್ಥ ವನ್ನು ತಿಳಿದರು.ಶೈವ ವೈಷ್ಣವರಲ್ಲಿ ತಿರುಮಲೆಯ ಆಲಯದ ದೇವರ ಬಗ್ಗೆ ವಿವಾದವುಂಟಾದಾಗ, ಆ ಜಗಳವನ್ನು ಪರಿ ಹರಿಸಲು ಎರಡನೆಯ ಬಾರಿಗೆ ಅವರು ತಿರುಮಲೆಗೆ ಬಂದರು. ಕಡೆಯ ಬಾರಿಗೆ ತಮ್ಮ 103 ನೇ ವಯಸ್ಸಿನಲ್ಲಿ ತಿರುಮಲೆಗೆ ಬಂದಾಗ ಆಚಾರ್ಯರು ತಿರುಪತಿಯಲ್ಲಿ ಶ್ರೀ ಗೋವಿಂದ ರಾಜನನ್ನು ಪ್ರತಿಷ್ಠಾಪಿಸಿ, ಗೋವಿಂದರಾಜ ಪಟ್ಟಣವೆಂದು ಈಗಲೂ ಕರೆಯಲ್ಪಡುವ ತಿರುಪತಿ ನಗರಕ್ಕೆ ಬುನಾದಿಯನ್ನುಂಟಾಗಿಸಿದರು.

**(ಮುಂದುವರಿಯುವುದು)**



# ಧನ್ವಂತರಿ ಧ್ಯಾನಂ



ಅಚ್ಯುತಾನಂತ ಗೋವಿಂದ
ವಿಷ್ಣೋ ನಾರಾಯಣಾಽಮೃತ।
ರೋಗಾನ್ಮೇ ನಾಶಯಾಽಶೇಷಾನಾಶು
ಧನ್ವನ್ತರೇ ಹರೇ॥

ಆರೋಗ್ಯಂ ದೀರ್ಘ ಮಾಯುಷ್ಯಂ
ಬಲಂ ತೇಜೋಧಿಯಂಶ್ರಿಯಂ।
ಸ್ವಭಕ್ತೇ ಭ್ಯೋಽನು ಗೃಹ್ಣನ್ತಂ
ವಂದೇ ಧನ್ವನ್ತರಿಂ ಹರಿಮ್ ॥

ಧನ್ವನ್ತರೇರಿ ಮಂ ಶ್ಲೋಕಂ
ಭಕ್ತ್ಯಾ ನಿತ್ಯಂ ಪಠನ್ತಿಯೇ।
ಅನಾರೋಗ್ಯಂ ನ ತೇಷಾಂ
ಸ್ಯಾತ್ ಸುಖಂ ಜೀವನ್ತಿ ತೇ ಚಿರಮ್॥

ಓಂ ನಮೋ ಭಗವತೇ ವಾಸುದೇವಾಯ ಧನ್ವಂತರಯೇ
ಅಮೃತ ಕಲಶಹಸ್ತಾಯ ವಜ್ರಜಲೌಕ ಹಸ್ತಾಯ
ಸರ್ವಾಮಯ ವಿನಾಶನಾಯ ತ್ರೈಲೋಕ್ಯನಾಥಾಯ
ಶ್ರೀಮಹಾವಿಷ್ಣವೇ ಸ್ವಾಹಾ

ಓಂ ವಾಸುದೇವಾಯ ವಿದ್ಮಹೇ ಸುಧಾಹಸ್ತಾಯ ಧೀಮಹಿ ॥
ತನ್ನೋ ಧನ್ವನ್ತರಿಃ ಪ್ರಚೋದಯಾತ್

# ಶ್ರೀವರಾಹಾಷ್ಟೋತ್ತರ ಶತನಾಮಾವಳಿಃ

ಓಂ ಶ್ರೀ ವರಾಹಾಯ ನಮಃ
ಓಂ ಮಹೀನಾಥಾಯ ನಮಃ
ಓಂ ಪೂರ್ಣಾನಂದಾಯ ನಮಃ
ಓಂ ಜಗತ್ಪತಯೇ ನಮಃ
ಓಂ ನಿರ್ಗುಣಾಯ ನಮಃ
ಓಂ ನಿಷ್ಕಲಾಯ ನಮಃ
ಓಂ ಅನಂತಾಯ ನಮಃ
ಓಂ ದಂಡಕಾಂತಕೃತೇ ನಮಃ
ಓಂ ಅವ್ಯಯಾಯ ನಮಃ
ಓಂ ಹಿರಣ್ಯಾಕ್ಷಾಂತಕೃತೇ ನಮಃ 10

ಓಂ ದೇವಾಯ ನಮಃ
ಓಂ ಪೂರ್ಣಕ್ಷಾಡ್ಗುಣ್ಯವಿಗ್ರಹಾಯ ನಮಃ
ಓಂ ಲಯೋದಧಿವಿಹಾರಿಣೇ ನಮಃ
ಓಂ ಸರ್ವಪ್ರಾಣಿಹಿತೇರತಾಯ ನಮಃ
ಓಂ ಅನಂತರೂಪಾಯ ನಮಃ
ಓಂ ಅನಂತಶ್ರಿಯೇ ನಮಃ
ಓಂ ಜಿತಮನ್ಯವೇ ನಮಃ
ಓಂ ಭಯಾಪಹಾಯ ನಮಃ
ಓಂ ವೇದಾಂತವೇದ್ಯಾಯ ನಮಃ
ಓಂ ವೇದಿನೇ ನಮಃ 20

ಓಂ ವೇದಗರ್ಭಾಯ ನಮಃ
ಓಂ ಸನಾತನಾಯ ನಮಃ
ಓಂ ಸಹಸ್ರಾಕ್ಷಾಯ ನಮಃ
ಓಂ ಪುಣ್ಯಗಂಧಾಯ ನಮಃ
ಓಂ ಕಲ್ಪಕೃತೇ ನಮಃ
ಓಂ ಕ್ಷಿತಿಭೃತೇ ನಮಃ
ಓಂ ಹರಯೇ ನಮಃ
ಓಂ ಪದ್ಮನಾಭಾಯ ನಮಃ
ಓಂ ಸುರಾಧ್ಯಕ್ಷಾಯ ನಮಃ
ಓಂ ಹೇಮಾಂಗಾಯ ನಮಃ 30

ಓಂ ದಕ್ಷಿಣಾಮುಖಾಯ ನಮಃ
ಓಂ ಮಹಾಕೋಲಾಯ ನಮಃ
ಓಂ ಮಹಾಬಾಹವೇ ನಮಃ
ಓಂ ಸರ್ವ ದೇವನ ಮಸ್ಕೃತಾಯ ನಮಃ
ಓಂ ಹೃಷೀಕೇಶಾಯ ನಮಃ
ಓಂ ಪ್ರಸನ್ನಾತ್ಮನೇ ನಮಃ
ಓಂ ಸರ್ವಭಕ್ತ ಭಯೊಪಹಾಯ ನಮಃ
ಓಂ ಯಜ್ಞಭೃತೇ ನಮಃ
ಓಂ ಯಜ್ಞ ಕೃತೇ ನಮಃ
ಓಂ ಸಾಕ್ಷಿಣೇ ನಮಃ 40

ಓಂ ಯಜ್ಞಾಂಗಾಯ ನಮಃ
ಓಂ ಯಜ್ಞವಾಹನಾಯ ನಮಃ
ಓಂ ಹವ್ಯ ಭಜೇ ನಮಃ
ಓಂ ಹವ್ಯದೇವಾಯ ನಮಃ
ಓಂ ಸದಾ ವ್ಯಕ್ತಾಯ ನಮಃ
ಓಂ ಕೃಪಾಕರಾಯ ನಮಃ
ಓಂ ದೇವಭೂಮಿಗುರವೇ ನಮಃ
ಓಂ ಕಾಂತಾಯ ನಮಃ
ಓಂ ಧರ್ಮಗುಹ್ಯಾಯ ನಮಃ
ಓಂ ವೃಷಾಕಪಯೇ ನಮಃ 50

ಓಂ ಸ್ರವತ್ತುಂಡಾಯ ನಮಃ
ಓಂ ವಕ್ರದಂಷ್ಟ್ರಾಯ ನಮಃ
ಓಂ ನೀಲಕೇಶಾಯ ನಮಃ
ಓಂ ಮಹಾಬಲಾಯ ನಮಃ
ಓಂ ಪೂತಾತ್ಮನೇ ನಮಃ
ಓಂ ವೇದನೇತ್ರೇ ನಮಃ
ಓಂ ವೇದಹರ್ತೃ ಶಿರೋಹರಾಯ ನಮಃ
ಓಂ ವೇದಾಂತ ವಿದೇ ನಮಃ
ಓಂ ವೇದಗುಹ್ಯಾಯ ನಮಃ
ಓಂ ಸರ್ವ ವೇದಪ್ರವರ್ತಕಾಯ ನಮಃ 60

ಓಂ ಗಭೀರಾಕ್ಷಾಯ ನಮಃ
ಓಂ ತ್ರಿಧಾಮ್ನೇ ನಮಃ
ಓಂ ಗಭೀರಾತ್ಮನೇ ನಮಃ
ಓಂ ಅಮರೇಶ್ವರಾಯ ನಮಃ
ಓಂ ಆನಂದವನಗಾಯ ನಮಃ
ಓಂ ದಿವ್ಯಾಯ ನಮಃ

ಓಂ ಬ್ರಹ್ಮನಾಸಾಸಮುದ್ಭವಾಯ ನಮಃ
ಓಂ ಸಿಂಧು ತೀರ ನಿವಾಸಿನೇ ನಮಃ
ಓಂ ಕ್ಷೇಮಕೃತೇ ನಮಃ
ಓಂ ಸಾತ್ತ್ವತಾಂ ಪತಯೇ ನಮಃ 70

ಓಂ ಇಂದ್ರತ್ರಾತ್ರೇ ನಮಃ
ಓಂ ಜಗತ್ತ್ರಾತ್ರೇ ನಮಃ
ಓಂ ಇಂದ್ರ ದೋರ್ದಂಡಗರ್ವಘ್ನೇ ನಮಃ
ಓಂ ಭಕ್ತವಶ್ಯಾಯ ನಮಃ
ಓಂ ಸದೋದ್ಯುಕ್ತಾಯ ನಮಃ
ಓಂ ನಿಜಾನಂದಾಯ ನಮಃ
ಓಂ ರಮಾಪತಯೇ ನಮಃ
ಓಂ ಶ್ರುತಿ ಪ್ರಿಯಾಯ ನಮಃ
ಓಂ ಶುಭಾಂಗಾಯ ನಮಃ
ಓಂ ಪುಣ್ಯಶ್ರವಣ ಕೀರ್ತನಾಯ ನಮಃ 80

ಓಂ ಸತ್ಯಕೃತೇ ನಮಃ
ಓಂ ಸತ್ಯಸಂಕಲ್ಪಾಯ ನಮಃ
ಓಂ ಸತ್ಯ ವಾಚೇ ನಮಃ
ಓಂ ಸತ್ಯ ವಿಕ್ರಮಾಯ ನಮಃ
ಓಂ ಸತ್ಯೇನಿಗೂಢಾಯ ನಮಃ
ಓಂ ಸತ್ಯಾತ್ಮನೇ ನಮಃ
ಓಂ ಕಲಾತೀತಾಯ ನಮಃ
ಓಂ ಗುಣಾಧಿಕಾಯ ನಮಃ
ಓಂ ಪರಸ್ಮೈಜ್ಯೋತಿಷೇ ನಮಃ
ಓಂ ಪರಸ್ಮೈ ಧಾಮ್ನೇ ನಮಃ 90

ಓಂ ಪರಮಯ ಪುರುಷಾಯ ನಮಃ
ಓಂ ಪರಾಯ ನಮಃ
ಓಂ ಕಲ್ಯಾಣಕೃತೇ ನಮಃ
ಓಂ ಕವಯೇ ನಮಃ
ಓಂ ಕರ್ತ್ರೇ ನಮಃ
ಓಂ ಕರ್ಮಸಾಕ್ಷಿಣೇ ನಮಃ;
ಓಂ ಜಿತೇಂದ್ರಿಯಾಯ ನಮಃ
ಓಂ ಕರ್ಮಕೃತೇ ನಮಃ
ಓಂ ಕರ್ಮಕಾಂಡಸ್ಯ ಸಂಪ್ರದಾಯ
ಪ್ರವರ್ತಕಾಯ ನಮಃ
ಓಂ ಸರ್ವಾಂತಕಾಯ ನಮಃ 100

ಓಂ ಸರ್ವಗಾಯ ನಮಃ
ಓಂ ಸರ್ವದಾಯ ನಮಃ
ಓಂ ಸರ್ವಭಕ್ಷಕಾಯ ನಮಃ
ಓಂ ಸರ್ವಲೋಕಪತಯೇ ನಮಃ
ಓಂ ಶ್ರೀಮತೇ ಶ್ರೀ ಮುಷ್ಣೇಶಾಯ ನಮಃ
ಓಂ ಶುಭೇಕ್ಷಣಾಯ ನಮಃ
ಓಂ ಸರ್ವ ದೇವ ಪ್ರಿಯಾಯ ನಮಃ
ಓಂ ಸಾಕ್ಷಿಣೇ ನಮಃ 108

## ಇತಿ ಶ್ರೀ ವರಾಹಾಷ್ಟೋತ್ತರ ಶತನಾಮಾವಳಿಃ ಸಮಾಪ್ತಿ







2021 ಆಗಸ್ಟ್ 22 ರಂದು ತಿರುಪತಿ ಶ್ರೀ ಗೋವಿಂದರಾಜ ಸ್ವಾಮಿಯವರ ಆಲಯದಲ್ಲಿ ಆಧುನೀಕರಿಸಿದ ಐನಾಮಹಲ್ ಅನ್ನು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಡಾ|| ಕೆ.ಎಸ್. ಜವಹರ್ ರೆಡ್ಡಿ, ಐ.ಎ.ಎಸ್., ರವರು ಪ್ರಾರಂಭಿಸಿದರು. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್.ಭಾರ್ಗವಿ. ಐ.ಎ.ಎಸ್., ಮತ್ತು ಎಫ್.ಎ. ಮತ್ತು ಸಿ.ಎ.ಓ. ಶ್ರೀ ಬಾಲಾಜಿ ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.





2021 ಆಗಸ್ಟ್ 20 ರಂದು ತಿರುಮಲೆ ಸ್ವಾಮಿಯವರ ಆಲಯದಲ್ಲಿ ನಡೆದ ಪವಿತ್ರೋತ್ಸವದ ಪೂರ್ಣಾಹುತಿಯಲ್ಲಿ ಪಾಲ್ಗೊಂಡ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಡಾ|| ಕೆ.ಎಸ್. ಜವಹರ್ ರೆಡ್ಡಿ ಐ.ಎ.ಎಸ್., ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಯವರು ಮತ್ತು ಇತರ ಅಧಿಕಾರಿಗಳು ಪಾಲ್ಗೊಂಡರು.




30 ಆಗಸ್ಟ್ 2021 ರಂದು ಶ್ರೀ ವೆಂಕಟೇಶ್ವರ ಗೋಶಾಲೆಯಲ್ಲಿ ಸ್ವಾಮಿಯವರಿಗೆ ಉಪಯೋಗಿಸಿದ ಹೂಗಳನ್ನು ಒಣಗಿಸಿದ ನಂತರ ಆ ಹೂಗಳಿಂದ ತಯಾರಿಸಿದ ಊದುಬತ್ತಿಗಳನ್ನು ಪರಿಶೀಲಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಡಾ|| ಕೆ. ಎಸ್.ಜವಹರ್ ರೆಡ್ಡಿ ಐ.ಎ.ಎಸ್., ರವರು



30 ಆಗಸ್ಟ್ 2021 ರಂದು ಶ್ರೀ ಕೃಷ್ಣಾಷ್ಟಮಿ ಪರ್ವದಿನದಂದು ಸ್ವಾಮಿಯವರ "ನವನೀತ ಸೇವೆ" ಪ್ರಾರಂಭದ ಸಂದರ್ಭದಲ್ಲಿ ಬೆಣ್ಣೆಯನ್ನು ಕಡೆಯುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಡಾ|| ಕೆ.ಎಸ್.ಜವಹರ್ ರೆಡ್ಡಿ ಐ.ಎ.ಎಸ್., ರವರು ಮತ್ತು ಇತರ ಅಧಿಕಾರಿಗಳು

# ಗೌರಿ ಹಬ್ಬ

– ಶ್ರೀಮತಿ. ಗಿರಿಜಾ. ಎಸ್. ದೇಶಪಾಂಡೆ
97393 88300



## ತದಿಗೆಗೆಂದು ಬರುವ ಮುದ್ದು ಗೌರಿ...

ಹಬ್ಬ ಮನಸ್ಸಿಗೆ ಸಂತೋಷ ನೀಡುವ ಒಂದು ಟಾನಿಕ್, ಜಂಜಡದ ಜೀವನಕ್ಕೆ ಬ್ರೇಕ್ ಹಾಕಿ ಎಲ್ಲವನ್ನೂ ಮರೆತು ಹಬ್ಬದಲ್ಲಿ ತನ್ಮಯರಾಗುವಂತೆ ಮಾಡುವ ಅದರ ಶಕ್ತಿ ಅನನ್ಯ.

ಇಂದಿನ ಮಹಿಳೆಯರು ಎಷ್ಟೇ ಮಾಡರ್ನ್ ಆಗಿರಲಿ, ವರ್ಷಕ್ಕೊಮ್ಮೆ ಬರುವ ಗೌರಿ ಹಬ್ಬದಂದು ಪಕ್ಕಾ ಗೃಹಿಣಿಯಾಗಿ ಪೂಜಾ ಕೈಂಕರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಅಲ್ಲದೆ, ತವರಿನಿಂದ ಬರುವ ಬಾಗಿನಕ್ಕಾಗಿ ಕಾಯುತ್ತಾರೆ. ಹೊಸದಾಗಿ ಮದುವೆಯಾದ ಹೆಣ್ಣು ಮಕ್ಕಳಿಗಂತೂ, ಪೂಜೆ ಉಡುಗೊರೆ ಹೀಗೆ ಸಡಗರ ದುಪ್ಪಟ್ಟು.

ತಾನಿರುವ ಪತಿಯ ಮನೆ ಶ್ರೀಮಂತವಾಗಿರಲಿ ಇಲ್ಲವೇ, ಸುಖದ ಸುಪತ್ತಿಗೆಯಲ್ಲಿ ತೇಲಾಡುತ್ತಲೇ ಇರಲಿ. ಆದರೆ ಗೌರಿ ಹಬ್ಬದಂದು ಮಾತ್ರ ಪ್ರತಿ ಹೆಣ್ಣಿನ ಮನ ತವರನ್ನು ನೆನೆಯುತ್ತದೆ. ಬಾಗಿನದ ಹಾದಿ ಕಾಯುತ್ತದೆ.

ಹೆಣ್ಣು ಮಕ್ಕಳು ಆಚರಿಸುವ ಹಬ್ಬಗಳು, ಮನಕ್ಕೆ ಖುಷಿ ನೀಡುತ್ತವೆ. ಕಾಸಗಲ ಕುಂಕುಮ, ಸೀರೆ, ಆಭರಣ ಧರಿಸಿ ಪೂಜಾ ಕಾರ್ಯಗಳಲ್ಲಿ ಮಗ್ನರಾಗಿ ಪುಟ್ಟ ಗೌರಿಯಂತೆ ಕಾಣುವ ಹೆಣ್ಣುಮಕ್ಕಳನ್ನು ನೋಡಿದರೆ ಸಂತೋಷವಾಗುತ್ತದೆ. ಹಬ್ಬದ ಹೆಸರಿನಲ್ಲಾದರೂ ಸರಿಯೇ, ಸಂಪ್ರದಾಯ ಉಳಿಯುವಂತಾಗುತ್ತಿದೆಯಲ್ಲ ಎಂಬುದೇ ಖುಷಿ ಎಂಬುದು ಹಿರಿಯರ ಅಭಿಪ್ರಾಯ.

ವರಮಹಾಲಕ್ಷ್ಮಿ, ಸ್ವರ್ಣಗೌರಿ ವ್ರತ, ಭೀಮನ ಅಮಾವಾಸ್ಯೆ ಸೇರಿದಂತೆ ಮಹಿಳೆಯರೇ ಆಚರಿಸಬೇಕಾದ ಈ ಯಾವ ಹಬ್ಬಕ್ಕೂ ರಜೆ ಇಲ್ಲ. ಗೌರಿ ಪೂಜೆ ಮಾಡಿದ ನಂತರ ನೆಮ್ಮದಿಯಾಗಿ ಕುಳಿತು ಊಟ ಮಾಡುವ ಅದೃಷ್ಟ ಮಾತ್ರ ದುಡಿಯುವ ಮಹಿಳೆಯರಿಗೆ ಇಲ್ಲವಾಗಿದೆ. ಆದ್ದರಿಂದ ಗೌರಿ ಪೂಜೆ ಮಾಡಿ ತರಾತುರಿಯಲ್ಲಿ ಬಸ್ಸೇರಿ ಕೆಲಸಕ್ಕೆ ಹೊರಡುವ ಆತುರ, ದಿನನಿತ್ಯ ನೂರಾರು ಮಹಿಳೆಯರು ಉದ್ಯೋಗ ಅರಸಿ ಬೆಂಗಳೂರಿಗೆ ಆಗಮಿಸುತ್ತಾರೆ. ಬಂದ ತಿಂಗಳಿಗೆಲ್ಲ ಒಂದು ಉದ್ಯೋಗ ದಕ್ಕಿಸಿ ಕೊಳ್ಳುತ್ತಾರೆ. ಪರ ಊರುಗಳಿಂದ ಬಂದು ಇಲ್ಲಿ ಕೆಲಸಕ್ಕೆ ಸೇರಿಕೊಳ್ಳುವ ಮಹಿಳೆಯರೇ ಹೆಚ್ಚು. ವರ್ಷಕ್ಕೊಂದು ಹಬ್ಬಕ್ಕೆ ಊರಿಗೆ ಹೋಗುವ ಹಾಗಿಲ್ಲ ಎನ್ನುವುದು ಉದ್ಯೋಗಸ್ಥ ಹೆಣ್ಣು ಮಕ್ಕಳ ಗೋಳು.

## ಹಳ್ಳಿಗಳ ಸೊಗಡಿನಲ್ಲಿ...

ಸುಮಂಗಲಿಯರು ಮತ್ತು ಅವಿವಾಹಿತ ಹೆಂಗಳೆಯರು ಸ್ನಾನಾದಿ ಕರ್ಮಗಳಿಂದ ಶುಭ್ರರಾಗಿ, ಉಪವಾಸ ಮಾಡಿ, ಗೌರಿಯ ಜೊತೆಗೆ ಗಂಗೆಯನ್ನು ಪೂಜಿಸುತ್ತಾರೆ.ಹತ್ತಿರ ಇರುವ ಕೆರೆ, ಹೊಳೆ ಇಲ್ಲವೇ ಬಾವಿ ಬಳಿ ತೆರಳಿ, ಮೂರರಿಂದ ಐದು ಚಿಕ್ಕ ಕಲ್ಲುಗಳನ್ನು ಮಣ್ಣಿನ ಗುಡ್ಡೆಯ ಮೇಲಿಟ್ಟು, ಹೂ ಮುಡಿಸಿ ಕುಂಕುಮ ಹಚ್ಚಿ ತಂಬಿಟ್ಟಿನ ಆರತಿ ಮಾಡಿ ಗಂಗೆ ಪೂಜೆ ಮಾಡುತ್ತಾರೆ. ಜೊತೆಗೆ ಬಂದಿರುವ ಸುಮಂಗಲಿಯರು ಬಿಂದಿಗೆಯಲ್ಲಿ ನೀರು ತುಂಬಿಸಿ, ಅದಕ್ಕೂ ಗೌರಿ ಎಳೆ ಕಟ್ಟಿ ಪೂಜಿಸಿ ಮನೆಗೆ ಕರೆತರುತ್ತಾರೆ.

ನಂತರ ಮನೆಯಲ್ಲಿ ಕಳಸದ ಬಳಿ ಗಂಗೆಯನ್ನು ಇರಿಸಿ ಪೂಜಿಸಲಾಗುತ್ತದೆ. ಗೌರಿ ಸಮಾನರಾದ ಮುತ್ತೈದೆಯನ್ನು ಕುಳ್ಳಿರಿಸಿ, ಹಣೆಗೆ ಕುಂಕುಮವಿಟ್ಟು ಮಡಿಲಿಗೆ ಬಾಗಿನ ಹಾಕಲಾಗುತ್ತದೆ. ಬಾಗಿನದಲ್ಲಿ ಹಸಿರು ಬಳೆಗಳು, ಸೀರೆ ಇಲ್ಲವೇ ರವಿಕೆ ಕಣ, ಅರಿಷಿನ ಕುಂಕುಮ, ಹಣ್ಣು ನಾಲ್ಕೈದು ಬಗೆ ತಿಂಡಿ ತಿನುಸುಗಳು, ಅಕ್ಕಿ ಸೇರಿದಂತೆ ಅನೇಕ ಮಂಗಳ ದ್ರವ್ಯಗಳನ್ನು ಎರಡು ಮೊರದಲ್ಲಿ ಇರಿಸಿರಲಾಗಿರುತ್ತದೆ. ಅರಿಷಿಣ ದಾರದಿಂದ ಮಾಡಿದ ಗೌರಿ ಎಳೆಯನ್ನು ಹೊಸದಾಗಿ ಮದುವೆಯಾದ ಹೆಣ್ಣಿಗೆ ಕಟ್ಟಿ, ತಂದ ಬಾಗಿನಕ್ಕೆ ಪೂಜೆ ಸಲ್ಲಿಸಿ ನೀಡಲಾಗುತ್ತದೆ. ಹೊಸ ಬಟ್ಟೆ ತೊಟ್ಟು ಶ್ರೀ ಗೌರಿಯಲ್ಲಿ ತಮ್ಮ ಇಷ್ಟಾರ್ಥ ಸೇವೆಗಳ ಹರಕೆಯನ್ನಿಡುತ್ತಾರೆ.ಅವಿವಾಹಿತ ಹೆಂಗಳೆಯರು ಭವಿಷ್ಯದಲ್ಲಿ ಸೂಕ್ತ ವರನನ್ನು ಅನುಗ್ರಹಿಸುವಂತೆ ಕೋರುವುದು ಸಾಮಾನ್ಯ. ಇನ್ನು ಸುಮಂಗಲಿಯರು ತವರು ಮನೆಯ ಮತ್ತು ಗಂಡನ ಸುಖ-ಬಯಸಿ ಬಾಗಿನ ಕೊಟ್ಟು ದೇವಿಯಲ್ಲಿ ಕೃತಾರ್ಥರಾಗುತ್ತಾರೆ.

## ನಗರದ ಬೀಡಿನಲ್ಲಿ

ನಗರ ಭಾಗದಲ್ಲಿ ಈ ಹಬ್ಬವನ್ನು ಸಾಂಕೇತಿಕವಾಗಿ ಆಚರಿಸಲಾಗುತ್ತದೆ. ಸಾಮಾನ್ಯವಾಗಿ ಹೆಂಗಳೆಯರು ಮತ್ತು ಸುಮಂಗಲಿಯರು, ದೇವಸ್ಥಾನಕ್ಕೆ ಹೋಗಿ ಪೂಜೆ ಪುನಸ್ಕಾರ ಮಾಡುತ್ತಾರೆ. ಬಾಗಿನ ಅರ್ಪಿಸುವುದು ಇದ್ದರೂ, ಅದು ಅಲ್ಲಲ್ಲಿ ಮಾತ್ರ ಕಂಡು ಬರುತ್ತದೆ. ನಗರೀಕರಣದ ಪ್ರಭಾವದಿಂದಾಗಿ, ಇಂತಹ ಹಬ್ಬಗಳು ನೇಪಥ್ಯಕ್ಕೆ ಸರಿಯುತ್ತಿದೆ.

ಈಗ ಸಮಯದ ಒತ್ತಡದಿಂದ ಬಾಗಿನದ



ಬದಲು ಹಣವನ್ನು ಕಳುಹಿಸುತ್ತಿರುವ ಪದ್ಧತಿ ರೂಢಿಯಲ್ಲಿದೆ. ಈ ಬಾಗಿನ ಕೊಡುವ ಒಳ ಅರ್ಥ ಪ್ರತಿಯೊಬ್ಬರಲ್ಲೂ ಹಂಚಿಕೆಯ ಭಾವನೆಯುಂಟಾಗಲಿ ಎಂದು. ಸೀರೆ, ಕುಪ್ಪಸ, ಅರಿಶಿನ, ಕುಂಕುಮ, ಹಸಿರು ಬಳೆ, ಕಾಲುಂಗುರ, ಅರಿಶಿನದಾರ (ತಾಳಿಯ ಸಂಕೇತ), ಹೂ ಹಣ್ಣು, ಜೋಡಿ ತೆಂಗಿನ ಕಾಯಿ,ಸಿಹಿ ತಿಂಡಿಗಳು, ಅಕ್ಷತೆ ಕಾಳು, ಕಾಡಿಗೆ, ಬೆಳ್ಳಿ ಬಟ್ಟಲು ಮತ್ತು ಒಂದು ಜೊತೆ ಬಿದಿರಿನ ಮೊರ, ಇಷ್ಟೆಲ್ಲಾ ಪೂಜನೀಯ ವಸ್ತುಗಳು ಬಾಗಿನದಲ್ಲಿರುತ್ತದೆ.

## ಸಕಲ ಸೌಭಾಗ್ಯದಾತೆ ಸ್ವರ್ಣಗೌರಿ

ಪಾರ್ವತಿಯ ರೂಪಾಂತರ ಪೂಜಿಸುವುದರಿಂದ ಸಂತುಷ್ಟಳಾಗಿ, ಸರ್ವಾಭೀಷ್ಟಗಳನ್ನು ಕೊಡುತ್ತಾಳೆಂದು ಪುರಾಣಗಳು ಹೇಳುತ್ತದೆ. ಗೌರ (ಹಳದಿ - ಬಿಳುಪು ಮಿಶ್ರ) ವರ್ಣದ ಶರೀರದಿಂದ ಕೂಡಿದ ಪಾರ್ವತಿ ರೂಪಾಂತರವನ್ನು ತಳೆದುದರಿಂದ ಆಕೆಗೆ ಗೌರೀ ಎಂದು ಹೆಸರು ಬಂದಿದೆ. ಈ ವಿಚಾರವಾಗಿ ಒಂದು ಪೌರಾಣಿಕ ಕಥೆ ಹೀಗಿದೆ.

ದಕ್ಷ ಪ್ರಜಾಪತಿಗೆ ಕಾಳಿ ಎಂಬ ಮಗಳಿದ್ದಳು. ಆಕೆ ಕನ್ನೈದಿಲೆಯಂತೆ ಕಪ್ಪು ಬಣ್ಣದಿಂದ ಕೂಡಿದ್ದಳು. ದಕ್ಷ ಆಕೆಯನ್ನು ಈಶ್ವರನಿಗೆ ಕೊಟ್ಟು ಮದುವೆ ಮಾಡಿದ್ದ. ಒಮ್ಮೆ ಆಸ್ಥಾನ ಮಂಟಪದಲ್ಲಿ ವಿಷ್ಣು ಮತ್ತು ದೇವತೆಗಳೊಡನೆ ಈಶ್ವರ ತನ್ನ ಪತ್ನಿಯನ್ನು ಕಪ್ಪು ವರ್ಣಳಾದ ಕಾಳಿಯೇ, ಬಾ. ನಿನ್ನ ಬಣ್ಣ ಕಪ್ಪಾಗಿದ್ದರೂ ಸೌಂದರ್ಯದಿಂದ ಕೂಡಿದ ನಿನ್ನ ರೂಪ ನನಗೆ ಪ್ರಿಯವಾಗಿದೆ ಎಂದು ಹೇಳಿದ. ಈ ಮಾತನ್ನು ಕೇಳಿದ ಕಾಳಿ ಲಜ್ಜಿತಳಾಗಿ, ದುಃಖಿಸಿ ತನ್ನ ಕಪ್ಪು ದೇಹವನ್ನು ನೀಗಲು ದೇವ ಸಮುದಾಯದೆದುರಿನಲ್ಲೇ ಅಗ್ನಿ ಪ್ರವೇಶ ಮಾಡಿ ಮತ್ತೆ ಪರ್ವತರಾಜನಿಗೆ ಮಗಳಾಗಿ ಗೌರವರ್ಣ ಶರೀರದಿಂದ ಕೂಡಿದವಳಾಗಿ ಹುಟ್ಟಿ ಈಶ್ವರನನ್ನೇ ವಿವಾಹವಾದಳು. ಭಾದ್ರಪದ ಶುದ್ಧತೃತೀಯಾ ದಿನದಂದೂ ಪಾರ್ವತಿ ಆವಿರ್ಭವಿಸಿದರಿಂದ ಆ ದಿವಸ ಸ್ವರ್ಣಗೌರೀ ವ್ರತವನ್ನು ಆಚರಿಸುವುದು ರೂಢಿಯಲ್ಲಿದೆ.

ವಿವಾಹದ ದಿನ, ಕನ್ಯಾದಾನಕ್ಕೆ ಪೂರ್ವಭಾವಿಯಾಗಿ ಕನ್ಯೆ ಗೌರೀ ಪೂಜೆಯನ್ನು ಮಾಡುವುದು ಕೆಲವರಲ್ಲಿರುವ ಪದ್ಧತಿ. ಸ್ವರ್ಣಗೌರಿ ಪೂಜೆಯಂತೆಯೇ ಮಂಗಳ ಗೌರಿ ಪೂಜೆಯೂ ಬಹಳ ಮುಖ್ಯವಾದುದು. ಸ್ತ್ರೀಯರು ಇದನ್ನು ಸೌಮಾಂಗಲ್ಯವೃದ್ಧಿಗಾಗಿ ಮಾಡುತ್ತಾರೆ.ಶ್ರಾವಣ ಮಾಸದ ಎಲ್ಲಾ ಮಂಗಳ ವಾರಗಳಲ್ಲೂ ಈ ವ್ರತವನ್ನು ಮಾಡುತ್ತಾರೆ. ವಿವಾಹವಾದ ವರ್ಷದಲ್ಲಿ ತಂದೆಯ ಗೃಹದಲ್ಲೂ, ಬಳಿಕ ನಾಲ್ಕು ವರ್ಷಗಳ ಕಾಲ ಪತಿಯ ಗೃಹದಲ್ಲೂ ವ್ರತೋಪಾಸನೆ ಮಾಡುವುದು ಸಂಪ್ರದಾಯ.

ಸೂರ್ಯನು ಹಸ್ತಾ ನಕ್ಷತ್ರಕ್ಕೆ ಪ್ರವೇಶ ಮಾಡುವ ದಿನದಲ್ಲಿ ಗಜಗೌರೀ ವ್ರತವನ್ನು ಶ್ರದ್ಧಾಪೂರ್ವಕ ಮಾಡಬೇಕು. ಆನೆಯ ಮೇಲೆ ಗೌರಿಯನ್ನಿಟ್ಟು ಪೂಜಿಸಿರುವುದರಿಂದ ಇದಕ್ಕೆ ಗಜಗೌರಿ ವ್ರತವೆಂಬ ಹೆಸರು. ಮೊದಲಿಗೆ ಇದನ್ನು ಗಾಂಧಾರಿ - ಕುಂತಿಯರು ಮಾಡಿದರೆಂದು ವ್ರತ ಕಥೆಯಲ್ಲಿ.ಇದಕ್ಕೆ ಐರಾವತ ಪೂಜೆ ಎಂಬ ಹೆಸರೂ ಇದೆ. ಇದರಂತೆಯೇ ಭಿನ್ನ ಭಿನ್ನ ಕಾಲಗಳಲ್ಲಿ ಮಾಡುವ ಹಲವು ಗೌರಿ ಪೂಜೆಗಳಿವೆ.ಅವುಗಳಲ್ಲಿ ಈಗ ಪ್ರಚಲಿತವಾಗಿರುವ ಕೆಲವು ವ್ರತಗಳ ಹೆಸರು ಮತ್ತು ವ್ರತಾನುಷ್ಠಾನ ಕಾಲ ಹೀಗಿದೆ:

ಚೈತ್ರಮಾಸದ ಶುಕ್ಲ ಪಕ್ಷ ತೃತೀಯಾ ದಿವಸ -ಸೌಭಾಗ್ಯವ್ರತ.
ವೈಶಾಖ ಮಾಸದ ಶುಕ್ಲ ಪಕ್ಷ ತೃತೀಯಾ ದಿವಸ -ವರ್ತಕ ಗೌರೀ ವ್ರತ.
ವೈಶಾಖ ಮಾಸದ ಶುಕ್ಲ ಪಕ್ಷ ಪಂಚಮಿ - ಲಾವಣ್ಯ ಗೌರೀ ವ್ರತ,
ಶ್ರಾವಣ ಮಾಸದ ಶುಕ್ಲ ಪಕ್ಷ ತೃತೀಯ - ಸಂಪದ್ಗೌರೀ ವ್ರತ.
ಮಾಘಮಾಸದ ಶುಕ್ಲ ಪಕ್ಷ ತೃತೀಯಾ -ಮೌನಗೌರೀ ವ್ರತ.

ಸೂರ್ಯೋದಯದ ಕಾಲದಲ್ಲಿ ಉಕ್ತ ತಿಥಿಯಿರುವ ದಿವಸದಲ್ಲೇ ವ್ರತಾನುಷ್ಠಾನ ಮಾಡಬೇಕು.

ಈ ಹಬ್ಬವನ್ನು ಆಚರಿಸುವ ಪದ್ಧತಿ ಒಂದೊಂದು ಕಡೆ ಒಂದೊಂದು ರೀತಿ, ಹಳೇ ಮೈಸೂರು ಭಾಗದಲ್ಲಿ ಗೌರಿಯ ವಿಗ್ರಹ ತಂದು ಕಲಶ ಸ್ಥಾಪಿಸಿ ಪೂಜಿಸುತ್ತಾರೆ. ಜೊತೆಗೆ ಹೊಸದಾಗಿ ಮದುವೆಯಾದ ಹೆಣ್ಣು ಮಕ್ಕಳು ಐದು ಮೊರದ ಬಾಗಿನವನ್ನು ಇಟ್ಟು ಪೂಜಿಸಿ ತಾಯಿಗೆ ಇತರ ಮುತ್ತೈದೆಯರಿಗೆ ನೀಡಿದರೆ ಉಳಿದವರು ಕನಿಷ್ಠ ಎರಡು ಬಾಗಿನ ಇಡುತ್ತಾರೆ. ಮಳೆಗಾಲದ ದಿನ ಬಾವಿ, ಕೆರೆ ಕಟ್ಟೆಗಳು, ನದಿಗಳು ತುಂಬಿ ಹರಿಯುತ್ತದೆ. ಜನಜೀವನದ ಉಸಿರಿಗೆ ಭೂಮಿಯ ಹಸಿರಿಗೆ ಕಾರಣವಾದ ಆ ಗಂಗೆಯರಲ್ಲಿ ಸಮೃದ್ಧತೆ ನೆಲೆಸಲಿ ಎನ್ನುವ ಹಾರಕೆಯೊಂದಿಗೆ ಗೌರಿಯ ವಿಗ್ರಹವನ್ನು ಗಣೇಶನ ಜೊತೆಗೆ ವಿಸರ್ಜಿಸುವಾಗ ಮಡಲಕ್ಕಿ ತುಂಬಿ ಬೀಳ್ಕೊಡುತ್ತಾರೆ.

ಗಣಪನಿಗೆ ಪಂಚಕಜ್ಜಾಯ, ಮೋದಕ ಕರ್ಜಿಕಾಯಿ, ಕಡಬು, ಚಕ್ಕುಲಿ, ಉಂಡೆ, ಹೀಗೆ ಕನಿಷ್ಠ 21 ಬಗೆಯ ಸಿಹಿ ತಿಂಡಿಗಳನ್ನು ಮಾಡಿದರೆ ಗೌರಿಗೆ ಮಾತ್ರ ಹೋಳಿಗೆ (ಒಬ್ಬಟ್ಟು) ಪ್ರಿಯವಂತೆ ಅರಿಶಿಣದ ಉಂಡೆಯ ರೂಪದಲ್ಲಿ ಪೂಜೆಗೊಳ್ಳುವ ಆ ತಾಯಿ, ಬರಿ ಅರಿಶಿಣದ ಬೊಂಬೆಯಲ್ಲ. ಮಂಗಳ, ಮಾಂಗಲ್ಯ, ಸಮೃದ್ಧಿಯ ಸಂಕೇತ. ಪೂಜೆ ಪಡೆದು, ಉಡಿ ತುಂಬಿಸಿಕೊಂಡು ಹೋರಟು ಬಿಡುವುದಿಲ್ಲ. ಆಕೆ ಮಗನೊಡನೆ ನಿಲ್ಲುತ್ತಾಳೆ, ಅಂತಲೆ ಗಣೇಶ ಮೂರ್ತಿಯ ಮುಂದೆ ಗೌರಿಯ ವಿಗ್ರಹವಿರುತ್ತದೆ. ತಾಯಿ ಮಗನೊಂದಿಗೆ ಪೂಜೆಗೊಳ್ಳುವ ಪರಿಗೆ ಸ್ವತಃ ಈಶ್ವರನೂ ಅರೆಕ್ಷಣ ಕರಗಬೇಕು! ಮಗನನು ಗಂಗೆಯ ಮಡಿಲಿಗೆ ಹಾಕುವ ಮುನ್ನ ಆಕೆ ಅವನನ್ನು ಬರಿಗೈಯಲ್ಲಿ ಕಳುಹಿಸುವುದಿಲ್ಲವಂತೆ ಅಂತಲೆ ಗಣೇಶ ವಿಗ್ರಹದ ಕೈಗೆ ಪುಟ್ಟದೊಂದು ಚೀಲದಲ್ಲಿ ಅನ್ನ ಮೊಸರು ಕಲಸಿ ಕಟ್ಟಿ ಕಳಿಸುತ್ತಾರೆ.

ಮಗನನ್ನು ಕಳಿಸುತ್ತಿರುವುದು ತನ್ನ ತಂಗಿಯ (ಗಂಗೆ) ಬಳಿಗೆ ಆದರೂ, ಮಗನಿಗೆ ದಾರಿಯಲ್ಲಿ ಹಸಿವಾಗಬಾರದೆಂದು ಕಾಳಜಿ ಮಾಡಿ ಕಟ್ಟುವ ಬುತ್ತಿಗಂಟು ತಾಯಿ ಪ್ರೀತಿಗೆ ಸಾಕ್ಷಿ.

ಸಂಭ್ರಮ ಸಡಗರದ ಹಬ್ಬ ಇಂದು ತನ್ನ ನಿಜ ಸ್ವರೂಪವನ್ನೇ ಕಳೆದುಕೊಳ್ಳುತ್ತಿದೆ. ಆಧುನಿಕತೆಯ ಸೆಳೆತಕ್ಕೆ ಸಿಲುಕಿದ ಎಷ್ಟೋ ಕುಟುಂಬಗಳಲ್ಲಿ ಆಚರಣೆಯ ಸ್ವರೂಪವೂ ಬದಲಾಗಿದೆ ಅಥವಾ ಇಲ್ಲವಾಗಿಸಿದೆ ಬಾಗಿನ ನೀಡುವ ಸಂಪ್ರದಾಯವಂತೂ ಸಂಪೂರ್ಣ ಮರೆಯಾಗಿದೆ. ಎಷ್ಟೋ ಮನೆಗಳಲ್ಲಿ ಬಾಗಿನದ ಬದಲು ಸಹೋದರಿಯರ ಕೈಗೊಂದಿಷ್ಟು ಹಣ ನೀಡಿ ನಿನಗಿಷ್ಟವಾಗಿದ್ದನ್ನು ಕೊಂಡುಕೋ ಎನ್ನುವವರೇ ಹೆಚ್ಚಾಗಿದ್ದಾರೆ.

ಹಬ್ಬಕ್ಕೆಂದು ಹೆಣ್ಣು ಮಗಳನ್ನು ತವರಿಗೆ ಕರೆಸುವ - ಕಳುಹಿಸುವ ಸಂಪ್ರದಾಯವೂ ಕ್ರಮೇಣ ಕಣ್ಮರೆಯಾಗುತ್ತಿವೆ. ದೇವಿಯ ನೈವೇದ್ಯಕ್ಕೆಂದು ತಿಂಡಿಗಳನ್ನು ಮನೆಯಲ್ಲಿಯೇ ತಯಾರಿಸುವುದು ಇಂದು ಮೊದಲಿನಂತೆ ಇಲ್ಲದಾಗಿದೆ.

ಗೌರಿ ಪೂಜೆ ಈಗಿನ ಆಧುನಿಕ ಮನಸ್ಸುಗಳಲ್ಲಿ ಹಲವಾರು ಪ್ರಶ್ನೆಗಳನ್ನು ದ್ವಂದ್ವಗಳನ್ನು ಹುಟ್ಟು ಹಾಕುವುದು ಸುಳ್ಳಲ್ಲ. ಆದರೂ ಒಳಗೊಳಗೆ ಮೂಲೆಯಲ್ಲಿ ನೆಲೆಸಿರುವ ಭಾರತೀಯತೆಯ ಭಾವನೆ, ಸಂಸ್ಕೃತಿ,ಸಂಪ್ರದಾಯಗಳ ಗುಂಗು, ಹಬ್ಬ - ಹರಿ ದಿನಗಳನ್ನು ಆಧುನಿಕತೆಯ ಅವಶೇಷಗಳನ್ನಾಗಿಸಲು ಬಿಡುವುದಿಲ್ಲ.

# ವರಾಹ ಜಯಂತಿ

- ಪ್ರಣವ
90356 18076



ಭಗವಾನ್ ಮಹಾವಿಷ್ಣುವಿನ ದಶಾವತಾರಗಳಲ್ಲಿ ವರಹಾವತಾರ ಮೂರನೇ ಅವತಾರ ಹಿರಣಾಕ್ಷನೆಂಬ ರಾಕ್ಷಸನಿಂದ ರಸಾತಳಕ್ಕೆ ತಳ್ಳಲ್ಪಟ್ಟ ಪೃಥ್ವಿಯನ್ನು ಉದ್ಧರಿಸಲು ಶ್ರೀಹರಿಯು ಶ್ವೇತವರಾಹದ ರೂಪ ತಾಳಿ ಬಂದ ದಿನವು 'ವರಾಹ ಜಯಂತಿ" ಎಂದು ಪ್ರಸಿದ್ಧವಾಗಿದೆ. ಕಾಲಗಣನೆಯಲ್ಲಿ ಪಂಚಾಂಗಗಳಲ್ಲಿ ಪ್ರಸ್ತುತ ನಡೆಯುತ್ತಿರುವ ಕಲ್ಪಕ್ಕೆ ಶ್ವೇತವರಾಹಕಲ್ಪವೆಂಬ ವರ್ಣನೆಯಿದೆ. ಸಸ್ಯಶ್ಯಾಮಲೆಯಾದ ಭೂದೇವಿಯು ವಿಷ್ಣುವಿನ ಪತ್ನಿಯಾಗಿದ್ದು ಜಗತ್ತಿನ ಸರ್ವ ಚರಾಚರ ಜೀವಿಗಳಿಗೂ ಮಾತೃಸ್ಥಾನಿ. ಅಂತಹ ಜಗಜ್ಜನನಿಯನ್ನು ಪೀಡಿಸತೊಡಗಿದ ರಾಕ್ಷಸನ ದುಷ್ಕೃತ್ಯದಿಂದ ಧರೆಯ ಸಮಸ್ತರಿಗೂ ಸಂಕಷ್ಟ ಉಂಟಾಯಿತು. ಗೋವುಗಳ, ಮುನಿಪತ್ನಿಯರ,ಗರ್ಭಿಣಿಯರ ಜತೆ ಸೇರಿ ಕೊಂಡ ಭೂದೇವಿ ಸ್ವರಕ್ಷಣೆ ಮಾಡಿಕೊಳ್ಳುವಲ್ಲಿ ಅಸಾಧ್ಯ ನೋವನ್ನು ಅನುಭವಿಸಿದಳು. ಪ್ರಪಂಚವೇ ಈ ನೋವಿನಿಂದ ಕಂಗೆಟ್ಟಿತ್ತು. ಆಗ ರಾಕ್ಷಸನಿಂದ ಪಾರಾಗಲು ಎಲ್ಲಿಯೂ ಆಶ್ರಯ ಸಿಗದ ಭೂಮಾತೆ ರಸಾತಳಕ್ಕೆ ಧುಮುಕಿ ಶ್ರೀಹರಿಯನ್ನು ಪ್ರಾರ್ಥಿಸಿದಳು. ಚರಿತ್ರಾರ್ಹ ಮಹಾವ್ಯಕ್ತಿಗಳೆಲ್ಲರೂ ಅದೇ ಕಾಲದಲ್ಲಿ ಪ್ರಾರ್ಥಿಸಿದರು.

ವರಾಹ ಎಂದರೆ ಹಂದಿ. ಹಿರಣ್ಯಾಕ್ಷವೆಂಬ ರಾಕ್ಷಸನಿಂದ ಭೂದೇವಿಯನ್ನು ರಕ್ಷಿಸುವುದಕ್ಕಾಗಿ ತಾಳಿದ ಅವತಾರ. ತಾತ್ತ್ವಿಕವಾಗಿ ಹಿರಣ್ಯಾಕ್ಷನೆಂದರೆ, ಬಂಗಾರದ ಮೇಲೆ ದೃಷ್ಟಿಯಿರುವವರು ಎಂದರ್ಥ. ಕೆಲವರಿಗೇ ದೇವರೇ ಬಂಗಾರ ಇನ್ನು ಕೆಲವರಿಗೆ ಬಂಗಾರವೇ ದೇವರು! ದೇವರೇ ಬಂಗಾರವೆನ್ನುವವರು ಊರ್ಧ್ವಮುಖಿಯಾಗಿ ಶ್ರೇಷ್ಠತೆಯನ್ನು ಪಡೆಯುವರು. ಆದರೆ ಬಂಗಾರವೇ ದೇವರೆಂದು ಈ ಸಂಸಾರ ಸಾಗರದಡಿಯಲ್ಲಿ ಸಿಕ್ಕಿ ಹಾಕಿಕೊಂಡವರನ್ನು ಮೇಲಕ್ಕೆ ತರುವವನೇ ವಿಷ್ಣುವರಾಹಿ! ವರಾಹ ಎಂದರೆ ಮೋಡ ಎಂದೂ ಅರ್ಥವಿದೆ. ಸಮುದ್ರದಿಂದ ಆವಿಯಾದ ಜಲವು ಆಕಾಶಕ್ಕೆ ಹೋಗಿ ಗಾಳಿಯಿಂದ ತಣ್ಣಗಾಗಿ ಘನೀಕೃತವಾದ ಮೋಡವಾಗುವಂತೆ ಲೌಕಿಕ ಮೋಹದಿಂದ ಈ ಶರೀರವೆಂಬ ಭೂಮಿಯು ಅಜ್ಞಾನದಿಂದ ಘನೀಕೃತವಾದಾಗ ಮೋಡವನ್ನು ಕರಗಿಸುವಂತೆ ಜ್ಞಾನಾಗ್ನಿ ಸ್ವರೂಪ ನಾದ ಭಗವಂತನು, ಜಡತ್ವವನ್ನು ಕರಗಿಸಿ ನೀರಿನ ಸ್ವರೂಪವನ್ನಿತ್ತು, ನದಿಯಂತೆ ಪ್ರವಹಿಸಿ, ನಾಲ್ಕು ಜನರಿಗೆ ಉಪಕಾರಿಯಾಗಿ ಮತ್ತೆ ತನ್ನನ್ನು ಸೇರುವಂತೆ ಮಾಡುವವನು ನಾರಾಯಣ ನಮ್ಮನ್ನು ಸಂಸಾರ ಸಾಗರದಿಂದ ಮೇಲೆತ್ತುವವನು ವಿಷ್ಣುವರಾಹಿ, ಕಕ್ಷೆಯ ತಪ್ಪಿದ ಮಾನವರನ್ನು ಮೇಲೆಕ್ಕತ್ತಿ ಮತ್ತೆ ಸುಸ್ಥಿತಿಯಲ್ಲಿರಿಸುವವನು ವಿಷ್ಣುವರಾಹಿ, ವರಾಹ ಎಂಬ ಶಬ್ದದ ಅಕ್ಷರಾರ್ಥ ಅತ್ಯುತ್ತಮವಾದುದು ಎಂಬುದು ಭೂಮಿಯ ಮೇಲೆ ವಾಸಿಸಲು ಆರಂಭಿಸಿದ ಆರಂಭಿಕ ಸಸ್ತನಿಗಳಲ್ಲಿ ಹಂದಿಯು ಬಲಿಷ್ಠವಾದದ್ದರಿಂದ ಇದು ಸೃಷ್ಟಿಯ ಮೂರನೇ ಹಂತವನ್ನು ಪ್ರತಿನಿಧಿಸುತ್ತದೆ.

## ವರಾಹಸ್ವಾಮಿಯ ಜನನ:

ರಾಮನವಮೀ ಕೃಷ್ಣಾಷ್ಟಮೀ, ನರಸಿಂಹ ಜಯಂತಿಗಳು ಪ್ರಸಿದ್ಧವಾಗಿದೆ. ಇದರಂತೆ ವರಾಹವಾತಾರ ಯಾವ ತಿಥಿಯಲ್ಲಿ ಎಂಬುದು ಪ್ರಶ್ನೆ.

ಶ್ರೀಮದ್ಭಾಗವತ(ತೃತೀಯ ಸ್ಕಂದ ಹದಿಮೂರನೇ ಅಧ್ಯಾಯ)ದಲ್ಲಿ ಈ ಅವತಾರದ ವೃತ್ತಾಂತವು ಹೀಗಿದೆ - ಇದು ಮೊದಲನೆಯ ಸ್ವಯಂಭುವ ಮನ್ವಂತರದಲ್ಲಿ ನಡೆದ ಅವತಾರ, ಬ್ರಹ್ಮನು ಪ್ರಪಂಚದ ಸೃಷ್ಟಿಗೆ ಪ್ರಾರಂಭಿಸಿ ಮನು ಶತರೂಪೆಯೆಂಬ ದಂಪತಿಗಳನ್ನು ಸೃಷ್ಟಿಸಿದನು. ಇವನೇ ಸ್ವಯಂಭುವ ಮನು. ತಂದೆಯಾದ ಬ್ರಹ್ಮನು ಭೂಮಂಡಲದಲ್ಲಿ ಭಗವದಾರಾಧನಾ ರೂಪವಾದ ಕರ್ಮಗಳನ್ನು ಮಾಡುತ್ತಾ

ಸ್ವಯಂಭುವ ಮನುವು ಭೂಮಿಯನ್ನು ಅರಸುತ್ತ ಭೂಮಿಯನ್ನು ಕಾಣದೆ, ತಂದೆಯೇ! ಭೂಮಿಯು ನೀರಿನಲ್ಲಿ ಮುಳುಗಿ ಹೋಗಿದೆ.ನಾನು ಏನು ಮಾಡಲಿ? ಆಶ್ರಯವಿಲ್ಲದೆ ಏನು ಮಾಡಲು ಸಾಧ್ಯ? ಎಂದನು ಬ್ರಹ್ಮನಿಗೂ ಆಶ್ಚರ್ಯವಾಯಿತು. ಇದೇನಿದು? ಈಗ ತಾನೆ ಸೃಷ್ಟಿಸಿದ ಭೂಮಿ ಏನಾಯಿತು? ಪರಮ ಪುರುಷನ ನಾಭಿ ಕಮಲದಲ್ಲಿ ನಾನು ಜನ್ಮ ಪಡೆದು ಅವನ ಅನುಗ್ರಹದಿಂದಲೇ ಭೂಮಿಯನ್ನು ಸೃಷ್ಟಿಸಿದ. ಈಗ ಅವನೇ ನನಗೆ ದಾರಿ ತೋರಬೇಕು ಎಂದು ಚಿಂತಿಸುತ್ತಿರಲು ಚತುರ್ಮುಖನ ನಾಸ ರಂಧ್ರದಿಂದ ಒಂದು ಹಂದಿಯ ಮರಿಯು ಹೊರಕ್ಕೆ ಬಂದಿತು.

ಆದರೆ ಈ ವರಾಹವು ವಿಚಿತ್ರವಾಗಿತ್ತು. ನೀಲ ಮೇಘದಂತೆ ಬಣ್ಣ, ನಾಲ್ಕು ವೇದಗಳೇ ನಾಲ್ಕು ಪಾದಗಳು ಅಗ್ನಿಯೇ ಅದರ ನಾಲಿಗೆ, ರೋಮವು ದರ್ಭಮಯ.ಆದರೆ ಉಸಿರು ತುಪ್ಪದಂತೆ ಗಂಧವನ್ನು ಬೀರುತ್ತಿತ್ತು.ಸಾಮಘೋಷದಂತೆ ಅದರ ಸ್ವರ. ಈ ರೀತಿ ಅದು ಇದ್ದ ಕಾರಣ ಇದು ಯಜ್ಞ ವರಾಹವೇ ಸರಿ ಎಂದು ಹರಿವಂಶ ಭವಿಷ್ಯ ಪರ್ವದಲ್ಲಿ ಹೇಳಿದೆ.

ಗಜೇಂದ್ರಲೋಲನಾದ ವರಾಹಮೂರ್ತಿಯು ಕ್ರೀಡಿಸುತ್ತಾ ಜಲರಾಶಿಯಲ್ಲಿ ಪ್ರವೇಶಿಸಿದನು. ಶ್ವೇತದ್ವೀಪದಲ್ಲಿ ಪರಮಪುರುಷನು ವಿಹರಿಸುತ್ತಿರಲು ಅವನ ಭವನದ ಪಶ್ಚಿಮ ದ್ವಾರಗಳಲ್ಲಿ ಜಯ-ವಿಜಯರು ನಿಯಮಿತರಾಗಿದ್ದರು. ಒಮ್ಮೆ ಸನಕಾದಿಗಳು ಭಗವದ್ದರ್ಶನಕ್ಕಾಗಿ ಬರಲು ಜಯ ವಿಜಯರು ಅವರನ್ನು ಒಳಕ್ಕೆ ಬಿಡಲಿಲ್ಲ ಇದರಿಂದ ಕುಪಿತರಾದ ಮುನಿಗಳು ಭೂಮಿಯಲ್ಲಿ ನರಜನ್ಮವೆತ್ತುವಂತೆ ಶಪಿಸಿದರು.ಪರಮ ಪುರುಷನಿಗೆ ಈ ವಿಷಯ ತಿಳಿದು ಮೂರು ಬಾರಿ ರಾಕ್ಷಸ ಜನ್ಮವನ್ನು ಪಡೆದು ನನ್ನಿಂದಲೇ ಹತರಾಗಿ ಪುನಃ ನಿಮ್ಮ ಸ್ಥಾನವನ್ನಲಂಕರಿಸಿ ಎಂದು ಅಜ್ಞಾಪಿಸಿದನು.ಇವರ ಮೊದಲನೇ ಜನ್ಮ ಹಿರಣ್ಯಾಕ್ಷ-ಹಿರಣ್ಯಕಶಿಪು. ಈಹಿರಣ್ಯಾಕ್ಷನೇ ಭೂಮಿಯನ್ನಪಹರಿಸಿ ಸಮುದ್ರದಲ್ಲಿ ಬಚ್ಚಿಟ್ಟಿದ್ದನು. ಭಯಂಕರವಾದ ಕೋರೆದಾಡೆಗಳಿಂದ ಅವನು ಕಠೋರನಾಗಿದ್ದನು. ಅವನು ಸಮುದ್ರದಲ್ಲಿ ಮುಳುಗಿದಾಗಲೇ ಸಮುದ್ರವು ರಭಸದಿಂದ ಸಿಡಿದು ಹೋಗಿ ಭಯಂಕರವಾದ ಶಬ್ದವನ್ನುಂಟುಮಾಡಿತು.

ಆ ದಿವ್ಯ ಯಜ್ಞವರಾಹನು ತನ್ನ ಕೋರೆದಾಡಿಗಳಿಂದ ಭೂಮಿಯನ್ನು ಚುಚ್ಚಿ ತನ್ನ ಕೋರೆಹಲ್ಲಿನ ಮೇಲೆ ಇಟ್ಟುಕೊಂಡು ಮೇಲೆ ಬಂದನು. ಹೀಗೆ ಎದ್ದು ಬರುವಾಗ ತನ್ನನ್ನು ಆಶ್ರಯಿಸಿದ ಹಿರಣ್ಯಾಕ್ಷನನ್ನು ಯಜ್ಞವರಾಹನು ಲೀಲೆಯಿಂದ ಜಲದಲ್ಲಿ ಸಂಹರಿಸಿಬಿಟ್ಟನು.ನೀರಿನಲ್ಲಿ ಸಮಾಶ್ರಿತಳಾಗಿದ್ದ ವಸುಂಧರೆಯನ್ನು ಮೇಲಕ್ಕೆತ್ತಿ ದುಷ್ಟ ಹಿರಣ್ಯಾಕ್ಷನನ್ನು ನಿಗ್ರಹಿಸಿದ ಸೂಕರ ರೂಪಿ ಭಗವಂತನ ಕುರಿತಾಗಿ ದೇವತೆಗಳು, ಋಷಿಗಳು ಕೊಂಡಾಡತೊಡಗಿದರು.

ಯಜ್ಞವರಾಹ, ಭೂವರಾಹನೆಂದು ಸೂಚಿಸಲ್ಪಟ್ಟ ಭಗವಂತನ ರೋಮದಲ್ಲಿ ಸರ್ವಯಜ್ಞಗಳೂ ಇವೆ.ತೊಗಲಿನಲ್ಲಿ ಗಾಯತ್ರಿ. ರೋಮಗಳಲ್ಲಿ ದರ್ಭೆ,ನೇತ್ರಗಳಲ್ಲಿ ಘೃತ (ತುಪ್ಪ) ನಾಲ್ಕು ಕಾಲುಗಳಲ್ಲಿ ಅಧ್ವರ್ಯ ಉದ್ಗಾತೃ, ಹೋತೃ, ಬ್ರಹ್ಮಾ ಎಂಬ ಚತುರ್ವೇದ ಪರಿಣಿತ ಋತ್ವಿಜರು ಇರುತ್ತಾರೆ. ಬಿಳಿಯ ಹಂದಿಯ ಮುಖಾಗಾತ್ರದಲ್ಲಿ 'ಸ್ರುಕ್' ಮೂಗಿನ ಹೊಳ್ಳೆಗಳಲ್ಲಿ 'ಸ್ರುವಾ' ಹೊಟ್ಟೆಯಲ್ಲಿ 'ಇಡಾ' ಎಂಬ ಯಜ್ಞಾಕ್ಷುದಾಪಾತ್ರೆ, ಕಿವಿಗಳಲ್ಲಿ 'ಚಮಸ', ಮುಖದಲ್ಲಿ 'ಪಾಶಿತ್ರ' ಕಂಠದಲ್ಲಿ 'ಗ್ರಹ' (ಸೋಮರಸ ಪಾತ್ರೆ) ವರಾಹದ ಅಗಿಯುವಿಕೆ ಅಗ್ನಿಹೋತ್ರ ಅವತಾರ ತಾಳುವಿಕೆಯೇ 'ದೀಕ್ಷಣೀಯ' ಎಂಬ ಇಷ್ಟಿ ಕೋರೆದಾಡೆಗಳೇ 'ಪ್ರಾಯ ಣೀಯ (ದೀಕ್ಷಾನಂತರದ ಇಷ್ಟಿ) ಮತ್ತು 'ಉದಯನೀಯ (ಯಜ್ಞ ಸಮಾಪ್ತಿ)

ಸಪ್ತದಾತುಗಳೇ ಅಗ್ನಿಹೋಮ, ಆತ್ಯಗ್ನಿಸ್ಟೋಮ, ಉಕ್ಥ, ಷೋಡಶೀ ವಾಜಪೇಯಿ ಅತಿರಾತ್ರ, ಅಪ್ತೋರ್ಯಾಮ ಎಂಬ ಏಳು ಸಂಸ್ಥೆಗಳು ವರಾಹ ರೂಪದ ಶರೀರದ ಸಂಧಿ ಭಾಗಗಳೇ ದ್ವಾದಶಾಹ ಸತ್ರಗಳು, ಮಂತ್ರ, ದ್ರವ್ಯ ಕರ್ಮ, ಜ್ಞಾನ, ಕ್ರಿಯಾಶಕ್ತಿ ಸ್ವರೂಪನಾದ ವರಾಹಸ್ವಾಮಿಯ ಲೀಲೆ ಅನಂತ. ನರಸಿಂಹ ಪುರಾಣದ 39ನೇ ಅಧ್ಯಾಯದಲ್ಲಿ ವರ್ಣಿಸಲ್ಪಟ್ಟಂತೆ ವರಾಹನ ನಯನದ್ವಯಗಳೇ ಸೂರ್ಯಚಂದ್ರರು. ಯಜ್ಞಧರ್ಮಗಳೇ ಆತನ ಕರ್ಣಗಳು, ಹಂದಿಯ ಕೂಗು ಸಾಮಗಾನ, ಮೂಗು ಹವಿಸ್ಸು, ನಕ್ಷತ್ರ ತಾರೆಗಳೇ ಹಾರ.

ಭೂಮಿಯನ್ನು ಉದ್ಧರಿಸಿದ ವರಾಹರೂಪಿ ಮಹಾವಿಷ್ಣುವು ಕಾಕವೆಂಬ ತೀರ್ಥದಲ್ಲಿ ಅದೃಶ್ಯವಾಗಿ ಮೂಲದಲ್ಲಿ ಸೇರಿ ಸರ್ವರನ್ನು ಪೊರೆಯುತ್ತಾನೆಂದು ಪುರಾಣೋಕ್ತಿ. ಭಾದ್ರಪದ ಶುಕ್ಲ ತದಿಗೆಯ ವರಾಹಜಯಂತಿಯ ನಿಮಿತ್ತದಲ್ಲಿ, ಪೃಥ್ವಿಯು ಸದಾ ಸಸ್ಯಶಾಮಲೆಯಾಗಲೆಂದು ವರಾಹಸ್ವಾಮಿಯ ಭಕ್ತರ ಕೋರಿಕೆ.

ಭಗವದವತಾರಗಳಿಗೆ ದುಷ್ಟರ ಶಿಕ್ಷಣ, ಸಜ್ಜನ ಸಂರಕ್ಷಣೆಯೇ ಮುಖ್ಯ ಗುರಿಯು ವರಾಹವೆಂದರೆ ಹಂದಿ. ಕೆಸರಿನಲ್ಲಿ ಹೊರಳಾಡುವುದು ಮತ್ತು ಮಲಭಕ್ಷಣೆ ಇದರ ಸಹಜವಾದ ಕಾರ್ಯ, ಮಾನವ ಈ ಪ್ರಾಣಿ ಹತ್ತಿರ ಬಂದರೆ ದೂರ ಸರಿಯುತ್ತಾನೆ.ಇಂತಹ ನಿಕೃಷ್ಟವಾದ ವರಾಹದ ರೂಪವನ್ನು ಭಗವಂತ ಹೊಂದಲು ಕಾರಣವೇನು ಎಂಬುದಾಗಿ ಪ್ರಶ್ನೆಯು ಸಹಜವಾಗಿಯೇ ಬರುತ್ತದೆ. ಪರಮಪುರುಷನು ಯಾವ ರೂಪ ಧರಿಸಿದರೂ ಅದು ಅಪ್ರಾಕೃತವಾಗಿ ಮಂಗಳಕರವಾಗಿಯೇ ಇರುತ್ತದೆ.

ಆದಿವರಾಹಮೂರ್ತಿ ಪ್ರಕೃತಿ ಪರಿಸರದ ಸಂರಕ್ಷಕನಾಗಿ ನಮ್ಮೆಲ್ಲರ ಆರಾಧ್ಯ ಮೂರ್ತಿ ಆಗಿ ಕಂಗೊಳಿಸುತ್ತಿದ್ದಾನೆ. ಆದ್ದರಿಂದಲೇ ಇಂದಿಗೂ ಸಂಕಲ್ಪದ ಸಮಯದಲ್ಲಿ 'ಶ್ವೇತ ವರಾಹ ಕಲ್ಪೇ ವೈವಸ್ವತಮನ್ವಂತರೇ ಎಂದೇ ಇಡೀ ಮನುಕುಲ ನೆನೆಪಿಸಿಕೊಂಡು ನಮಿಸುತ್ತದೆ.

ಭಗವಾನ್ ವೇದವ್ಯಾಸರಿಂದ ರಚಿತವಾದ ವರಾಹ ಪುರಾಣವು ಒಂದು ವಿಶಿಷ್ಟವಾದ,ಶ್ರೇಷ್ಟವಾದ ಸಾತ್ವಿಕ ಪುರಾಣಗಳಲ್ಲಿ ಒಂದಾಗಿದೆ. ಇದು 218 ಅಧ್ಯಾಯಗಳನ್ನು ಒಳಗೊಂಡು ಆದಿಯಲ್ಲಿ ಸೃಷ್ಟಿವಿಚಾರ, ಮಹಾಪುರುಷ,ದೇವ ದಾನವರ, ದಾನಿಗಳ ವಿಚಾರಗಳನ್ನು ನಿರೂಪಿಸಿದೆ.

ಏಳನೆಯ ಅಧ್ಯಾಯದಲ್ಲಿ ಗಯಾದಲ್ಲಿ ಪಿಂಡ ಪ್ರಧಾನದಿಂದ ಪಿತೃಗಳ ಉದ್ಧಾರ ವಿಚಾರ,ಗಯಾದಲ್ಲಿ ಇರುವ ಗದಾಧರನ ಮಹಿಮೆ ತಿಳಿಸುವಾಗ ಶ್ರಾದ್ಧವನ್ನು ಆಚರಿಸುವವನು ಶ್ರಾದ್ಧಕಾಲದಲ್ಲಿ ಸಿಟ್ಟು ಅವಸರ ಮತ್ತು ಊಟಕ್ಕೆ ಕುಳಿತ ಬ್ರಾಹ್ಮಣನನ್ನು ದಾಟಿ ಹೋಗುವುದು,ಇವುಗಳನ್ನು ಮಾಡಕೂಡದು ಎಂದು ಹೇಳಲಾಗಿದೆ.ಶ್ರೀವರಾಹ ಪುರಾಣಾಂತರ್ಗತ ಶ್ರೀವೆಂಕಟಾಚಲ ಮಹಾತ್ಮೆ ಬಹಳ ಪ್ರಸಿದ್ಧವಾದುದು.

### ವರಾಹ ಕ್ಷೇತ್ರಗಳು

ರಾಮ, ಕೃಷ್ಣ ಮತ್ತು ನೃಸಿಂಹಕ್ಷೇತ್ರಗಳಿಗೆ ಹೋಲಿಸಿದರೆ ವರಾಹಕ್ಷೇತ್ರಗಳು ತುಂಬಾ ವಿರಳ. ತಿರುಪತಿಯು ಮೂಲವಾಗಿ ವರಾಹಕ್ಷೇತ್ರವಾಗಿದೆ. ಜಪ-ತಪ-ಹೋಮಗಳಲ್ಲಿ 'ಆದಿವರಾಹಕ್ಷೇತ್ರೇ' ಆನಂದನಿಲಯ ವಿಮಾನಚ್ಛಾಯಾಯಾಂ ಅಲಮೇಲುಮಂಗಾ ಸಮೇತ ಶ್ರೀಶ್ರೀನಿವಾಸ ಸ್ವಾಮಿ ಎಂದು ಸಂಕಲ್ಪ ಹೇಳುವುದು ರೂಢಿಯಲ್ಲಿದೆ.

ಸ್ವಾಮಿಪುಷ್ಕರಿಣಿಗೆ ಸೇರಿದಂತಿರುವ ವರಾಹ ಸನ್ನಿಧಿಯ ಮುಂದೆ ಅವಭೃತಸ್ನಾನ ಇತ್ಯಾದಿ ಉತ್ಸವಗಳು ಜರುಗುವುವು. ತಿರುಮಲೆಯಲ್ಲಿ ಮೊದಲು ವರಾಹದೇವರನ್ನು ದರ್ಶನ ಮಾಡಿದ ಅನಂತರವೇ ಶ್ರೀನಿವಾಸನ ದರ್ಶನ ಮಾಡಬೇಕು.

ಅಷ್ಟಸ್ವಯಂಕ್ಷೇತ್ರಗಳಲ್ಲಿ ಒಂದಾದ ಶ್ರೀಮುಷ್ಣಂನಲ್ಲಿ ಶ್ವೇತವರಾಹಸ್ವಾಮಿಯು ನೆಲೆಸಿರುವಲ್ಲಿ ಒಂದು ವಿಶೇಷವಿದೆ. ಮಾಘಮಾಸದಲ್ಲಿ ಉತ್ಸವಮೂರ್ತಿಯನ್ನು ಸಮುದ್ರ ಸ್ನಾನೋತ್ಸವಕ್ಕಾಗಿ ತೆಗೆದುಕೊಂಡು ಹೋಗುತ್ತಾರೆ.

## ತಿರುಪತಿಯಲ್ಲಿ ದರ್ಶನೀಯ ಆಲಯಗಳು :

### ಶ್ರೀಗೋವಿಂದರಾಜಸ್ವಾಮಿ ಆಲಯ:

ಇತಿಹಾಸದ ಪ್ರಕಾರ ಈ ಕ್ಷೇತ್ರವನ್ನು ಶ್ರೀವೈಷ್ಣವಾಚಾರ್ಯರಾದ ರಾಮಾನುಜರು ಪ್ರತಿಷ್ಠಿಸಿದರೆಂದು ಪ್ರತೀತಿ. ಗೋವಿಂದರಾಜ ಸ್ವಾಮಿ ಆದಿಶೇಷನಮೇಲೆ ಶಯನ ಭಂಗಿಯಲ್ಲಿ ದರ್ಶನ ಕೊಡುತ್ತಾರೆ. ಆಂಡಾಳ್, ಪಾರ್ಥಸಾರಥಿ ಮತ್ತು ವೆಂಕಟೇಶ್ವರಸ್ವಾಮಿ ಗುಡಿಗಳು ಗೋವಿಂದರಾಜಸ್ವಾಮಿ ಆಲಯ ಪ್ರಾಂಗಣದಲ್ಲಿವೆ. ವಿಜಯನಗರ ರಾಜರ ಶಿಲ್ಪಕಳಾಚಾತುರ್ಯಕ್ಕೆ ಪ್ರಸಿದ್ಧಿಯಾಗಿದೆ ಈ ಆಲಯ.

### ಶ್ರೀಕೋದಂಡರಾಮಸ್ವಾಮಿ ಆಲಯ:

ತಿರುಪತಿ ರೈಲ್ವೇನಿಲ್ದಾಣದಿಂದ ಒಂದು ಕಿಲೋಮೀಟರು ದೂರದಲ್ಲಿರುವ ಈ ಆಲಯದಲ್ಲಿ ಕೋದಂಡರಾಮಸ್ವಾಮಿ ನೆಲೆಸಿದ್ದಾನೆ. ರಾವಣ ಸಂಹಾರದನಂತರ ಸೀತಾಲಕ್ಷ್ಮಣರೊಡನೆ ಶ್ರೀರಾಮನು ಈ ಸ್ಥಳದಲ್ಲಿ ಕೆಲವು ಕ್ಷಣ ಇದ್ದ ನೆನಪಿಗಾಗಿ ಈ ಆಲಯ ನಿರ್ಮಿಸಲಾಗಿದೆ.

### ಶ್ರೀಕಪಿಲೇಶ್ವರಸ್ವಾಮಿ ಆಲಯ:

ತಿರುಪತಿ ಪಟ್ಟಣಕ್ಕೆ 3 ಕಿ.ಮೀ ದೂರದಲ್ಲಿ ಪ್ರಸಿದ್ಧ ಶೈವ ಕ್ಷೇತ್ರವಿದೆ. ಕಪಿಲ ಮಹರ್ಷಿ ಪೂಜಿಸಿದ ಶಿವಲಿಂಗವಾದುದರಿಂದ ಕಪಿಲೇಶ್ವರನೆಂದು ಇಲ್ಲಿರುವ ತೀರ್ಥ ಕಪಿಲತೀರ್ಥ ಎಂದು ಕರೆಯಲಾಗಿದೆ

### ಅಲಮೇಲುಮಂಗಾಪುರ (ತಿರುಚಾನೂರು):

ತಿರುಪತಿಗೆ 5 ಕಿ.ಮೀ. ದೂರದಲ್ಲಿರುವ ಪ್ರಾಚೀನವಾದ ಕ್ಷೇತ್ರ ತಿರುಚಾನೂರು. ಇದನ್ನೇ ಅಲಮೇಲು ಮಂಗಾಪುರವೆಂದು ಕರೆಯುತ್ತಾರೆ. ಶ್ರೀ ವೆಂಕಟೇಶ್ವರಸ್ವಾಮಿಯ ಪತ್ನಿಯಾದ ಶ್ರೀ ಪದ್ಮಾವತಿ ಅಮ್ಮನವರಿಗೆ ಇಲ್ಲಿ ಪೂಜೆ ನಡೆಯುತ್ತಿವೆ. ತಿರುಮಲೆಗೆ ಬಂದ ಯಾತ್ರಿಕರು ತಿರುಚಾನೂರು ಅಮ್ಮನವರನ್ನು ದರ್ಶಿಸಿದರೆ ತಮ್ಮ ಯಾತ್ರೆ ಫಲವಂತವಾಗುತ್ತದೆಯೆಂದು ಪ್ರಸಿದ್ಧಿ. ಕಾರಣ ತಿರುಮಲೆಯ ಯಾತ್ರಿಕರು, ತಿರುಚಾನೂರುಗೆ ಹೋಗಿ ಶ್ರೀಪದ್ಮಾವತಿಯನ್ನು ಪೂಜಿಸುತ್ತಾರೆ. ತಿರುಚಾನೂರಿನಲ್ಲಿರುವ ಪವಿತ್ರ ಪುಷ್ಕರಿಣಿ "ಪದ್ಮಸರೋವರ" ದಲ್ಲಿ ಶ್ರೀ ಪದ್ಮಾವತಿ ಅಮ್ಮನವರು ಆವಿರ್ಭವಿಸಿದಳೆಂದು ಸ್ಥಳ ಪುರಾಣ.

# ಅನಂತ ಚತುರ್ದಶಿ

-ಶ್ರೀಮತಿ. ಪಿ.ಎಸ್. ಅರ್ಚನಾ

ಭಾದ್ರಪದ ಶುದ್ಧ ಚತುರ್ದಶಿ ಅನಂತ ಪದ್ಮನಾಭ ವ್ರತ. ಪರಮಾತ್ಮನ ಅನುಗ್ರಹವನ್ನು ಪಡೆಯುವ ಪೂಜೆ, ಕ್ರಿಯಾ ವಿಧಾನಗಳಲ್ಲಿ ಅನಂತ ಪದ್ಮನಾಭವ್ರತ ಅತ್ಯಂತ ಶ್ರೇಷ್ಠ ಹಾಗೂ ಶೀಘ್ರ ಫಲದಾಯಕ, ಮಹಾವಿಷ್ಣುವು ಸಾಕಾರ ಸ್ವರೂಪನು. ವಿಷ್ಣುವಿನ ಕುರಿತು ಜನಪ್ರಿಯವಾದ ಪರಿಕಲ್ಪನೆ ಎಂದರೆ ಕ್ಷೀರಸಾಗರದ ಮೇಲೆ ಶೇಷಶಾಯಿಯಾಗಿ ವಿಶ್ರಮಿಸುತ್ತಿರುವುದು. ಒಂದೆಡೆ ಲಕ್ಷ್ಮಿಯು ಅವನ ಕಾಲನ್ನೊತ್ತುತ್ತಿದ್ದರೆ, ಇನ್ನೊಂದೆಡೆ ನಾಭಿಯಿಂದ ಬಂದ ಕಮಲದಲ್ಲಿ ಕುಳಿತ ಬ್ರಹ್ಮನು ಸೃಷ್ಟಿ ಕಾರ್ಯ ದಲ್ಲಿ ನಿರತನಾಗಿದ್ದಾನೆ. ಇದು ಇಡೀ ಬ್ರಹ್ಮಾಂಡದಲ್ಲಿರುವ ಚೇತನ ಸ್ವರೂಪವನ್ನೇ ಸೂಚಿಸುತ್ತದೆ. ಮುಗಿಲು ಕಡಲು ಗಳೆರಡರ ಕಲ್ಪನೆ ಬೆರೆತಂತಿರುವ ಇದನ್ನು ವಿಜ್ಞಾನದ ಆಕಾಶ ಗಂಗೆ (ಮಿಲ್ಕೀ ವೇ) ಪರಿಕಲ್ಪನೆಗೆ ಹೋಲಿಸಬಹುದು. ವಿಷ್ಣುವು ಮಲಗಿದ್ದಾನೆ ಎನ್ನಲಾದ ಆದಿಶೇಷ ಅಥವಾ ಅನಂತ ಎಂಬ ಸರ್ಪಕ್ಕೆ ಸಾವಿರ ಹೆಡೆಗಳಿದ್ದು ಅದು ಅನೇಕ ಲೋಕಗಳನ್ನು ಹೊತ್ತಿದೆ ಎನ್ನಲಾ ಗುತ್ತಿದೆ.

ಪರಮಾತ್ಮನು ಪರಮಚೇತನವಾದ್ದರಿಂದ ಆತನು ಇರದ ದೇಶ - ಕಾಲಗಳು ಇಲ್ಲ. ಜಗತ್ತು ಅನಾದಿ- ಅನಂತ ದೇವರು ನಿತ್ಯ ಪ್ರಕೃತಿ ಕಾಲವೂ ನಿತ್ಯಶ್ರೀಹರಿಯು ನಿತ್ಯ ಪದಾರ್ಥಗಳಿಗೂ ನಿತ್ಯತ್ವ ನೀಡುವ ಮಹಾಚೇತನ.

ಸಂತತಂ ಚಿಂತಯೇನಂತಂ ಎನ್ನುವುದು ಸುಜೀವಿಗಳಿಗೆ ಜೀವೋತ್ತಮದ ಸಂಕೇತ. ಸಾಮಾನ್ಯರಾದ ನಾವು ಕೇವಲ ವರ್ಷದಲ್ಲೊಂದು ದಿನ ಅನಂತ ದೇವನನ್ನು ಜ್ಞಾಪಿಸಿಕೊಳ್ಳು ತ್ತೇವೆ. ಇದು ಸಮುದಾಯದ ಹಬ್ಬವಲ್ಲ. ವೃತ್ತಿಗತ ನಿಷ್ಠೆ ಮತ್ತು ಶ್ರದ್ಧೆಯಿಂದ ಆಚರಿಸುವ ವ್ರತ. ಅನಂತವ್ರತದಂದು ನಾನು ಕುಂಕುಮ ವರ್ಣದ ರೇಷ್ಮೆ ಎಳೆಗಳನ್ನು ಕಲಾತ್ಮಕವಾಗಿ ಹೊಸೆದು ಶೇಷನಾಗನ ತೆಕ್ಕೆಯಾಗಿ ಹಣೆದು. ತುದಿ ಮೊದಲು ಕಾಣದಂತೆ ಹೊಸದು, ಅನಂತದಾರದ ಮಾಲೆ ಹಾಕಿ,ಕಂಕಣ ಕಟ್ಟಿಕೊಳ್ಳು ತ್ತೇವೆ.

ದಾರ ಧಾರಣೆಯ ಸಂಪ್ರದಾಯದ ಬಗ್ಗೆ ಸಂಶೋಧಕರು ಐತಿಹಾಸಿಕ ಬೆಳಕು ಚೆಲ್ಲಬೇಕಾಗಿದೆ. ಇದರಿಂದ ಶ್ರದ್ಧಾಳುಗಳ ಪೂಜೆಗೆ ಸಾಮಾಜಿಕವಾಗಿ ಹೊಸ ಅರ್ಥ ಸಿಗಬಲ್ಲದು. ಆಶ್ವ ಯುಜ ಮಾಸ ನಿಯಾಮಕ ಪದ್ಮನಾಭ. ಇಂತಹ ಪದ್ಮನಾಭನನ್ನು ಮಾಸದ ಆದಿಯಲ್ಲಿ ಪೂಜಿಸಿದರೆ, ಪದ್ಮನಾಭರೂಪಿ ಪರಮಾತ್ಮನು ಸಂರಕ್ಷಿಸುವನು. ಈ ವ್ರತವನ್ನು ಪಾಂಡವರು ಕೃಷ್ಣನ ಆಜ್ಞೆ ಯಂತೆ ನೆರವೇರಿಸಿದ ಕಾರಣ ನವರಾತ್ರಿಯ ಒಂಭತ್ತು ದಿನ ಗಳಲ್ಲಿ ಪ್ರತಿ ದೇವತೆಯನ್ನು ಅನುಸಂಧಾನಿಸಿ ನಂತರ ಪದ್ಮ ನಾಭನ ಅನುಗ್ರಹದಿಂದ ತಮ್ಮ ಆಯುಧಗಳನ್ನು ಪಡೆದು ವಿಜಯ ವನ್ನು ಸಾಧಿಸಿದರು. ಈ ಮಹಾ ದಿನವೇ ವಿಜಯದಶಮಿ.

ಅನಂತ ಚತುರ್ದಶಿಯಂದು ಏಳು ದರ್ಭೆಗಳು ತುದಿಗೆ ಗಂಟು ಹಾಕಿ ಹೆಡೆಯಂತೆ ಮಾಡಿ ಕಲಶದ ಹತ್ತಿರ ಇಡುವ ಸಂಕೇತ. ವಿಷ್ಣುವು ಶೇಷಶಾಯಿಯಾಗಿ ಏಳೂ ಲೋಕಗಳ ಲ್ಲಿಯೂ ವಿಸ್ತರಿಸಿದ್ದಾನೆ ಎಂಬುದರ ಸಂಕೇತ. ಬಾಹ್ಯ ಪ್ರಪಂಚ ದಲ್ಲಿರುವ ಏಳು ಲೋಕಗಳು ಮಾನವರಲ್ಲಿ (ಸೂಕ್ಷ್ಮ ರೂಪದಲ್ಲಿ) ರುವ ಚಕ್ರಗಳಾಗಿವೆ. ಆದ್ದರಿಂದ ವಿಷ್ಣುವು ಬಾಹ್ಯ ಪ್ರಪಂಚದಲ್ಲಷ್ಟೇ ಅಲ್ಲ,ಮಾನವನಲ್ಲಿಯೂ ಕೂಡ ಅಂತರ್ಯಾಮಿಯಾಗಿರುವನು.

ಈ ಅನಂತನೆಂಬ ದೇವರು ಬೇರೆ ಯಾರೂ ಅಲ್ಲ, ಸೂರ್ಯೋದಯ, ಕಳಾ,ಕಾಷ್ಠಾ, ಮುಹೂರ್ತ,ಹಗಲು - ಇರುಳು, ಯುಗ,ಸಂವತ್ಸರಾದಿಗಳು,ಭೂಭಾರವನ್ನು ತಗ್ಗಿಸುವ ಅನಂತನೂ, ವಿಷ್ಣುವೂ, ಸಕಲಲೋಕ, ಹದಿನಾಲ್ಕು ಲೋಕ ಗಳು, ಏಕಾದಶರುದ್ರರು, ದ್ವಾದಶಾದಿತ್ಯರು, ಸಪ್ತ ಋಷಿಗಳು, ನದಿ, ಸಾಗರ, ವೃಕ್ಷ, ಪರ್ವತಾದಿಗಳು, ನಾನೇ ಎಂದು ಪರ ಮಾತ್ಮನು ಅನಂತನ ಭವ್ಯರೂಪವನ್ನು ಅರ್ಜುನನಿಗೆ ಪ್ರಕಟಿ ಸಿದ್ದುಂಟು.

ಕೇರಳದ ತಿರುವನಂತಪುರದ ಅನಂತಪದ್ಮನಾಭ ದೇವಸ್ಥಾನವನ್ನು ಕಲಿಯುಗದ ಮೊದಲ ದಿನ ಸ್ಥಾಪನೆ ಮಾಡ ಲಾಯಿತು ಎನ್ನುತ್ತದೆ ಸ್ಥಳಪುರಾಣ. ಇಲ್ಲಿರುವಷ್ಟು ಬೃಹತ್ತಾದ ಶೇಷ ಶಾಯಿ ಮೂರ್ತಿ ಇನ್ನೆಲ್ಲೂ ಇಲ್ಲ. ತಿರುವನಂತಪುರದ ಮಹಾ ರಾಜನಾಗಿದ್ದ ಮಾರ್ತಾಂಡವರ್ಮನ ಕಾಲದಲ್ಲಿ ಈ ದೇವಳವು ಜೀರ್ಣೋದ್ಧಾರಗೊಂಡಿದೆ.

ಅಖಂಡ ಭಾರತವನ್ನು ಎರಡು ಬಾರಿ ಪರ್ಯಟನ ಮಾಡಿ, ತಾವು ಸಂದರ್ಶಿಸಿದ ಕ್ಷೇತ್ರಮೂರ್ತಿಗಳ ಮಹಿಮೆಯನ್ನು ಕುರಿತು ಶ್ರೀವಾದಿರಾಜ ತೀರ್ಥರು ತೀರ್ಥಪ್ರಬಂಧ ಕೃತಿಯಲ್ಲಿ ಈ ದಿವ್ಯ ಮಂಗಳ ಪಾವನ ಮೂರ್ತಿಯನ್ನು ವರ್ಣಿಸಿರುವುದು ಕಣ್ಣಿಗೆ ಕಟ್ಟುವಂತಿದೆ. ಪರಮಾತ್ಮನ ಸಾಕ್ಷಾತ್ಕಾರಕ್ಕೆ ಶ್ರವಣ,





ಮನನ, ಧ್ಯಾನಗಳೆಂಬ ಮೂರು ದ್ವಾರಗಳಿವೆ ಎಂದು ಪ್ರಮೇಯವನ್ನು ಪದ್ಮನಾಭನು ಅನಂತಶಯನನ ಕ್ಷೇತ್ರದಲ್ಲಿ ಸಾಧಕರಿಗೆ ಪ್ರತ್ಯಕ್ಷವಾಗಿ ತಿಳಿಸಿ ಕೊಡುತ್ತಿದ್ದಾನೆ.

ಶ್ರೀಮಧ್ವಾಚಾರ್ಯರು ಲೌಕಿಕರ ಕಣ್ಣಿಗೆ ಅಂತರ್ಧಾನರಾದದ್ದು ಉಡುಪಿಯ ಶ್ರೀಅನಂತೇಶ್ವರನ ಗರ್ಭಗುಡಿಯಲ್ಲಿ ಶಿವಲಿಂಗದಂತೆ ಕಾಣುವ ಅನಂತೇಶ್ವರ ದೇವರನ್ನು ಅನಂತಾಸನ ಎಂದು ಕರೆಯಲಾಗುತ್ತದೆ. ಉಡುಪಿಯ ರಾಜಭೋಜ ರಾಜನಿಗೆ ವರವಿತ್ತಂತೆ ಪರಶುರಾಮನು ಪದ್ಮನಾಭ-ನಾರಾಯಣ ಸ್ವರೂಪದಲ್ಲಿ ಸನ್ನಿಹಿತನಾಗಿದ್ದಾನೆ. ಈ ಪವಿತ್ರ ಸನ್ನಿಧಿಯಲ್ಲಿ ಇಂದಿಗೂ ಮಧ್ವಾ ಚಾರ್ಯರು, ಪಾಠ ಪ್ರವಚನಗಳನ್ನು ಮಾಡುತ್ತಿದ್ದಾರೆಂಬುದು ಭಾವುಕರ ನಂಬಿಕೆ.

ಆಚಾರ್ಯತ್ರಯರಲ್ಲಿ ಐತಿಹಾಸಿಕವಾಗಿ ಇವರು ಕಡೆಯವರಿರಬಹುದು. ಆದರೆ ಅವರ ದರ್ಶನದ ಸ್ವರೂಪವು ಅಂತ್ಯವಲ್ಲ, ಅನಂತ. ಅದರಲ್ಲಿ ಗತಿಶೀಲತೆ ಇದೆ. ನೈಸರ್ಗಿಕ, ಪಾರಿಸಾರಿಕ, ಅನುವಂಶೀಕವಾದ ಸೂಕ್ಷ್ಮಾತಿಸೂಕ್ಷ್ಮ ಪರಿಮಿತಿಗಳನ್ನರಿತುಕೊಳ್ಳುತ್ತಲೇ ಜೀವಿ ತನ್ನ ಸಾಕ್ಷಾತ್ಕರಿಸಿಕೊಳ್ಳುವ ವಿಕಾಸವಾದ ಇದರಲ್ಲಿದೆ. ಈ ಸ್ವಸ್ವರೂಪ ಜ್ಞಾನಕ್ಕೆ ಪೂರ್ಣವೆಂಬುದು ಅಂತ್ಯವೆಂಬುದು ಎಲ್ಲಿ? ಆದ್ದರಿಂದಲೇ ಜೀವ ಪಯಣ ನಿರಂತರ ಅನಂತದತ್ತ! ಹೀಗೆನ್ನುವ ಚಿಂತನೆಯೇ ಅನಂತನ ಹಬ್ಬದ ಸದಾಶಯವಾಗಿದೆ.

## ಹರಿ

ಹರಿರ್ಧಾರಯತೇ ಕಂಬುಂ ಚಕ್ರಂ ಪದ್ಮಂ ತಥಾಗದಾಮ್ ಎಂದ ರೂಪಮಂಡನ (3-20) ಹೇಳಿ ಈ ಮೂರ್ತಿಯ ಆಯುಧ ವಿನ್ಯಾಸವು ಶಂಖ - ಚಕ್ರ - ಪದ್ಮ - ಗದೆ ಎಂದು ನಿಖರಪಡಿಸಿದೆ. ಪಾಂಚರಾತ್ರಾಗಮದಲ್ಲಿ ಈ ರೀತಿಯ ಧ್ಯಾನವಿದೆ.

ಹರಿಃ ಕನಕವರ್ಣಃ ಸ್ಯಾಜ್ಜಚಕ್ರ ಶಂಖಗದಾಬ್ಜ ಭೃತ್

ಕನಕವರ್ಣದ ಕಾಂತಿಯಲ್ಲಿರುವ ಈ ಮೂರ್ತಿಯು ಚತುರ್ಭುಜನಾಗಿದ್ದು ಬಲಪಾರ್ಶ್ವದ ಕೆಳ ಹಸ್ತದಲ್ಲಿ ಗದೆಯನ್ನು, ಮೇಲಿನ ಹಸ್ತದಲ್ಲಿ ಪದ್ಮವನ್ನು, ಎಡಪಾರ್ಶ್ವದ ಕೆಳ ಹಸ್ತದಲ್ಲಿ ಶಂಖವನ್ನು ಮೇಲಿನ ಹಸ್ತದಲ್ಲಿ ಚಕ್ರವನ್ನು ಹಿಡಿದಿರುತ್ತಾನೆ.

ಪದ್ಮ ಸಂಹಿತೆಯಲ್ಲಿ (16-42) ಶಂಖ - ಚಕ್ರ - ಪದ್ಮಗಳೊಂದಿಗೆ ದಂಡಾಸ್ತ್ರವನ್ನು ಕಮಲಾಸನವನ್ನು ಹೇಳಿದೆ. (ಶಂಖ ಚಕ್ರಾಬ್ಜ ದಂಡಾಸ್ತ್ರ ಹರಿ ಃ ಸ್ಯಾತ್ ಕಮಲಾಸನ)

ದಿವ್ಯೇ ಸೃದ್ಧೇ ಮಾನುಷೇ ಚ ಶ್ರೀಭೂನೀಲಾಧಿಪಂ ಹರಿಮ್
ಚಕ್ರ ಶಂಖ ಗದಾಪದ್ಮ ಮಾಲಿನಂ ಗರುಡಾದಿಕಮ್
(ಪರಾಶರ ಸಂಹಿತೆ, 19- 27)

ಶ್ರೀದೇವಿ, ಭೂದೇವಿ, ನೀಲಾದೇವಿಗಳ ಒಡೆಯನಾದ ಈ ಮೂರ್ತಿಯು ಗುರುಡನ ಮೇಲೆ ಕುಳಿತಿದ್ದು ವನ ಮಾಲೆಯನ್ನು ಶ್ರೀವತ್ಸ, ಕೌಸ್ತುಭಗಳನ್ನು ಧರಿಸಿ ಶಂಖ - ಚಕ್ರ - ಪದ್ಮ - ಗದೆಗಳನ್ನು ಕ್ರಮವಾಗಿ ಧರಿಸಿರುತ್ತಾನೆ. ದಿವ್ಯ, ಸಿದ್ಧರೂ, ಮನುಷ್ಯರು ಈತನ ಕರುಣೆಗಳಿಸಲು ಈತನನ್ನು ಸುತ್ತುಗಟ್ಟಿರುತ್ತಾರೆ.







# ಆಯುರ್ವೇದ ಮತ್ತು ನಾವು

- ಡಾ || ಪ್ರದೀಪ್ ಕುಮಾರ್ ಹೆಬ್ರಿ
98440 18457

4



ಅಶ್ವಿನೀದೇವತೆಗಳು 'ದೇವತೆಗಳ ವೈದ್ಯರು' ಎಂದೆನಿಸಿಕೊಂಡವರು. ಇವರಿಗೆ ಅಶ್ವಿನೀಕುಮಾರೆಂದೂ ಹೆಸರಿದೆ. ಸೂರ್ಯದೇವನ ಪತ್ನಿಯಾದ ಸಂಜ್ಞಾದೇವಿ ಕುದುರೆಯ ರೂಪತಾಳಿದ್ದ ಸಮಯದಲ್ಲಿ ಸೂರ್ಯನಿಂದ ಪುತ್ರರನ್ನು ಪಡೆದಳು.ಅಶ್ವರೂಪದ ಮಾತೆಯ ಮಕ್ಕಳೇ ಅಶ್ವಿನೀಕುಮಾರರು. ಅಶ್ವಿನೀಕುಮಾರರು ಮಹಾ ರೂಪವಂತರೆಂದು ಮಹಾಭಾರತ, ಭಾಗವತ, ವಿಷ್ಣುಪುರಾಣಗಳಲ್ಲಿ ವರ್ಣಿಸಲಾಗಿದೆ.ದೇವತಾ ವರ್ಣವ್ಯವಸ್ಥೆಯಲ್ಲಿ ಇವರು ಶೂದ್ರ ದೇವತೆಗಳು.ಚ್ಯವನ ಮಹರ್ಷಿಯ ಪತ್ನಿಯಾದ ಸುಕನ್ಯಾದೇವಿಯ ಪಾತಿವ್ರತ್ಯವನ್ನು ಮೆಚ್ಚಿಚ್ಯವನನಿಗೆ ಸೌಂದರ್ಯ,ತಾರುಣ್ಯವನ್ನು ಅನು ಗ್ರಹಿಸಿದವರು. ಮುಂದೆ ಚ್ಯವನ ಮಹರ್ಷಿಗಳಿಂದ ಶಯನ ಮಹಾರಾಜ ಮಾಡಿದ ಯಜ್ಞದಲ್ಲಿ ಇತರ ದೇವತೆಗಳಂತೆಯೇ ಇವರು ಹವಿರ್ಭಾಗಕ್ಕೆ ಪಾತ್ರರಾಗಿ ಪಡೆದರು. ಆಪೋದನೆಂಬ ಧೌಮ್ಯಮುನಿಯ ಅಂಧಶಿಷ್ಯನಾದ ಉಪಮನ್ಯು ಅಶ್ವಿನೀ ದೇವತೆಗಳನ್ನಾಶ್ರಯಿಸಿ ದೃಷ್ಟಿಯನ್ನು ಪಡೆದ ಪಾಂಡು ಮಹಾರಾಜನ ಎರಡನೆಯ ಪತ್ನಿ ಮಾದ್ರಿದೇವಿ ನಕುಲ ಸಹದೇವರೆಂಬ ಅವಳಿ ಮಕ್ಕಳನ್ನು ಪಡೆದದ್ದೂ ಇವರ ವರಪ್ರಸಾದದಿಂದಲೇ.

ಇದೇ ರೀತಿ ಧನ್ವಂತರಿಯೂ ಆಯುರ್ವೇದ ಶಾಸ್ತ್ರ ಪ್ರವರ್ತಕನು. ಈತ ದೇವತೆಗಳ ವೈದ್ಯ . ಭಾಗವತ ಪುರಾಣದಲ್ಲಿ ಈತ ಮಹಾವಿಷ್ಣುವಿನ ಹನ್ನೆರಡನೇ ಅವತಾರ ಎಂಬ ಮಾತಿದೆ. ಬ್ರಹ್ಮವೈವರ್ತ ಪುರಾಣದಲ್ಲಿ ಈತ ಸರ್ಪ ವಿಷ ಚಿಕಿತ್ಸೆ ಮತ್ತು ಇತರ ಚಿಕಿತ್ಸೆಗಳಲ್ಲಿ ಪ್ರವೀಣನೆಂಬ ವಿಚಾರವಿದೆ. ಮಹಾಭಾರತಕ್ಕೆ ಸೇರಿದ ಹರಿವಂಶ ಪುರಾಣದಲ್ಲಿ 'ಅಷ್ಟಾಂಗ ಆಯುರ್ವೇದ ಶಾಸ್ತ್ರ' ಪ್ರವರ್ತಕನಾದ ಕಾಶಿರಾಜನ ವಂಶದಲ್ಲಿ ಈತ ಜನ್ಮತಾಳಿದನೆಂದೂ, ಕಾಶಿರಾಜ ಅಥವಾ ಧನ್ವರಾಜನ ಮಗನಾದ್ದರಿಂದ ಈತನನ್ನು 'ಧನ್ವಂತರಿ' ಎಂದು ಕರೆಯಲಾಯಿತೆಂದೂ ಹೇಳಲ್ಪಟ್ಟಿದೆ. ಈತನೇ ಸುಶ್ರುತನಿಗೆ ಆಯುರ್ವೇದವನ್ನು ಉಪದೇಶಿಸಿದವನು.

ಶಲ್ಯಶಾಸ್ತ್ರದಲ್ಲಿ ಪಾರಂಗತರಾದವರನ್ನು ''ಧನ್ವಂತರಿ' ಎಂದೂ ಕರೆಯುತ್ತಾರೆ. ವೈದ್ಯರನ್ನು ಮೂರು ವಿಧವಾಗಿ ವಿಂಗಡಿಸಿ ಒಂದೇ ರೋಗಕ್ಕೆ ನೂರು ಔಷಧಿಗಳನ್ನು ಬಲ್ಲವನ್ನು 'ವೈದ್ಯನೆಂದೂ ಇನ್ನೂರು ಔಷಧಿಗಳನ್ನು ಬಲ್ಲವನನ್ನೂ 'ಭಿಷಕ' ಎಂದೂ, ಮುನ್ನೂರು ಔಷಧಿಗಳನ್ನು ಬಲ್ಲವನನ್ನೂ 'ಧನ್ವಂತರಿ' ಎಂದೂ ಕರೆಯುತ್ತಿದ್ದರು. ಮುಂದೆ ವೈದ್ಯ ಚಿಕಿತ್ಸೆಯಲ್ಲಿ ನಿಪುಣನಾದವನನ್ನೂ ಧನ್ವಂತರಿ ಎಂದು ಕರೆಯ ತೊಡಗಿದರು.

ಅಭಿದಾನ ರಾಜೇಂದ್ರ ಕೋಶವೆಂಬ ಜೈನವಿಶ್ವಕೋಶದಲ್ಲಿ ಧನ್ವಂತರಿಯು ವಿಜಯಪುರದ ರಾಜನಾದ ಕನಕರಥನ ವೈದ್ಯನೆಂದು ಸೂಚಿತವಾಗಿದೆ. ಈ ರೀತಿ ಧನ್ವಂತರಿ ಎಂಬ ಪದಪ್ರಯೋಗ ಮೊದಲು ಸ್ವರ್ಗದ ವ್ಯಕ್ತಿ ಎಂದೆನಿಸಿ, ಮುಂದೆ ಕಾಲ್ಪನಿಕ ವ್ಯಕ್ತಿಯಾಗಿ, ಆಮೇಲೆ ಎರಡನೆಯ ಚಂದ್ರಗುಪ್ತ ವಿಕ್ರಮಾದಿತ್ಯನ ಆಸ್ಥಾನದ ನವರತ್ನಗಳಲ್ಲಿ ಒಬ್ಬನೆಂದೆನಿಸಿ ಚಾರಿತ್ರಿಕ ವ್ಯಕ್ತಿಯಾಗಿ, ಕೊನೆಗೆ ನಿಪುಣವೈದ್ಯನೆಂಬ ಅರ್ಥ ದಲ್ಲಿ ರೂಢಿಗೆ ಬಂತು.

ಸ್ಕಾಂದ, ಗರುಡ ಮತ್ತು ಮಾರ್ಕಂಡೇಯ ಪುರಾಣಗಳಲ್ಲಿರುವ ಕಥೆಯಂತೆ ಗಾವಲನೆಂಬ ಋಷಿಯು ಸಂಚರಿಸುತ್ತಿರವಾಗ ಬಹಳವಾಗಿ ಬಾಯಾರಿದನು. ಆಗ ಆ ದಾರಿಯಲ್ಲಿ ವೈಶ್ಯಕನ್ಯೆ ವೀರಭದ್ರಾ ನೀರನ್ನು ಹೊತ್ತು ತರುತ್ತಿದ್ದಳು. ಅವಳಿಂದ ನೀರನ್ನು ಪಡೆದು ಕುಡಿದು ತೃಪ್ತನಾದನು. ಉತ್ತಮನಾದ ಪುತ್ರನು ಜನಿಸಲೆಂದು ಆಶೀರ್ವದಿಸಿದನು. ಕಾಲಕ್ರಮೇಣ ಆಕೆಯಲ್ಲಿ ಜನಿಸಿದ ಗಂಡು ಮಗು ಬಾಲ್ಯದಲ್ಲಿಯೇ ಸಕಲ ಶಾಸ್ತ್ರ ಪಾರಂಗತನಾದನು. ಮುಂದೆ ಅಶ್ವಿನೀಕುಮಾರರಿಂದ ಕಲಿತು. ಧನ್ವಂತರಿ ಎಂದು ಪ್ರಖ್ಯಾತನಾದನು.ಧನ್ವಂತರೀಯ ಹೆಸರಲ್ಲಿ ಪ್ರಸಿದ್ಧವಾದ ಗ್ರಂಥಗಳೆಂದರೆ, 1)ಧನ್ವಂತರಿ ಔಷಧ ಪ್ರಯೋಗ 2) ಕಾಲಜ್ಞಾನ 3) ಚಿಕಿತ್ಸಾ ತತ್ತ್ವಜ್ಞಾನ 4) ಚಿಕಿತ್ಸಾ ದೀಪಿಕಾ, 5) ಚಿಕಿತ್ಸಾಸಾರ 6) ಬಾಲಚಿಕಿತ್ಸಾ 7) ಯೋಗ ಚಿಂತಾಮಣಿ 8) ಯೋಗದೀಪಿಕಾ 9) ವಿದ್ಯಾ ಪ್ರಕಾಶಚಿಕಿತ್ಸಾ 10)ಧನ್ವಂತರಿ ಗುಣಾ ಗುಣ ಯೋಗಶತ 11) ಧನ್ವಂತರಿಗ್ರಂಥ 12)ಧನ್ವಂತರಿ ನಿಘಂಟು 13) ಧನ್ವಂತರಿ ಪಂಚಕ 14) ಧನ್ವಂತರಿವಿಲಾಸ 15)ಧನ್ವಂತರಿ ಸಾರನಿಧಿ 16) ನಿಬಂಧ ಸಂಗ್ರಹ 17) ವೈದ್ಯ ಭಾಸ್ಕರೋದಯ 18)ವೈದ್ಯವಿದ್ಯಾವಿನೋದ 19) ಆಯುರ್ವೇದ ಸಾರಾವಳಿ.





# ದೇವಶಿಲ್ಪಿ ವಿಶ್ವಕರ್ಮನ ವಿಶ್ವರೂಪ

- ಶ್ರೀಮತಿ. ಸುಮಾಚಂದ್ರಶೇಖರ್
98800 60354

ಕಲಾ ದೇವತೆ ಎಂದೇ ಹೆಸರಾದ ವಿಶ್ವಕರ್ಮ ದೇವಶಿಲ್ಪಿ, ಕುಶಲ ಕರ್ಮಿಗಳು ವಿಶ್ವಕರ್ಮನನ್ನು ಸ್ತುತಿಸದೆ, ಆರಾಧಿಸದೆ, ಪೂಜಿಸದೆ ಯಾವ ಕೆಲಸವನ್ನು ಆರಂಭಿಸುವುದಿಲ್ಲ. ಕೆಲವರ ಮಟ್ಟಿಗೆ ಆತನೇ ಪ್ರಜಾಪತಿ, ಇಂದ್ರ ಸೃಷ್ಟಿಕರ್ತನಿಗೆ ಸಮನಾದ ಸ್ಥಾನವನ್ನು ವಿಶ್ವಕರ್ಮನಿಗೆ ಕೊಡಲಾಗಿದೆ.

ಗಂಗಾ ಬಯಲು ಪ್ರದೇಶದಿಂದ ಅಥವಾ ಅಸ್ಸಾಂ, ಬಂಗಾಳ ಅಥವಾ ಒಡಿಶಾ ಪ್ರಾಂತ್ಯದಿಂದ ಬಂದ ಕಲಾಕಾರರು ವಿಶ್ವಕರ್ಮನ ಪೂಜೆ ಮಾಡದೇ ಯಾವುದೇ ಕೆತ್ತನೆಯ ಕೆಲಸವನ್ನು ಪ್ರಾರಂಭಿಸುವುದಿಲ್ಲ. ಪಿತೃಪಕ್ಷದ ಆರಂಭಕ್ಕೆ ಪಿತೃದೇವತೆಗಳಿಗೆ ತರ್ಪಣ, ಅರ್ಘ್ಯಗಳನ್ನು ನೀಡಿ ತೃಪ್ತಿ ಪಡಿಸುವ ಮಾಸ. ವಿಶ್ವಕರ್ಮ ಜಯಂತಿಯು ಅದರ ಪೂರ್ವ ಭಾವಿಯಾಗಿ ಬರುತ್ತದೆ. ವಿಶ್ವಕರ್ಮನೆಂದರೆ ದೇವತೆಗಳ ಶಿಲ್ಪಿ, ಕಲಾ ದೇವತೆ.

ಸೂರ್ಯನು ಕನ್ಯಾರಾಶಿಗೆ ಪ್ರವೇಶಿಸಿದ ಮುಹೂರ್ತದಲ್ಲಿ ವಿಶ್ವಕರ್ಮನ ಪೂಜೆ ಮಾಡುತ್ತಾರೆ. ಈ ದಿನದಂದು ಭಗವಾನ್ ವಿಶ್ವಕರ್ಮ ಭೂಲೋಕದ ಜನರ ಕಲ್ಯಾಣಕ್ಕಾಗಿ ನೇಗಿಲನ್ನು ತಯಾರಿಸಿ ಕೊಡುಗೆಯಾಗಿ ನೀಡಿದ ಎನ್ನುವ ನಂಬಿಕೆಯಿದೆ.

### ಶಿಲ್ಪಿಗಳಲ್ಲಿ ಅಗ್ರೇಸರ

ವಿಶ್ವಕರ್ಮನನ್ನು ಪ್ರಜಾಪತಿ (ಜನನಾಯಕ), ಮಹಾರಾಣ (ಶಿಲ್ಪಿಗಳಲ್ಲಿ ಅಗ್ರೇಸರ), ಬೃಹಸ್ಪತಿ (ಆಕಾಶದ ದೇವತೆ) ಮತ್ತು ದಕ್ಷ (ಸಮರ್ಥ) ಎಂದು ಕರೆಯಲಾಗುತ್ತದೆ. ಆತನನ್ನೇ ಸ್ಥಾಪತ್ಯಶಾಸ್ತ್ರ, ವಾಸ್ತು ಶಾಸ್ತ್ರ, ಶಿಲ್ಪ ಶಾಸ್ತ್ರಗಳ ಅಧಿಪತಿಯೆಂದು ಕರೆಯಲಾಗುತ್ತದೆ. ವಿಶ್ವಕರ್ಮನನ್ನು ಮೊದಲ ಕಲಾಕಾರ ಎಂದು ಕರೆಯುತ್ತಾರೆ.ವಿಶ್ವಕರ್ಮನನ್ನು ಹೆಫಯಿಸ್ಟನ್ ಎಂದು ಕರೆಯುತ್ತಾರೆ. ವಿಶ್ವಕರ್ಮ ಜತಿ ಅಥವಾ ಕುಶಲಕಲೆ, ಬಡಿಗೆ ಮತ್ತು ಆಭರಣ ತಯಾರಕ ಪ್ರಥಮಾಧಿಪ ನೆಂದು ಕರೆಯುತ್ತಾರೆ. ವಿಶ್ವಕರ್ಮಜತಿ ಅಥವಾ ಕುಶಲಕಲೆ, ಬಡಿಗೆ ಮತ್ತು ಆಭರಣ ತಯಾರಿಕೆ ಪ್ರಥಮಾಧಿಪನೆಂದು ಕರೆಯುತ್ತಾರೆ. ಗ್ರೀಕರು, ರೋಮನ್ನರು ಆತನನ್ನು ವಲ್ಕನ್ ಎಂದು ಗುರುತಿಸುತ್ತಾರೆ. ವಿಶ್ವಕರ್ಮನೇ ಯಂತ್ರಗಳಿಗೆ ದೇವತೆ ಎಂದೂ ಕರೆಯುತ್ತಾರೆ.

### ವೇದಭಾವದಲ್ಲಿ ವಿಶ್ವಕರ್ಮ

ವೇದವು ಆತನನ್ನು ತ್ವಸ್ತ್ರ ಎಂದು ಗುರುತಿಸುತ್ತದೆ. ಸೃಷ್ಟಿ ಪ್ರಕ್ರಿಯೆಯಲ್ಲಿ ಪುರುಷ ಮಹಿಳೆಯನ್ನು ಸಮೀಪಿಸಿದಾಗ ಆತ ಅವತರಿಸಿದ. ತಾಯಿಯ ಗರ್ಭದಲ್ಲಿರುವ ಮಗುವಿನಂತೆ ಆತನ ರೂಪವಿತ್ತು. ನಂತರ ಆ ರೂಪವು ಶಿಶುವಾಗಿ ಬದಲಾಯಿತು. ಕೆಲವರು ವಿಶ್ವಕರ್ಮನನ್ನು ಪ್ರಜಾಪತಿ ಅಥವಾ ಬ್ರಹ್ಮನೆಂದೂ ಕರೆಯುತ್ತಾರೆ.ಆತನೇ ಸೃಷ್ಟಿಗೆ ಮೂಲ ಎಂದು ಭಾವಿಸುತ್ತಾರೆ.ವೇದಕಾಲಿನ ಪಠ್ಯಗಳಲ್ಲಿ,ಸಪ್ತಋಷಿಗಳಲ್ಲಿ ಐವರು ಋಷಿಗಳು ವಿಶ್ವ ಕರ್ಮನಿಂದ ಜನಿಸಲ್ಪಟ್ಟರು ಎಂದು ಹೇಳಲಾಗುತ್ತದೆ. ಇದೊಂದು ಭಾಗವಾದರೆ ಮತ್ತೆ ವಿಶ್ವಕರ್ಮನನ್ನು ಇಂದ್ರನೊಂದಿಗೆ ಹೋಲಿಸುತ್ತಾರೆ. ಋಗ್ವೇದವು ವಿಶ್ವಕರ್ಮನ ಕಾರಣ ಭೂಮಿ ಮತ್ತು ಆಕಾಶ ಪ್ರತ್ಯೇಕ ವಾಯಿತು ಎಂದು ಉಲ್ಲೇಖಿಸಲ್ಪಟ್ಟಿದೆ. ಹಾಗಾಗಿ ವಿಶ್ವಕರ್ಮ ಆನೆಯ ಮೇಲೆ ಕುಳಿತು ಕೊಂಡಿದ್ದಾನೆ. ತನ್ನ ಕೈಯಲ್ಲಿ ಸುತ್ತಿಗೆ , ಉಳಿ, ಅಳತೆಗೋಲು, ಸ್ಪಿಂಡಲ್ ಹಿಡಿದು ಕೊಂಡಿರುತ್ತಾನೆ.

ದಕ್ಷಿಣ ಏಷಿಯಾದಲ್ಲಿ ಬ್ರಹ್ಮ ಮತ್ತು ಇಂದ್ರರಿಬ್ಬರೂ ಒಂದೇ ಎಂದು ಭಾವಿಸಲಾಗಿದೆ. ಅವರೀರ್ವರು ಸೃಷ್ಟಿಕರ್ತರೆಂದೇ ಅಭಿಪ್ರಾಯಿಸುತ್ತಾರೆ. ಹಾಗಾಗಿ ಬ್ರಹ್ಮದೇವನೂ ಆನೆಯ ಮೇಲೆ ಆಸೀನನಾಗಿರುತ್ತಾನೆ.

### ನಗರಗಳ ನಿರ್ಮಾತೃ

ವಿಶ್ವಕರ್ಮ ನಗರಗಳನ್ನು ನಿರ್ಮಿಸುತ್ತಾನೆ. ಉದಾಹರಣೆಗೆ ದೇವತೆಗಳಿಗಾಗಿ ಅಮರಾವತಿಯನ್ನು, ಅಸುರರಿಗಾಗಿ ಹಿರಣ್ಯಪುರವನ್ನು, ಯಕ್ಷರಿಗಾಗಿ ಅಲಕಾಪುರಿಯನ್ನು, ಪಾಂಡವರಿಗಾಗಿ ಮಯಾಪುರವನ್ನು, ಕೃಷ್ಣನಿಗಾಗಿ ದ್ವಾರಾವತಿಯನ್ನು ನಿರ್ಮಿಸುತ್ತಾನೆ. ಭಗವಾನ್ ವಿಷ್ಣುವಿಗಾಗಿ ಸುದರ್ಶನ ಚಕ್ರವನ್ನು,ಇಂದ್ರನಿಗಾಗಿ ವಜ್ರಾಯುಧವನ್ನು ದಧೀಚಿ ಋಷಿಯ ಬೆನ್ನು ಮೂಳೆಯಿಂದ ವಿನ್ಯಾಸಗೊಳಿಸುತ್ತಾನೆ. ವಿಶ್ವಕರ್ಮನೆ ಸೃಷ್ಟಿಕರ್ತ. ಆತನ ಕಾರಣ ಆರ್ಥಿಕ ಸ್ಥಿತಿ ಅಭಿವೃದ್ದಿಯಾಗುತ್ತದೆ ಎಂದು ಹೇಳುತ್ತಾರೆ.

ವಿಶ್ವಕರ್ಮ ಮನುಕುಲದ ಕಲಾವಂತಿಕೆಯ ಮೂಲರೂಪ. ಬ್ರಹ್ಮಾಂಡದ ಪ್ರತಿಯೊಂದು ಕೌಶಲ್ಯ ತಂತ್ರಜ್ಞಾನಗಳಿಗೆ ಅಧಿದೇವತೆ. ವಿಶ್ವಕರ್ಮನ ಆರಾಧನೆಯೊಂದಿಗೆ ಆತನಲ್ಲಿರುವ ನಿಪುಣತೆ, ಕುಶಲತೆ ನಮಗೆ ಮಾರ್ಗದರ್ಶನವಾಗಲಿ ಎಂದು ಬೇಡಿಕೊಂಡಾಗಲೇ ಜಯಂತಿಯ ಆಚರಣೆಯಲ್ಲಿ ಸಾರ್ಥಕತೆ ಕಂಡಿತು.

### ಪುರಾಣಗಳಲ್ಲಿ ವಿಶ್ವಕರ್ಮನ ಪಾತ್ರ

ನಮ್ಮ ಪುರಾಣಗಳ ಪ್ರಕಾರ ನಾಲ್ಕು ಯುಗಗಳಿವೆ.ಆದರೆ ಸತ್ಯ ಯುಗದಲ್ಲಿ ದೇವತೆಗಳಿಗೆಂದೇ ಸಾಕಷ್ಟು ನಗರಗಳು ನಿರ್ಮಾಣವಾದವು. ಸತ್ಯಯುಗದಲ್ಲಿ ಆತ ಸ್ವರ್ಗಲೋಕವನ್ನು ನಿರ್ಮಿಸಿದ. ಇಂದ್ರ ದೇವತೆಯ ಆಜ್ಞೆಯನ್ನು ಪಾಲಿಸಿದ. ತ್ರೇತಾಯುಗದಲ್ಲಿ ಆತ ಸುವರ್ಣ ಲಂಕೆಯನ್ನು ನಿರ್ಮಿಸುತ್ತಾನೆ. ದ್ವಾಪರ ಯುಗದಲ್ಲಿ, ದ್ವಾರಕೆ ಮತ್ತು ಹಸ್ತಿನಾಪುರವನ್ನೂ ಮತ್ತು ಕಲಿಯುಗದಲ್ಲಿ ಇಂದ್ರಪ್ರಸ್ಥವನ್ನೂ ನಿರ್ಮಿಸುತ್ತಾನೆ. ತ್ರೇತಾಯುಗದಲ್ಲಿ ಸುವರ್ಣ ಲಂಕೆ ರಾವಣನ ರಾಜಧಾನಿಯಾಗಿತ್ತು.

ಸುವರ್ಣ ಲಂಕೆ ನಿರ್ಮಾಣದ ಹಿಂದೊಂದು ಕಥೆಯಿದೆ. ಶಿವ ಪಾರ್ವತಿಯನ್ನು ಮದುವೆಯಾಗುತ್ತಾನೆ. ಆತ ವಿಶ್ವಕರ್ಮವನ್ನು ತಮ್ಮ ವಾಸಕ್ಕಾಗಿ ಒಂದು ಸುಂದರ ಅರಮನೆಯೊಂದನ್ನು ನಿರ್ಮಿಸಿಕೊಡಲು ಕೇಳಿ ಕೊಳ್ಳುತ್ತಾನೆ. ಆಗ ವಿಶ್ವಕರ್ಮ ಚಿನ್ನದಿಂದ ಅರಮನೆಯೊಂದನ್ನು ಕಟ್ಟಿ

ಕೊಡುತ್ತಾನೆ. ಗೃಹ ಪ್ರವೇಶಕ್ಕೆ ಪೂರಕವಾದ ಧಾರ್ಮಿಕ ವಿಧಿಗಳನ್ನು ಪೂರೈಸುವ ಸಲುವಾಗಿ ಶಿವನು ಪುಲಸ್ತ್ಯ ಋಷಿಯನ್ನು (ಕುಬೇರ ಮತ್ತು ರಾವಣನ ತಾತ) ಆಮಂತ್ರಿಸುತ್ತಾನೆ. ವಿಧಿ, ವಿಧಾನಗಳು ಮುಗಿದ ನಂತರ ಸಂಭಾವನೆ ಏನು ಕೊಡಬೇಕೆಂದು ಕೇಳುತ್ತಾನೆ. ಆಗ ಪುಲಸ್ತ್ಯ ಬಂಗಾರದ ಅರಮನೆಯನ್ನು ದಕ್ಷಿಣೆಯಾಗಿ ಬೇಡುತ್ತಾನೆ. ಹೀಗೆ ಸುವರ್ಣ ಲಂಕೆಯು ಪುಲಸ್ತ್ಯನ ಪಾಲಾಗುತ್ತದೆ. ಮುಂದೆ ಅವನ ವಂಶದಲ್ಲಿ ಜನಿಸಿದ ರಾವಣ ಸೋದರ ಕುಬೇರನನ್ನು ಆ ಸ್ಥಳದಿಂದ ಓಡಿಸಿ ಅದನ್ನು ತನ್ನದಾಗಿಸಿ ಕೊಳ್ಳುತ್ತಾನೆ.

ಯದುಕುಲತಿಲಕ ಕೃಷ್ಣನ ರಾಜಧಾನಿ ದ್ವಾರಕೆಯನ್ನು ನಿರ್ಮಿಸಿದ ಕೀರ್ತಿಯೂ ವಿಶ್ವಕರ್ಮನಿಗೇ ಸಲ್ಲುತ್ತದೆ. ನಂತರ ಕೌರವ, ಪಾಂಡವರಿಗಾಗಿ ಹಸ್ತಿನಾಪುರವನ್ನು ನಿರ್ಮಿಸುತ್ತಾನೆ. ಪಾಂಡವರಿಗೆಂದೇ ವಿಶ್ವಕರ್ಮನಿಂದ ಸೃಷ್ಟಿಸಲ್ಪಟ್ಟ ನಗರ. ಇಂದ್ರ ಪ್ರಸ್ಥದಲ್ಲಿ ನಡೆದ ಒಂದು ಘಟನೆ ಮುಂದೆ ಕುರುಕ್ಷೇತ್ರ ಯುದ್ಧಕ್ಕೆ ಮುನ್ನುಡಿಯಾಗುತ್ತದೆ.ಆ ಪ್ರಸಂಗ ಹೀಗಿದೆ. ಮಹಾಭಾರತದಲ್ಲಿ ಧೃತರಾಷ್ಟ್ರ ಖಾಂಡವ ಪ್ರಸ್ಥ ಎನ್ನುವ ಚಿಕ್ಕ ಜಾಗವನ್ನು ಪಾಂಡವರಿಗೆ ಕೊಡುತ್ತಾನೆ. ತನ್ನ ಚಿಕ್ಕಪ್ಪನ ಸೂಚನೆಯಂತೆ ಆ ಪುಟ್ಟ ಪ್ರದೇಶದಲ್ಲೇ ಯುಧಿಷ್ಠಿರ ವಾಸಿಸುತ್ತಾನೆ. ಆಗ ಕೃಷ್ಣನ ಅಣತಿಯಂತೆ ವಿಶ್ವಕರ್ಮ ಪಾಂಡವರಿಗಾಗಿ ಇಂದ್ರಪ್ರಸ್ಥ ನಗರಿಯನ್ನು ನಿರ್ಮಿಸುತ್ತಾನೆ.ಇಂದ್ರಪ್ರಸ್ಥ ಅರಮನೆಯ ವಿನ್ಯಾಸ ಎಷ್ಟು ಆಧುನಿಕವಾಗಿರುತ್ತದೆಂದರೆ,ಅದರ ನೆಲ ಹಾಸುಗಳು ಕನ್ನಡಿಯಂತೆ ಫಳ ಫಳಿಸುತ್ತಿರುತ್ತವೆ. ಅರಮನೆಯಲ್ಲಿದ್ದ ನೀರಿನ ಕೊಳಗಳು ಎಷ್ಟು ತಿಳಿಯಾಗಿದ್ದವೆಂದರೆ, ಮೇಲ್ನೋಟಕ್ಕೆ ನೆಲ ಮತ್ತು ಅದರ ತಳ ಒಂದೇ ಮಟ್ಟದಲ್ಲಿದ್ದಂತೆ ಕಾಣುತ್ತಿರುತ್ತವೆ.ಪ್ರತಿಯೊಂದು ಕಂಬದಲ್ಲೂ ಬಗೆ,ಬಗೆಯ ಕೆತ್ತನೆಗಳು, ಅಲಂಕಾರಗಳು ಎಂತಹವರನ್ನೂ ದಿಗ್ಭ್ರಮರನ್ನಾಗಿಸುವಂತಿರುತ್ತದೆ.

ಇಂದ್ರಪ್ರಸ್ಥದಲ್ಲಿ ಅರಮನೆ ಪೂರ್ಣಗೊಂಡ ನಂತರ ಪಾಂಡವರು ಕೌರವರನ್ನು ಆಮಂತ್ರಿಸುತ್ತಾರೆ. ಬಂಜರು ಭೂಮಿಯಲ್ಲಿ ಇವರೇನು ಕಟ್ಟಡ ಕಟ್ಟಿಯಾರು ಎನ್ನುವ ಮನೋಭಾವನೆಯಿಂದ ಅರಮನೆಗೆ ಬಂದ ದುರ್ಯೋಧನ ಇದರ ಮೆರುಗನ್ನು ಕಂಡು ಮೂಕ ವಿಸ್ಮಿತನಾಗುತ್ತಾನೆ. ನೆಲವನ್ನೂ, ಕೊಳವನ್ನೂ ಒಂದೇ ಎಂದು ಬಗೆದ ದುರ್ಯೋಧನ ಜಾರಿ ಬೀಳುತ್ತಾನೆ. ದ್ರೌಪದಿ ವ್ಯಂಗ್ಯವಾಡುತ್ತಾಳೆ. ಆಕೆಯ ವ್ಯಂಗ್ಯದಿಂದ ಕ್ರುದ್ಧನಾದ ದುರ್ಯೋಧನ ಕುರುಕ್ಷೇತ್ರ ಯುದ್ಧಕ್ಕೆ ಮುನ್ನುಡಿ ಬರೆಯುತ್ತಾನೆ.

## ವಿಶ್ವರೂಪನಿವನು

ಕುಶಲಕರ್ಮಿ ಮತ್ತು ವಾಸ್ತುಶಿಲ್ಪ ವಿನ್ಯಾಸಗಾರರ ಅಧಿದೇವತೆಯೇ ವಿಶ್ವಕರ್ಮ, ವಿಶ್ವಕರ್ಮ ಬ್ರಹ್ಮನ ಮಗ. ಇಡೀ ಬ್ರಹ್ಮಾಂಡದ ಕಲ್ಪನೆ, ವಿನ್ಯಾಸವೂ ಆತನದೇ ಎಂದು ಹೇಳಲಾಗುತ್ತದೆ. ದೇವತೆಗಳು ಬಳಸುವ ಹಾರುವ ರಥ, ಶಸ್ತ್ರಾಸ್ತ್ರ ದೇವಗೃಹಗಳ ನಿರ್ಮಾಣ ಕಾರ್ಯದಲ್ಲೂ ವಿಶ್ವಕರ್ಮನ ಪಾತ್ರವಿದೆ. ಮಹಾಭಾರತವು ಆತನನ್ನು ಕಲೆಗಳ ಅಧಿಪತಿ, ಸಾವಿರಾರು ಕುಶಲಕಲೆಗಳ ನಿರ್ಮಾತೃ, ಬಡಗಿಗಳ ಆರಾಧ್ಯ ದೈವ, ಚಿನ್ನಾಭರಣಗಳ ವಿನ್ಯಾಸಕಾರ ದೇವತೆ ಎಂದೆಲ್ಲಾ ಹೊಗಳುತ್ತದೆ. ವಿಶ್ವಕರ್ಮನಿಗೆ ನಾಲ್ಕು ಕೈಗಳಿವೆ. ಆತ ಕಿರೀಟವನ್ನು ಧರಿಸಿದ್ದಾನೆ. ಅತ್ಯಮೂಲ್ಯ ಚಿನ್ನಾಭರಣಗಳನ್ನು ಧರಿಸಿದ್ದಾನೆ. ಕೈಯಲ್ಲಿ ನೀರಿನ ತಂಬಿಗೆ, ಪುಸ್ತಕ, ಉಳಿ ಮತ್ತಿತರ ಸಾಧನಗಳನ್ನು ಹಿಡಿದುಕೊಂಡಿದ್ದಾನೆ. ಹೀಗೆ ಸರ್ವಾಭರಣ,ಸರ್ವ ಕಲೆಗಳ ಪ್ರತೀಕವಾದ ವಿಶ್ವಕರ್ಮ ಕಲಾಪ್ರಿಯರ ಪಾಲಿನ ಬ್ರಹ್ಮನಾಗಿದ್ದಾನೆ. ಆರಾಧನೆಯ ಬಿಂದುವಾಗಿದ್ದಾನೆ. ಈ ದೇವಶಿಲ್ಪಿಗೆ ವೇದ ಪುರಾಣಗಳಲ್ಲಿ ವಿಶಿಷ್ಟ ಸ್ಥಾನವಿದೆ.

## ದೇವಶಿಲ್ಪಿ ವಿಶ್ವಕರ್ಮ

ಮಹಾಭಾರತದಲ್ಲೊಂದು ಪ್ರಸಂಗ ಬರುತ್ತದೆ. ಶ್ರೀಕೃಷ್ಣನ ಅಣತಿಯಂತೆ ವಿಶ್ವಕರ್ಮನು ಪಡುಗಡಲ ನಡುವೆ ನೂರು ಯೋಜನ ಗಾತ್ರದ ದ್ವಾರಕಾ ನಗರಿಯನ್ನು ನಿರ್ಮಿಸುತ್ತಾನೆ. ಅದುವೇ ದ್ವಾರಕಾನಗರಿ. ಪುರಾಣಗಳ ಪ್ರಕಾರ, ದ್ವಾರಕಾ ನಗರಿಯಲ್ಲಿ ಹದಿನಾರು ಸಾವಿರ ಉಪ್ಪರಿಗೆ ಮನೆಗಳಿದ್ದವಂತೆ ಅವು ಐದರಿಂದ ಒಂಬತ್ತು ಅಂತಸ್ತುಗಳವರೆಗೆ ಇದ್ದವೆಂದರೆ, ವಿಶ್ವಕರ್ಮನ ಕುಶಲತೆಯನ್ನು ಅರ್ಥಮಾಡಿಕೊಳ್ಳಬಹುದು.

ವಿಶ್ವಕರ್ಮನ ಕುಶಲತೆಗೆ ಮತ್ತೊಂದು ನಿದರ್ಶನವೆಂದರೆ, ಇಂದ್ರಪ್ರಸ್ಥ. ಪಾಂಡವರಿಗಾಗಿ ನಿರ್ಮಾಣ ಮಾಡಿದ ನಗರ. ಅದರ ಹಿಂದಿನ ಕಥೆ ಹೀಗಿದೆ. ಧೃತರಾಷ್ಟ್ರನು ಹಸ್ತಿನಾಪುರವನ್ನು ಕೌರವನಿಗೆ ಕೊಟ್ಟು ಪಾಂಡವರಿಗೆ ಖಾಂಡವಪ್ರಸ್ಥವೆಂಬ ಕಾಡಿನಂತಹ ಪ್ರದೇಶ ನೀಡುತ್ತಾನೆ. ಅದು ಆ ವಾಸಕ್ಕೆ ಯೋಗ್ಯವಾದ ಸ್ಥಲವಾಗಿರುವುದಿಲ್ಲ. ನಂತರ, ಶ್ರೀಕೃಷ್ಣನಲ್ಲಿ ಮೊರೆ ಹೋಗುತ್ತಾರೆ. ಶ್ರೀಕೃಷ್ಣನ ಅನುಜ್ಞೆಯಂತೆ ವಿಶ್ವಕರ್ಮನು ಪಾಂಡವರಿಗಾಗಿ ನಗರವೊಂದನ್ನು ನಿರ್ಮಿಸುತ್ತಾನೆ. ಅದು ದೇವಲೋಕದ ಅಮರಾವತಿ ನಗರದಂತೆ ಶೋಭಿಸುತ್ತಿರುತ್ತದೆ. ಹಾಗಾಗಿ ಅದನ್ನು ಇಂದ್ರ ಪ್ರಸ್ಥ ಎಂದು ಕರೆಯುತ್ತಾರೆ.

ಹೀಗೆ ವಿಶ್ವಕರ್ಮನು ಶಿಲ್ಪಿಯಾಗಿ, ನಗರ ನಿರ್ಮಾತೃವಾಗಿ, ಪರಬ್ರಹ್ಮ ಸ್ವರೂಪವಾಗಿ ತನ್ನನ್ನು ಗುರುತಿಸಿಕೊಂಡಿದ್ದಾನೆ. ಒರಿಸ್ಸಾದ ಪುರಿಯಲ್ಲಿರುವ ಜಗನ್ನಾಥನ ಮರದ ವಿಗ್ರಹವೂ ವಿಶ್ವಕರ್ಮನಿಂದ ನಿರ್ಮಿತವಾದುದು ಎಂದು ಹೇಳಲಾಗುತ್ತದೆ. ಅಂತೆಯೇ ಪುರಾಣಗಳನ್ನು ಒಮ್ಮೆ ಅವಲೋಕಿಸಿದಾಗ, ದೇವ, ದಾನವರ ಯುದ್ಧದ ಸಮಯದಲ್ಲಿ ದೇವತೆಗಳ ಅನುಕೂಲಕ್ಕಾಗಿ ರಥವನ್ನು, ಶಸ್ತ್ರಾಸ್ತ್ರಗಳನ್ನು, ಇಂದ್ರನಿಗೆ ವಜ್ರಾಯುಧವನ್ನು ಕುಬೇರನಿಗೆ ಪುಷ್ಪಕ ವಿಮಾನವನ್ನು ನಿರ್ಮಿಸಿದ ಖ್ಯಾತಿ ವಿಶ್ವಕರ್ಮನದು. ವಿಶ್ವಕರ್ಮನ ಸೃಷ್ಟಿಯ ಕಾರ್ಯ ಅರಮನೆ, ನಗರ ಶಸ್ತ್ರಾಸ್ತ್ರಗಳಿಷ್ಟೇ ಸೀಮಿತವಾಗಿಲ್ಲ. ಸುಂದರ, ಉಪಸುಂದರೆಂಬ ಮಹಾ ದುರುಳ ರಾಕ್ಷಸರನ್ನು ಸಂಹರಿಸುವ ಸಲುವಾಗಿ ತಿಲೋತ್ತಮೆಯನ್ನು ವಿಶ್ವಕರ್ಮನು ಸೃಷ್ಟಿಸಿದನೆಂಬ ಉಲ್ಲೇಖವನ್ನು ಪುರಾಣಗಳಲ್ಲಿ ನೋಡಬಹುದು.ಇದರಿಂದಾಗಿ ವಿಶ್ವಕರ್ಮನು ಸೃಷ್ಟಿಕರ್ತನಾಗಿ ಬ್ರಹ್ಮನಿಗೆ ಸಮನಾದನು. ಇಂದಿಗೂ ಮರ,ಕಲ್ಲು, ಲೋಹ, ಮಣ್ಣು,ಚಿನ್ನದಿಂದ ಸುಂದರವಾದ ಆಕೃತಿ,ವಿನ್ಯಾಸ ಮಾಡುವ ಜನಾಂಗದವರನ್ನು ವಿಶ್ವಕರ್ಮನ ಹೆಸರಿನಿಂದಲೇ ಗುರುತಿಸುತ್ತಾರೆ. ಜೀವಿಯ ಬುದ್ಧಿಶಕ್ತಿ, ಕುಶಲತೆಗೆ ವಿಶ್ವಕರ್ಮನೇ ಸಂಕೇತನಾಗಿದ್ದಾನೆ, ಜಗದ್ವಂದ್ಯನಾಗಿದ್ದಾನೆ.

ಕನ್ಯಾ ಸಂಕ್ರಮಣದ ದಿನದಂದು ವಿಶ್ವಕರ್ಮ ಈ ಜಗತ್ತನ್ನು ಸೃಷ್ಟಿಸಿದನೆನ್ನುವ ನಂಬಿಕೆ ಹಲವರದ್ದು. ಹಾಗೆಂದೇ ಅಂದು ವಿಶ್ವಕರ್ಮನನ್ನು ನೆನೆಯುವ ಸಂಪ್ರದಾಯವಿದೆ. ಪರಬ್ರಹ್ಮಸ್ವರೂಪನಾದ ವಿಶ್ವಕರ್ಮನಿಗೆ ಉತ್ತರ ಭಾರತದಲ್ಲಿ ಅಗ್ರಪೂಜೆ. ಮೊದಲಿಗೆ ವಿಶ್ವಕರ್ಮನನ್ನು ನಿರ್ಗುಣ ರೂಪದಲ್ಲಿ ಪೂಜೆಗೊಳ್ಳುತ್ತಿದ್ದಾನೆ. ವಿಶ್ವಕರ್ಮನ ಹೆಸರಿನಲ್ಲಿ ಸಾಕಷ್ಟು ದೇಗುಲಗಳಿವೆ. ಬೆಳಗಾವಿಯ ಸಿರಸಂಗಿಯಲ್ಲಿ ಪುರಾತನ ಕರ್ಮಟೇಶ್ವರ (ವಿಶ್ವಕರ್ಮ), ಮಂಗಳೂರು ಹಾಗೂ ಉಡುಪಿ ಕಾಟಪಾಡಿಯಲ್ಲಿರುವ ವಿಶ್ವಕರ್ಮನ ದೇಗುಲಗಳು ಮುಖ್ಯವಾಗಿದೆ. ಇನ್ನುಳಿದಂತೆ ಕುಂದಾಪುರದ ಉಪ್ಪಳ್ಳಿಯಲ್ಲಿ ವಿಶ್ವಕರ್ಮನನ್ನು ವಿಭೂತಿಯ ರೂಪದಲ್ಲಿ ಪೂಜಿಸುತ್ತಾರೆ. ಗೋಕರ್ಣದ ಕೋಟಿ ತೀರ್ಥದಲ್ಲಿ ಲಿಂಗರೂಪದಲ್ಲಿ (ಕರ್ಮಟೇಶ್ವರ) ವಿಶ್ವ ಕರ್ಮನ ಆರಾಧನೆ ನಡೆಯುತ್ತದೆ.



(ವಿವಿಧ ಮೂಲಗಳಿಂದ)

ಧಾರಾವಾಹಿ -3



# ವೇದದಲ್ಲಿ ಗಣಿತ

- ರಮೇಶ್ ಕುಮಾರ್ ಬನ್ನೂರು
99018 02587

**ವೇದ ಗಣಿತದ ಬಗ್ಗೆ ಬೆಳೆಯುತ್ತಿರುವ ಆಸಕ್ತಿ**

ಗಮನಾರ್ಹವಾದ ಈ ವೇದಗಣಿತ ಪದ್ಧತಿ ಶಿಕ್ಷಣ ಕ್ಷೇತ್ರದಲ್ಲಿ ಅಪಾರವಾದ ಆಸಕ್ತಿಯನ್ನು ಕೆರಳಿಸಿರುವುದು ಮಾತ್ರವಲ್ಲದೆ ವಿದ್ಯಾರ್ಥಿ ವೃಂದ ವೇದಗಣಿತದ ಸುಲಭ ಮತ್ತು ಸರಳ ವಿಧಾನಗಳತ್ತ ಆಕರ್ಷಿತರಾಗುತ್ತಿದ್ದಾರೆ, ಗಣಿತದ ವಿಷಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಿಡಿಸಲು ಐಐಟಿ (Indian Institute of Technology) ವಿದ್ಯಾರ್ಥಿಗಳೂ ಸಹ ವೇದಗಣಿತದ ವಿಧಾನಗಳನ್ನು ಅನುಸರಿಸುವತ್ತ ಒಲವು ತೋರುತ್ತಿರುವುದು ವೇದಗಣಿತದಲ್ಲಿ ಹೆಚ್ಚುತ್ತಿರುವ ಆಸಕ್ತಿಗೆ ದ್ಯೋತಕವಾಗಿದೆ.

**ಪೂಜ್ಯರಾದ ಗುರುದೇವ**

ವಿಶಿಷ್ಟ ದೈವಿಕ ವ್ಯಕ್ತಿತ್ವದ, ಮಹಾಜ್ಞಾನಿಗಳೂ ಆದ, ತಮ್ಮ ಆಧ್ಯಾತ್ಮಿಕ, ಶೈಕ್ಷಣಿಕ ಮತ್ತು ಸಂಶೋಧನಾತ್ಮಕ ಸಾಧನೆಗಳನ್ನು ಮನುಕುಲದ ಒಳಿತಿಗಾಗಿ ಮುಡುಪಾಗಿಟ್ಟ ಪುರಿಯ ವಿಖ್ಯಾತ ಗೋವರ್ಧನ ಮಠದ ಪೂಜ್ಯ ಜಗದ್ಗುರು ಶಂಕರಾಚಾರ್ಯ ಶ್ರೀ ಭಾರತೀ ಕೃಷ್ಣ ತೀರ್ಥ ಮಹಾರಾಜರ ಬಗ್ಗೆ ಕೇಳರಿಯದ ಮಂದಿ ಬಹಳ ವಿರಳ. ಶಿಷ್ಯ ವೃಂದದಲ್ಲಿ 'ಗುರೂಜಿ' ಅಥವಾ 'ಜಗದ್ಗುರೂಜಿ'ಎಂದೇ ಪ್ರಖ್ಯಾತರಾಗಿದ್ದ ಸ್ವಾಮೀಜಿಯವರು 1884 ರ ಮಾರ್ಚ್ ತಿಂಗಳಿನಲ್ಲಿ ಅತ್ಯಂತ ವಿದ್ಯಾವಂತ ಮತ್ತು ಧರ್ಮಶ್ರದ್ಧೆಯ ಮಾತಾಪಿತೃಗಳ ಮಗನಾಗಿ ಜನಿಸಿದರು. ಜಗದ್ಗುರುಗಳ ಪೂರ್ವಾಶ್ರಮದ ನಾಮಧೇಯ ವೆಂಕಟರಾಮನ್,ಅವರು ತಮ್ಮ ಬಾಲ್ಯದಿಂದಲೂ ಅತ್ಯಂತ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದರು.1899ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಮೊದಲಿಗರಾಗಿ ಉತ್ತೀರ್ಣರಾದರು. ಸಂಸ್ಕೃತದಲ್ಲಿ ಅವರ ಪ್ರಾವೀಣ್ಯತೆ ಅಸದಳ, ಅಂತೆಯೇ ಶ್ರೇಷ್ಠ ವಾಗ್ಮಿಯೂ ಆಗಿದ್ದರೂ ಇವರ ಪ್ರಕಾಂಡ ಪ್ರತಿಭೆಯನ್ನು ಗಮನಿಸಿ ಮದ್ರಾಸಿನ ಸಂಸ್ಕೃತ ಸಂಘವು ವೆಂಕಟರಾಮನ್ ಹದಿನಾರು ವರ್ಷದ ಬಾಲಕರಾಗಿದ್ದಾಗಲೇ 'ಸರಸ್ವತಿ' ಎಂಬ ಬಿರುದನ್ನಿತ್ತು ಸನ್ಮಾನಿಸಿತು. 1903 ರಲ್ಲಿ ಬಿ.ಎ. ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದು ಉತ್ತೀರ್ಣರಾದ ನಂತರ, 1904 ರಲ್ಲಿ ರೋಚೆಸ್ಟರ್ ನ್ಯೂಯಾರ್ಕ್‌ನ ಅಮೆರಿಕನ್ ಸೈನ್ಸ್ ಕಾಲೇಜಿನ ಎಂ.ಎ ಪರೀಕ್ಷೆಗೆ ಕುಳಿತರು. ತಾವು ಪರೀಕ್ಷೆಗೆ ತೆಗೆದುಕೊಂಡಿದ್ದ ಸಂಸ್ಕೃತ, ತತ್ವಶಾಸ್ತ್ರ, ಇಂಗ್ಲೀಷ್, ಗಣಿತಶಾಸ್ತ್ರ, ವಿಜ್ಞಾನ ಮತ್ತು ಇತಿಹಾಸ ವಿಷಯಗಳೆಲ್ಲದರಲ್ಲೂ ಪ್ರಥಮ ಸ್ಥಾನ ಪಡೆದು ಸರ್ವಕಾಲಿಕ ವಿಶ್ವ ವಿಕ್ರಮವನ್ನೇ ಸ್ಥಾಪಿಸಿದರು. ವಿದ್ಯಾರ್ಥಿಯಾಗಿ ವೆಂಕಟರಾಮನ್‌ರವರು ತಮ್ಮ ತೀಕ್ಷ್ಣ ಬುದ್ಧಿಮತ್ತೆ, ಅದ್ಭುತ ಸ್ಮರಣಶಕ್ತಿ ತೀರಿಸಲಾರದ ಕುತೂಹಲಗಳಿಗೆ ಹೆಸರಾಗಿದ್ದರು. ಧರ್ಮ, ಸಮಾಜಶಾಸ್ತ್ರ, ಇತಿಹಾಸ, ಸಾಹಿತ್ಯ ಮತ್ತು ರಾಜಕೀಯ ಸಂಬಂಧಿ ಇವರು ಬರೆದ ವಿದ್ವತ್ ಪೂರ್ಣ ಲೇಖನಗಳು ಅವರ ವಿದ್ಯಾರ್ಥಿದೆಸೆಯಲ್ಲಿದ್ದಾಗಲಿಂದಲೂ ಅನೇಕ ಅಂತರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿದ್ದವು. ಶ್ರೀಯುತ ವೆಂಕಟರಾಮನ್ ತಮ್ಮ ಸಾಮಾಜಿಕ ಜೀವನವನ್ನು 1905 ರಲ್ಲಿ ಗೋಪಾಲಕೃಷ್ಣ ಗೋಖಲೆಯವರ ಮಾರ್ಗದರ್ಶನದಲ್ಲಿ ಆರಂಭಿಸಿದರು. 1908 ರಲ್ಲಿ ಕರ್ನಾಟಕದ ಶೃಂಗೇರಿಗೆ ಆಗಮಿಸಿ ಜಗದ್ಗುರು ಸಚ್ಚಿದಾನಂದ ಅಭಿನವ ನೃಸಿಂಹ ಭಾರತಿ ಸ್ವಾಮೀಜಿಗಳ ಸಾನಿಧ್ಯದಲ್ಲಿ ಆಧ್ಯಾತ್ಮ ವಿದ್ಯೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.ಕೆಲವು ದಿನಗಳ ನಂತರ ರಾಷ್ಟ್ರೀಯ ನಾಯಕರ ಆಗ್ರಹದ ಮೇರೆಗೆ ರಾಜ ಮಹೇಂದ್ರಿಯ ನ್ಯಾಷ

ನಲ್ ಕಾಲೇಜಿನ ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡರು. ಆದರೆ, ಅವರಲ್ಲಿನ ಆರದ ಆಧ್ಯಾತ್ಮಿಕ ತೃಷ್ಣೆಯಿಂದಾಗಿ ಮತ್ತು ಶೃಂಗೇರಿಗೆ ಹಿಂದಿರುಗಿ ಜಗದ್ಗುರು ಸಚ್ಚಿದಾನಂದ ಅಭಿನವ ನೃಸಿಂಹ ಭಾರತಿ ಸ್ವಾಮೀಜಿಗಳ ಸಾನಿಧ್ಯದಲ್ಲಿ ಸತತ ಎಂಟು ವರ್ಷಗಳ ವ್ಯಾಸಂಗ ಮತ್ತು ವೇದಾಧ್ಯಯನವನ್ನು ಕೈಗೊಂಡರು.

ಅನೇಕ ವರ್ಷಗಳ ಸತತ ಜ್ಞಾನಾರ್ಜನೆ ಮತ್ತು ನಿಷ್ಠಾಪೂರ್ಣ ತಪಸ್ಸಿನಿಂದ ಆಧ್ಯಾತ್ಮಿಕ ಸಾಧನೆಗೈದ ಅವರು 1919 ರಲ್ಲಿ ಸನ್ಯಾಸವನ್ನು ಸ್ವೀಕಾರ ಮಾಡಿದರು. ಆಗ ಅವರಿಗೆ ಭಾರತೀ ಕೃಷ್ಣ ತೀರ್ಥ ಎಂಬ ಹೆಸರನ್ನು ನೀಡಿ ಶಾರದಾ ಪೀಠದ ಉನ್ನತ ಸ್ಥಾನದ ಧರ್ಮಾಧಿಕಾರಿ ಶಂಕರಾಚಾರ್ಯರನ್ನಾಗಿ ನೇಮಿಸಲಾಯಿತು.1925 ರಲ್ಲಿ ಪುರಿಯ ಗೋವರ್ಧನ ಮಠದ ಶಂಕರಾಚಾರ್ಯರಾಗಿ ಅಧಿಕಾರ ಸ್ವೀಕರಿಸಿದರು. ಮುಂದಿನ ದಶಕಗಳಲ್ಲಿ ತಮ್ಮ ಪ್ರವಚನಗಳ ಮೂಲಕ ಸನಾತನ ಧರ್ಮದ ಸೂಕ್ತ ತಿಳುವಳಿಕೆಯನ್ನು ಜನತೆಗೆ ನೀಡುತ್ತಾ ತಮ್ಮನ್ನು ತಾವೇ ಆಧ್ಯಾತ್ಮಿಕ ಚಿಂತನೆ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಂಡರು 1958 ರಲ್ಲಿ ವಿಶ್ವಶಾಂತಿ ಮತ್ತು ವೇದಾಂತದ ಆಧ್ಯಾತ್ಮಿಕ ಮೌಲ್ಯಗಳನ್ನು ಇಡೀ ವಿಶ್ವಕ್ಕೆ ತಲುಪಿಸುವ ಉದ್ದೇಶ್ಯದಿಂದ ಅಮೇರಿಕೆಯ ಪ್ರವಾಸವನ್ನು ಕೈಗೊಂಡರು. ಫೆಬ್ರವರಿ 1960 ರಲ್ಲಿ ಅನಾರೋಗ್ಯದ ನಿಮಿತ್ತ ಜಗದ್ಗುರುಗಳು ಮಹಾಸಮಾಧಿಸ್ಥರಾದರು.ಗುರುಗಳು ಶೃಂಗೇರಿಯಲ್ಲಿ ಎಂಟು ವರ್ಷಗಳ ಅವಧಿಯಲ್ಲಿ ಆಳವಾದ ಅಧ್ಯಯನ ಮತ್ತು ಅಂತದೃಷ್ಟಿಯ ದಿವ್ಯಜ್ಞಾನದ ಆಧಾರದ ಮೇಲೆ ಅಥರ್ವ ವೇದದ ವಿವಿಧ ಭಾಗಗಳಲ್ಲಿದ್ದ ವಿಷಯಗಳನ್ನು ಕ್ರೋಢೀಕರಿಸಿ,ಅವುಗಳಿಗೆ 16 ಸೂತ್ರ ರೂಪವನ್ನು ನೀಡಿ ಹದಿನಾರು ಗ್ರಂಥಗಳನ್ನು ರಚಿಸಿರುವುದಾಗಿ ಹೇಳಿದರೂ, ಅವು ದೊರಕದೆ, ಅಂತಿಮವಾಗಿ 1957 ರಲ್ಲಿ ತಮಗೆ ನೆನಪಿನಲ್ಲಿದ್ದ ವಿಷಯಗಳನ್ನು ಒಂದು ಗ್ರಂಥರೂಪದಲ್ಲಿ ಬರೆದರು, ಅದೇ ಇಂದು ಪ್ರಚಲಿತವಿರುವ ವೇದಗಣಿತದ ಮೂಲಾಧಾರ ಗ್ರಂಥವಾಗಿದೆ.

ಮುಂದಿನ ಅಧ್ಯಾಯಗಳಲ್ಲಿ ವೇದಗಣಿತದ ರೀತ್ಯಾ ಗಣಿತದ ಸಮಸ್ಯೆಗಳನ್ನು ಬಿಡಿಸುವ ವಿವಿಧಿ ವಿಧಿವಿಧಾನಗಳನ್ನು ತಿಳಿಯುವ ಪ್ರಯತ್ನ ಮಾಡೋಣ.

(ಮುಂದುವರಿಯುವುದು)

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧ ವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀ ವೆಂಕಟೇಶ್ವರಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ):

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪ ಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗ ವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.

ಧಾರಾವಾಹಿ - 6

# ಶ್ರೀಮದ್ಭಗವದ್ಗೀತೆ

ತೆಲುಗು ಮೂಲ : ಕೆ. ವಿಶ್ವನಾಥ ಶರ್ಮ

ಅನುವಾದ : ಶ್ರೀಮತಿ ಬಿ. ಪದ್ಮಜ



(ಕಳೆದ ಸಂಚಿಕೆಯಿಂದ)

ಪ್ರತಿಜ್ಞೆ ಮಾಡಿದವನೇ ಮುಂದಕ್ಕೆ ಸಾಗಿದ. ಭೀಷ್ಮಾಚಾರ್ಯ ಪಾಂಡವ - ಕೌರವರಿಗೆ ಗುರುವನ್ನು ಹುಡುಕುತ್ತಿರುವ ವಿಷಯವನ್ನು ತಿಳಿದುಕೊಂಡ. ಅಲ್ಲಿಗೆ ಬಂದು ಭೀಷ್ಮಾಚಾರ್ಯರನ್ನು ಆಕರ್ಷಿಸಿದ. ಅಂದಿನಿಂದ ಕೌರವ - ಪಾಂಡವರಿಗೆ ಗುರುವಾದ. ದ್ರುಪದನನ್ನು ಸೋಲಿಸುವಂತಹಾ ಶಿಷ್ಯನನ್ನು ತಯಾರು ಮಾಡಬೇಕು ಎಂಬುದೇ ಆತನ ಮುಖ್ಯ ಗುರಿಯಾಗಿತ್ತು. ಅವರಿಗೆಲ್ಲಾ ಚೆನ್ನಾಗಿ ವಿದ್ಯಾಬುದ್ಧಿಗಳನ್ನು ಕಲಿಸಿದ. ಅವರುಗಳಲ್ಲಿ ತನಗೆ ತಕ್ಕ ಶಿಷ್ಯ ಯಾರು ಎಂದು ಹುಡುಕಿದ. ತನ್ನ ಮಗ ಅಶ್ವತ್ಥಾಮನಿಗಿಂತಲೂ ಅರ್ಜುನ ತನಗೆ ಸರಿಯಾದ ಶಿಷ್ಯನೆಂದು ತೀರ್ಮಾನಿಸಿದ ಅರ್ಜುನ ಇಂದ್ರನ ಅಂಶದಿಂದ ಜನ್ಮಿಸಿದವನು. ಸಾತ್ವಿಕ, ಅಪಾರವಾದ ವಿವೇಕವಂತ, ವಿನಯವಂತ, ಅಂತಹಾ ಸದ್ಗುಣಗಳನ್ನು ಉಳ್ಳ ಅರ್ಜುನನಿಗೆ ತನಗೆ ತಿಳಿದಿರುವ ಎಲ್ಲಾ ಶಸ್ತ್ರಾಸ್ತ್ರ ವಿದ್ಯೆಗಳನ್ನು ಕರತಲಾಮಕ ಮಾಡಿಸಿದ. ಅವರ ವಿದ್ಯಾಭ್ಯಾಸವೆಲ್ಲಾ ಮುಗಿದ ಮೇಲೆ ತನಗೆ ಗುರುದಕ್ಷಿಣೆಯನ್ನು ನೀಡಬೇಕೆಂದು ಕೌರವ ಪಾಂಡವರನ್ನು ಕೇಳಿದ ಕೌರವರು ತಮ್ಮ ಬಳಿ ಇರುವ ಸಂಪತ್ತುಗಳನ್ನು ತಂದು ಒಪ್ಪಿಸಿದರು, ಆದರೆ ಅವನ್ನು ಸ್ವೀಕರಿಸದೆ. ತನ್ನ ಮನದಲ್ಲಿದ್ದ ಆಸೆಯನ್ನು ಹೊರಗೆಡುಹಿದ. ಆಗ ಪಾಂಡವರು ದ್ರುಪದ ರಾಜನನ್ನು ಎಳೆದುಕೊಂಡು ಬಂದು ದ್ರೋಣಾಚಾರ್ಯನ ಕಾಲ ಬಳಿ ಒಪ್ಪಿಸಿದರು. ಆಗ ದ್ರೋಣಾಚಾರ್ಯ ದ್ರಪದನನ್ನು ನೋಡಿ. 'ಹೇ ದ್ರುಪದಾ! ನೀನೀಗ ರಾಜ್ಯಭ್ರಷ್ಟನಾಗಿರುವಿ ನಿನ್ನನ್ನು ನಿನ್ನ ರಾಜ್ಯವನ್ನು ನನ್ನ ಶಿಷ್ಯನು ತಂದು ನನಗೆ ಒಪ್ಪಿಸಿದ್ದಾನೆ. ಈಗ ನಿನ್ನ ರಾಜ್ಯ ನನ್ನದು. ಅದಕ್ಕೆ ನಾನೇನು ಮಾಡುತ್ತೇನೆಂದರೆ ನಾನು ನಿನ್ನೊಂದಿಗೆ ಸ್ನೇಹವನ್ನು ಮಾಡುತ್ತೇನೆ. ಅದಕ್ಕೆ ಅರ್ಧರಾಜ್ಯವನ್ನು ನಿನಗೆ ನೀಡುತ್ತೇನೆ. ಆಗ ನೀನು ಅರ್ಧರಾಜನಾಗುವಿ. ನಾನು ಅರ್ಧರಾಜನಾಗುತ್ತೇನೆ. ಈಗ ನಾವಿಬ್ಬರು ಸಮಾನರು ಎಂದು ಹೇಳಿದ ಆದರೆ ಇವೆಲ್ಲಾ ನಡೆದದ್ದು ಕೇವಲ ಪೈಪೋಟಿಯಿಂದಾಗಿ! ಆದರೆ ಒಂದು ವಿಷಯವನ್ನು ನಾವು ಗಮನಿಸಬೇಕು. ಮಹಾಭಾರತದಲ್ಲಿ ಇರುವ ಪ್ರತಿಯೊಂದು ಪಾತ್ರವು ಬಹಳ ವಿಶೇಷವಾಗಿದೆ. ಪ್ರತಿಪಾತ್ರದಲ್ಲೂ ಪ್ರತಿ ವ್ಯಕ್ತಿಯಲ್ಲಿ ತಿಳಿಯದ, ನಾವು ಊಹಿಸಲಾಗದಂತಹಾ ಒಂದು ಯೋಗಬಲವಿದೆ. ಆ ಮಹರ್ಷಿಗಳ, ಅವರ ಪಿತೃದೇವತೆಗಳ ಆಶೀರ್ವಾದ ಪರಿಪೂರ್ಣವಾಗಿ ಇರುತ್ತದೆ. ಈ ದ್ರುಪದ ರಾಜನಿಗೆ ಪುನಃ ದ್ರೋಣನ ಮೇಲೆ ಕೋಪಬಂದಿತು. ಅದಕ್ಕೆ ಅವನು ದ್ರೋಣನನ್ನು ಕೊಲ್ಲುವಂತಹಾ ಮಗಬೇಕು. ಹಾಗೆಯೇ ಅರ್ಜುನ ತನಗೆ ಅಳಿಯನಾಗಬೇಕು ಎಂದು ಘೋರವಾದ ತಪಸ್ಸು ಮಾಡಿದ. ಆ ತಪಸ್ಸಿನ ಫಲವಾಗಿ ದ್ರೌಪದಿ ಹಾಗೂ ದ್ರುಷ್ಟದ್ಯುಮ್ನ ಹುಟ್ಟಿದರು. ಆ ದೃಷ್ಟದ್ಯುಮ್ನನು ನಿನ್ನ ಸಂಹಾರ ಮಾಡುತ್ತಾನೆ ಎಂದು ದ್ರುಪದ ದ್ರೋಣನಿಗೆ ಹೇಳಿದ. ಅಷ್ಟಕ್ಕೇ ಸುಮ್ಮನಾಗದೇ "ತವಶಿಷ್ಯೇಣ" ಆ ದೃಷ್ಟದ್ಯುಮ್ನನನ್ನು ಕರೆತಂದು ದ್ರೋಣನ ಬಳಿಯಲ್ಲೇ ವಿದ್ಯಾಭ್ಯಾಸಕ್ಕಾಗಿ ಬಿಟ್ಟ. ದ್ರೋಣನನ್ನು ಕೊಲ್ಲಬೇಕೆಂದರೆ ಬಿಲ್ವಿದ್ಯೆಯಲ್ಲಿ ನಿಪುಣನಾಗಿರಬೇಕು. ಅದಕ್ಕೇ ದ್ರೋಣನ ಬಳಿಯಲ್ಲೇ ಶಿಷ್ಯವೃತ್ತಿಯನ್ನು ಮಾಡಿದ. ಈ ವಿಷಯವನ್ನು ತಿಳಿದಿದ್ದರೂ ದ್ರೋಣಾಚಾರ್ಯ ಅವನಿಗೆ ಎಲ್ಲಾ ಶಿಷ್ಯರಿಗೆ ಕಲಿಸಿದಂತೆ ಶಸ್ತ್ರಾಸ್ತ್ರಗಳನ್ನು ಕಲಿಸಿದ ಕುರುಕ್ಷೇತ್ರ ಯುದ್ಧದಲ್ಲಿ ಕೌರವರ ಪಕ್ಷದಲ್ಲಿ ಸೇನಾಧಿಪತಿಗಳೂ ಬದಲಾಗುತ್ತಿದ್ದರು. ಮೊದಲು ಭೀಷ್ಮ, ನಂತರ ದ್ರೋಣ. ಆಮೇಲೆ ಕರ್ಣ ಶಲ್ಯ ಹೀಗೆ ಅನೇಕರು ಸೇನಾಧಿಪತಿಗಳಾದರು. ಆದರೆ ಹದಿನೆಂಟು ದಿನಗಳ ಕಾಲ ಪಾಂಡವರ ಪಕ್ಷದಲ್ಲಿ ದೃಷ್ಟದ್ಯುಮ್ನ ಮಾತ್ರಾ ಸೇನಾಧಿಪತಿಯಾಗಿದ್ದ. ಅಂತಹಾ ಧೀರ

ನನ್ನು ಮೊದಲೇ ಕೊನೆಗಾಣಿಸಿದ್ದರೇ ನಿನ್ನ ಬುದ್ಧಿ ಮತ್ತತೆಯ ಬಗೆಗೆ ಮಾತನಾಡಲೇ! ನಿನ್ನನ್ನು ಕೊಲ್ಲಲು ನಿನ್ನ ಬಳಿಯಲ್ಲೇ ವಿದ್ಯೆಯನ್ನು ಕಲಿತ ದೃಷ್ಟದ್ಯುಮ್ನ ಬಹಳ ಬುದ್ಧಿವಂತ ಎಂದು ಹೇಳ ಬಹುದು. ನೀನು ಬುದ್ಧಿ ಹೀನನಾದೆ. ಈಗ ಯುದ್ಧ ದಲ್ಲಿ ನಿಂತು ನಿನ್ನ ಪ್ರಾಣಕ್ಕೆ ನೀನೇ ಕುತ್ತು ತಂದು ಕೊಂಡೆ ಎಂದು ದುರ್ಯೋಧನ ಹೀನಾಯವಾಗಿ ಗುರುವನ್ನು ನಿಂದಿಸಿದ. ಗುರುವಿನ ಬಳಿ ಈ ರೀತಿ ಮಾತ ನಾಡುವರೇ? ಈ ರೀತಿಯ ನಡವಳಿಕೆ ಸರಿಯಲ್ಲ. ಗುರುವಿನ ಬಳಿ ಮಾತನಾಡುವಾಗ ವಿನಯವನ್ನು ಬಿಟ್ಟು ಮಾತನಾಡಲೇಬಾರದು. ಈ ವಿಷಯವನ್ನು ಸ್ಪಷ್ಟವಾಗಿ ತಿಳಿಸುವುದಕ್ಕಾಗಿಯೇ ಪರಮಾತ್ಮ ಈ ಶ್ಲೋಕವನ್ನು ಇಲ್ಲಿ ತಿಳಿಸಿದ್ದಾನೆ. ಗುರುಗಳನ್ನು ಆಶ್ರಯಿಸುವುದು, ಅವರನ್ನು ಭೇಟಿ ಯಾಗುವುದು ದೊಡ್ಡ ವಿಷಯವಲ್ಲ ಆದರೆ ಅವರ ಬಳಿಗೆ ಹೋದಾಗ ಅವರ ಬಳಿ ನಮ್ಮ ವ್ಯವಹಾರ ಹೇಗಿರಬೇಕು ಎನ್ನುವುದೇ ಸ್ವಾರಸ್ಯಕರವಾದ ವಿಷಯ! ಅದರ ಮೇಲೆ ನಮ್ಮ ಭವಿಷ್ಯ ನಿರ್ಧಾರ ವಾಗುತ್ತದೆ. ದುರ್ಯೋಧನ ಹೇಗೆ ಸೋತ ಎನ್ನು ವುದು ಈಗ ಅರ್ಥವಾಗಿರಬೇಕಲ್ಲಾ! ಗುರುವನ್ನು ಅವಮಾನಿಸಿದ, ನಿಂದೆ ಮಾಡಿದ. ಗುರುವೆಂದರೆ ಸಾಕ್ಷಾತ್ತು ಭಗವಂತ! ಆದರೆ ಅರ್ಜುನನಿಗೆ ವಿಜಯಸಿಕ್ಕಿತು. ಆತ ಜಗದ್ಗುರುವಾದ ಶ್ರೀ ಕೃಷ್ಣ ಪರಮಾತ್ಮನನ್ನು ಆಶ್ರಯಿಸಿ ವಿನಯದಿಂದ ನಡೆದು ಕೊಂಡ. ನೀನೇ ಮಾರ್ಗದರ್ಶನ ನೀಡ ಬೇಕೆಂದ ಅದೇ ಅರ್ಜುನನಿಗೂ ದುರ್ಯೋ ಧನನಿಗೆ ಇರುವ ವ್ಯತ್ಯಾಸ!! ಯಾವ ಸಂದರ್ಭ ದಲ್ಲೂ ನಾವು ದುರ್ಯೋಧನನಂತೆ ಅಹಂಕಾರ ವನ್ನು ಪ್ರದರ್ಶಿಸದೇ ಅರ್ಜುನನಂತೆ ವಿನಯ ವಂತರಾಗಿರುವುದೇ ಶ್ರೇಯಸ್ಕರ! ಇದೇ ಗೀತಾ ಮೃತದಲ್ಲಿ ಭಗವಂತನು ತಿಳಿಸುವ ಸಾರಾಂಶ! ಅಷ್ಟೇ ಅಲ್ಲದೇ ಗುರುಗಳ ಬಳಿ ಅಲ್ಲದೇ ಬೇರೆ ಯಾರ ಬಳಿ ಹೋದರೂ ನಮ್ಮ ಮನಸ್ಸಿನಲ್ಲಿನ ಭಾವನೆಗಳನ್ನು ಹೇಗೆ ವ್ಯಕ್ತ ಪಡಿಸಬೇಕು.? ಅವ ರಿಗೆ ನಮ್ಮ ಮನಸ್ಸಿನಲ್ಲಿ ಇರುವ ಭಾವನೆಯನ್ನು ಸ್ಪಷ್ಟವಾಗಿ ತಿಳಿಸಬೇಕು. ಹಾಗಲ್ಲದೇ ದುರ್ಯೋಧನನಂತೆ ಅವರ ಮನಸ್ಸಿನಲ್ಲಿರುವ ಅಸೂಯೆಯನ್ನು ದ್ವಂದ್ವಾರ್ಥಗಳಿಂದ ಅವರ ಮನಸ್ಸನ್ನು ನೋಯಿಸಬಾರದು. ಒಂದು ಮಾತಿಗೆ ಒಂದೇ ಅರ್ಥವಿರಬೇಕು. ಹಾಗಲ್ಲದೇ ಇನ್ನೂ ಅರ್ಥಗಳು ಇದ್ದರೆ ಅವು ಇನ್ನೊಬ್ಬರನ್ನು ಸಂತೋಷಪಡಿಸುವಂತೆ ಇರಬೇಕು. ಈ ಉತ್ತಮವಾದ ಗುಣಗಳನ್ನು ಭಗವದ್ಗೀತೆ ತಾಯಿಯಂತೆ ನಮಗ ಬೋಧಿಸುತ್ತಿದೆ ಆದ್ದರಿಂದ ನಾವು ಬಹಳ ಶ್ರದ್ಧೆಯಿಂದ ಈ ವಿಷಯ ಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಗುರುವನ್ನು ಆಶ್ರಯಿಸಿದಾಗ ಗುರುಗಳು ಕಾಣಿಸಿದಾಗ ಅವರಿಗೆ ವಿನಯ ಪೂರ್ವಕವಾಗಿ ನಮಸ್ಕರಿಸಿ ಅವರ ಬಳಿ ಬಹಳ ಮರ್ಯಾದೆಯಿಂದ ನಮಗೆ ಬೇಕಾದ ಪ್ರಯೋಜನವನ್ನು ಜ್ಞಾನವನ್ನು ಪಡೆಯೋಣ.

ದುರ್ಯೋಧನನಂತೆ ಇದ್ದರೆ ನಮಗೆ ಎಂತಹ ಫಲವೂ ದಕ್ಕುವುದಿಲ್ಲ. ಅರ್ಜುನನಂತೆ ಇದ್ದರೆ ಪರಿಪೂರ್ಣವಾದ ಸತ್ಫಲಿತವನ್ನು ಅಖಿಲಾಂಡ ಕೋಟಿ ಬ್ರಹ್ಮಾಂಡನಾಯಕನಾದ ದೇವದೇವನಾದ ಶ್ರೀಕೃಷ್ಣಪರಮಾತ್ಮ ಅನುಗ್ರಹಿಸುತ್ತಾನೆ. ಈ ವಿಷಯವನ್ನು ನಾವು ಸದಾ ನೆನಪಿನಲ್ಲಿರಿಸಿ ಕೊಂಡಿರಬೇಕು. ಅದೇ ಈ ಶ್ಲೋಕದಲ್ಲಿ ಪರಮಾರ್ಥ!ಈ ವಿಷಯಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕೆಂದರೆ ಆ ಶಬ್ದಗಳು ನಮ್ಮ ಮನಸ್ಸಿನಲ್ಲಿ ಬೇರೂರಿರಬೇಕು. ಗುರುಭಕ್ತಿ ಇಲ್ಲದೇ ಯಾವ ಕಾರ್ಯವೂ ಸಫಲ ವಾಗುವುದಿಲ್ಲ.ಗುರುವನ್ನು ಅವಮಾನಿಸಿ ಯಾರೂ ಪ್ರಸಿದ್ಧಿಯಾಗಿಲ್ಲ.ಈ ವಿಷಯವನ್ನು ನಾವು ನಿರಂತರವಾಗಿ ದೃಷ್ಟಿಯಲ್ಲಿರಿಸಿಕೊಂಡು ನಮ್ಮ ಜೀವನದಲ್ಲಿ ಒಂದು ಅಭ್ಯಾಸದಂತೆ ಈ ಮಾತುಗಳನ್ನು ಅಳವಡಿಸಿಕೊಂಡು ನಮ್ಮ ಜೀವನವನ್ನು ಸಫಲೀ ಕೃತವನ್ನಾಗಿ ಮಾಡಿಕೊಳ್ಳಬೇಕು.

(ಮುಂದುವರಿಯುತ್ತದೆ.)


ಯಥಾಖನನ್ ಖನಿತ್ರೇಣ
ನರೋ ವಾರ್ಯ ಧಿಗಚ್ಛತಿ ।
ತಥಾ ಗುರುಗತಾಂ ವಿದ್ಯಾಂ
ಶುಶ್ರೂಷುರ ಧಿ ಗಚ್ಛತಿ ॥

(ಮನುಸ್ಮೃತಿ)

**ಮನುಷ್ಯನು ಭೂಮಿಯನ್ನು ಗುದ್ದಲಿಯಿಂದ ಕಷ್ಟಪಟ್ಟು ಅಗೆಯುತ್ತಾ ಹೇಗೆ ನೀರನ್ನು ಹೊಂದು ತ್ತಾನೆಯೋ, ಅದರಂತೆಯೇ ಗುರುವಿನಲ್ಲಿರುವ ವಿದ್ಯೆಯನ್ನು ಗುರುವಿನ ಸೇವೆ ಮಾಡುವವನು ಪಡೆದು ಕೊಳ್ಳುವನು.**



# ಸನಾತನ ಧರ್ಮದಲ್ಲಿ ಜ್ಯೋತಿಷ್ಯ ಶಾಸ್ತ್ರದ ಮಹತ್ವ



## ಹೋರಾ ಸ್ಕಂದ (ಫಲಿತ ಭಾಗ)

ಈ ಭಾಗವನ್ನು ಫಲಿತ ಭಾಗವೆಂದು ಗುರುತಿಸಲಾಗಿದೆ. ಈ ಭಾಗದ ಮುಖ್ಯ ಉದ್ದೇಶವೆಂದರೆ ಜಾತಕದ ಭವಿಷ್ಯವನ್ನು ಹೇಳುವುದು. ಫಲಭಾಗದಲ್ಲಿ 12 ಭಾವಗಳಿವೆ. ಅವುಗಳನ್ನು ರಾಶಿಗಳು, 9ಗ್ರಹಗಳು, ಅವುಗಳ ಸ್ಥಾನ, ದೃಷ್ಟಿ, ಅಂಶ, ಸ್ಥಿತಿ, ಗ್ರಹಗಳು ಶುಭದಾಯಕವೇ ಅಥವಾ ಮಾರಕವೇ ಎಂದು ಗುರುತಿಸಿ ಫಲ ಹೇಳುವ ಒಂದು ಭಾಗವೇ ಹೋರಾಶಾಸ್ತ್ರ.

ಈ ಹೋರಾ ಎಂಬ ಪದವು 'ಅಹೋರಾತ್ರ'ದ ಮಧ್ಯ ಅಕ್ಷರವನ್ನು ಸೇರಿಸಿ ಹೋರಾ ಎಂದು ಮಾಡಿದೆ ಎಂದು ವರಾಹಮಿಹಿರನ ಅನಿಸಿಕೆ.

ಈ ಹೋರಾ ಶಾಸ್ತ್ರದಲ್ಲಿ ಲಗ್ನ, 12 ಭಾವಗಳು, ದಶಾ, ಅಂತರ್ದಶಾ ಮುಂತಾದವುಗಳು ಷೋಡಶವರ್ಗ ಕುಂಡಲಿಗಳಾದ ರಾಶಿ, ಹೋರಾ, ದ್ರೇಕ್ಕಾಣ ಮುಂತಾದ ವರ್ಗಗಳೂ ಅಷ್ಟಕವರ್ಗ ಪದ್ಧತಿ, ಷಡ್ಬಲ, ಬಾಲಾರಿಷ್ಟ, ಗ್ರಹ ಮೈತ್ರತ್ವ, ಆಯುರ್ದಾಯ ದ್ವಾದಶ ಭಾವ ಫಲಗಳು, ಯೋಗಗಳು, ಸದ್ಯೋಮರಣ ಮುಂತಾದವುಗಳು ಕಾಣಬಹುದು.

ಈ ಹೋರಾ ಶಾಸ್ತ್ರವನ್ನು 3 ಪದ್ಧತಿಗಳಾಗಿ ವಿಭಜಿಸಲಾಗಿದೆ.

1. ಪರಾಶರ ಪದ್ಧತಿ
2. ಜೈಮಿನಿ ಪದ್ಧತಿ
3. ಯವನ ಪದ್ಧತಿ

ಪರಾಶರನ ಪದ್ಧತಿಯು ಮುಖ್ಯವಾಗಿ ಲಗ್ನ, 12 ಭಾವಗಳು, ದಶಾ, ಅಂತರ್ದಶಾ ಮುಂತಾದವುಗಳು ವಿವರಿಸಲಾಗಿದೆ. ಬೃಹತ್ ಪರಾಶರ ಹೋರಶಾಸ್ತ್ರ ಎಂಬ ಗ್ರಂಥವು ಇದರ ಪರಮ ಪ್ರಮಾಣವು.

ಜೈಮಿನಿ ಪದ್ಧತಿಯು, ಜೈಮಿನಿ ಸೂತ್ರಗಳನ್ನು ಹೊಂದಿರುವಂತಹ ಗ್ರಂಥ,ಈ ಪದ್ಧತಿಯಲ್ಲಿ ರಾಶಿ ದಶ, ರಾಶಿ ದೃಷ್ಟಿ, ಆರೋಢ ಚಕ್ರ ಮುಂತಾದವುಗಳನ್ನು ಕಾಣಬಹುದು.

ಯವನ ಪದ್ಧತಿಯಲ್ಲಿ ಯವನ ದೇಶದ ಪದ್ಧತಿಗಳನ್ನು ಅನುಸರಿಸಿ ಫಲವನ್ನು ಹೇಳುವ ವಿಧಾನ. ಈ ವಿಧಾನದಲ್ಲಿ ಗ್ರಹಜ, ಭಾವಜ, ರಾಶಿಜ, ಗ್ರಹಭಾವಜ, ರಾಶಿಭಾವಜ, ಗ್ರಹ ಯೋಗಜಗಳ ಆಧಾರದ ಮೇಲೆ ಫಲವನ್ನು ಹೇಳುವ ಪದ್ಧತಿ ಹೊಂದಿರುತ್ತದೆ. ಮೀನರಾಜನು ತನ್ನ ವೃದ್ಧ ಯವನ ಜಾತಕ ಗ್ರಂಥದಲ್ಲಿ ಈ ಯವನ ಪದ್ಧತಿಯನ್ನು ತಿಳಿಸಿದ್ದಾನೆ.

ಈ ಹೋರಾ ಸ್ಕಂದದಲ್ಲಿ ತಜಕವನ್ನು ಕಾಣಬಹುದು. ಇದು ವರ್ಷ ಫಲವನ್ನು ಹೇಳುವ ವಿಧಾನ.

- ಡಾ॥ ಆರ್. ಶ್ರೀನಿಧಿ
99705 65978

**ಸಂಹಿತಾ ಸ್ಕಂದ :**

ಈ ಸಂಹಿತಾ ಭಾಗದಲ್ಲಿ ಜ್ಯೋತಿಷದ ಇನ್ನಿತರ ವಿಭಾಗಗಳಾದ ವಾಸುಶಾಸ್ತ್ರ,ಸಾಮುದ್ರಿಕಾಶಾಸ್ತ್ರ, ಮುಹೂರ್ತ, ಮೇಧಿನೀ ಜ್ಯೋತಿಷ್ಯ ಮುಂತಾದವುಗಳನ್ನು ಸೇರಿಸಿರುವ ಒಂದು ಭಾಗ.

ವಾಸ್ತುಶಾಸ್ತ್ರದಲ್ಲಿ ಗೃಹ, ಭವನ, ಆಲಯಗಳ ನಿರ್ಮಾಣದ ವಿವರಗಳನ್ನು ತಿಳಿಸುತ್ತದೆ. ಈ ವಾಸ್ತು ಶಾಸ್ತ್ರವೇ ಒಂದು ಬೃಹತ್ ಶಾಸ್ತ್ರವಾಗಿ ಹಲವಾರು ವಿಭಾಗಗಳನ್ನು ಹೊಂದಿರುತ್ತದೆ. ಅವುಗಳು ಗೃಹವಾಸ್ತು, ಶಿಲ್ಪ ವಾಸ್ತು, ಆಲಯ ವಾಸ್ತು, ಯಂತ್ರವಾಸ್ತು.

ಸಾಮುದ್ರಿಕಾ ಶಾಸ್ತ್ರದಲ್ಲಿ ಮನುಷ್ಯನ ಹಸ್ತದ ರೇಖೆಗಳನ್ನು , ಮುಖ, ಕೈ - ಕಾಲುಗಳು, ಕಣ್ಣುಗಳು, ಮುಂತಾದ ಅಂಗಗಳನ್ನು, ಮನುಷ್ಯನ ದೇಹದಲ್ಲಿ ಇರುವ ಮಚ್ಚೆಗಳನ್ನು ಗುರುತಿಸಿ ಹೇಳುವ ಶಾಸ್ತ್ರವನ್ನು ಸಾಮುದ್ರಿಕಾಶಾಸ್ತ್ರ ಎಂದು ವಿಭಜಿಸಲಾಗಿದೆ.

ಮುಹೂರ್ತ ಭಾಗವು ಮನುಷ್ಯನ ಜೀವನದಲ್ಲಿ ನಡೆಯುವ ಪ್ರಮುಖ ಶುಭ ಕಾರ್ಯಗಳಲ್ಲಿ ಅಂದರೆ, ನಾಮಕರಣ, ವಿದ್ಯಾರಂಭ, ಉಪನಯನ, ವಿವಾಹ, ಗೃಹಾ ರಂಭ, ಗೃಹಪ್ರವೇಶ, ಪ್ರಯಾಣಗಳಲ್ಲಿ ಶುಭ ಉಂಟು ಮಾಡುವ ಮುಹೂರ್ತಗಳನ್ನು ತಿಳಿಯುವ ಶಾಸ್ತ್ರ.

ಮೇಧಿನೀ ಜ್ಯೋತಿಷ್ಯದಲ್ಲಿ ಭೂ ಭಾಗಕ್ಕೆ ಸಂಬಂಧ ಪಟ್ಟಂತಹ ವಿಚಾರಗಳನ್ನು ತಿಳಿಸಿದೆ. ವ್ಯವಸಾಯ - ಕೃಷೀ, ಮಳೆ, ಗಾಳಿ, ಹವಾಮಾನ, ಮಳೆಯ ಪ್ರಮಾಣ, ಮೇಘಗಳು, ವೃಷ್ಟಿಪ್ರಮಾಣ, ಅತಿವೃಷ್ಟಿ, ಅನಾವೃಷ್ಟಿ, ಸುವೃಷ್ಟಿ, ಜಲಶೋಧ, ವ್ಯವಹಾರ, ಧನಸಂಪತ್ತು, ಲೋಹಗಳ ಪರೀಕ್ಷೆ, ಗುಣ, ಗಣಿಗಳು, ಗ್ರಹಗಳಿಂದ ಉಂಟಾಗಿರುವ ಫಲಗಳಿಗೆ ಶಾಂತಿ ಗಳು, ರತ್ನ ಪರೀಕ್ಷೆ, ರತ್ನ ಧಾರಣೆ, ವೃಕ್ಷಗಳು, ಆಯುರ್ವೇದ, ನಕ್ಷತ್ರಗಳ ವೃಕ್ಷಗಳು, ಮುಂತಾದವುಗಳು ಮೇಧಿನೀ ಜ್ಯೋತಿ ಷ್ಯದ ಭಾಗವಾಗಿದೆ.

**ಪ್ರಶ್ನಸ್ಕಂದ:**

ಯಾವುದೇ ಒಂದು ಜಾತಕವಿಲ್ಲದೆ, ಪ್ರೇಕ್ಷಕನ ಪ್ರಶ್ನೆಗಳಿಗೆ ಭವಿಷ್ಯವನ್ನು ಹೇಳುವ ಪದ್ಧತಿಯೇ ಪ್ರಶ್ನಶಾಸ್ತ್ರ. ಇಲ್ಲಿ ಕೇವಲ ಪ್ರಶ್ನೆ ಕೇಳುವ ವ್ಯಕ್ತಿಯನ್ನು ಗಮನಿಸಿ ಅವನ ಚಟು ವಟಿಕೆಗಳು, ಅವನ ನೋಟ, ಸ್ವರ, ನಾಡಿ, ದಿಕ್ಕು, ಕುಳಿತಿರುವ ಭಂಗಿ, ಚೇಷ್ಟೆ ಮುಂತಾದವುಗಳನ್ನು ಸೂಕ್ಷ್ಮವಾಗಿ ಗಮನಿಸಿ ಹೇಳುವ ಶಾಸ್ತ್ರವೇ ಪ್ರಶ್ನಶಾಸ್ತ್ರ.

ಈ ಪ್ರಶ್ನ ಶಾಸ್ತ್ರದಲ್ಲಿ ಹಲವಾರು ವಿಧಾನಗಳಿವೆ. ಅವುಗಳು.

1. ಅಕ್ಷರ ಪ್ರಶ್ನ
2. ಫಲ ಪುಷ್ಪಪ್ರಶ್ನ
3. ಸ್ವರ ಪ್ರಶ್ನ
4. ರಮಲಪ್ರಶ್ನ
5. ತಾಂಬೂಲ ಪ್ರಶ್ನ
6. ಚೇಷ್ಟಾ ಪ್ರಶ್ನ
7. ಕುಂಡಲಿ ಪ್ರಶ್ನ
8. ಕಾಲಪ್ರಶ್ನ
9. ಗವ್ವಪಶ್ನ
10. ಅಂಜನ ಪ್ರಶ್ನ
11. ಸಂಖ್ಯಾ ಪ್ರಶ್ನ
12. ವಾಕ್ಯ ಪ್ರಶ್ನ
13. ಕೇರಳಪಶ್ನ (ಅಷ್ಟಮಂಗಳ)
14. ಆರೂಢ ಪ್ರಶ್ನ
15. ಪಂಚಪಕ್ಷೀ ಪ್ರಶ್ನ

**ಶಕುನಸ್ಕಂಧ:**

ಶಕುನಗಳು ಜ್ಯೋತಿಷ್ಯದಲ್ಲಿ ಬಹು ಮುಖ್ಯ ಸ್ಥಾನವನ್ನು ಪಡೆದಿವೆ. ಈ ಶಕುನವನ್ನು ಪ್ರಾಚೀನ ವೈದಿಕ ಕಾಲದಿಂದಲೂ ಮಾನ್ಯತೆ ಪಡೆದಿದೆ. ಈ ಶಕುನಗಳನ್ನು ಶುಭದಾಯಕವೇ ಅಥವಾ ಅಶುಭವೇ ಎಂದು ಆರು ವಿಧವಾಗಿ ವಿಂಗಡಿಸಲಾಗಿದೆ. ಅವುಗಳು:

1. ಗ್ರಹಗಳು ಮತ್ತು ಉಪಗ್ರಹಗಳನ್ನು ಸಂಬಂಧಪಟ್ಟು ಹೇಳುವುದು.

2. ಪ್ರಾಣಿ ಪಕ್ಷಿಗಳನ್ನು ಸಂಬಂಧಿಸಿ ಹೇಳುವ ಕ್ರಮ.

3. ಸ್ವಪ್ನಗಳ ಆಧಾರದ ಮೇಲೆ ಹೇಳುವ ಕ್ರಮ.

4. ತಾತ್ಕಾಲಿಕ ಪ್ರಕೃತಿಯ ಹವಾಮಾನಗಳು ಅಂದರೆ ವಿರುದ್ಧ ದಿಕ್ಕಿನಲ್ಲಿ ವಾಯು ಸಂಚಾರ. ಕಪ್ಪು ಮೋಡಗಳು, ಕೆಂಪುಮಣ್ಣು, ಇವುಗಳನ್ನು ಆಧಾರ ಮಾಡಿ ಹೇಳುವ ಕ್ರಮ.

5. ಮನುಷ್ಯನ ಅಂಗಗಳ, ಕಣ್ಣು ಅದರುವ, ದೇಹ ನಡುಗುವ ಮುಂತಾದ ಫಲದಿಂದ ಹೇಳುವ ಕ್ರಮ.

6. ಮನುಷ್ಯರು, ಪ್ರಾಣಿ ಪಕ್ಷಿಗಳು ನಮ್ಮ ಮುಂದೆ ಗೋಚರವಾಗುವುದರಿಂದ ಹೇಳುವ ಫಲಗಳು ಇದು ಒಂದು ಕ್ರಮ.

ಈ ಶಕುನಗಳು ನಮ್ಮ ಭವಿಷ್ಯದಲ್ಲಿ, ವರ್ತಮಾನಗಳಲ್ಲಿ ಆಗುವ ಮುನ್ಸೂಚನೆ ಎಂದು ಅರಿತು ಇದನ್ನು ಜ್ಯೋತಿಷ್ಯ ಶಾಸ್ತ್ರದ ಐದನೇ ಸ್ಕಂದವಾಗಿ ಸೇರಿಸಲಾಗಿದೆ.



(ಮುಂದುವರಿಯುವುದು)



**ಧಾರಾವಾಹಿ- 6**

# ಆಳ್ವಾರುಗಳು ಕಂಡ ತಿರುವೇಂಗಡ

**ಹಿಂದಿನ ಸಂಚಿಕೆಯಿಂದ**

**- ಎಂ. ಆರ್. ನರಸಿಂಹನ್**

"ತಿರುವೆಳುಕೂತ್ತಿರುಕ್ಕೈ" ಎನ್ನುವ ತಿರುಮಂಗೈ ಆಳ್ವಾರ್ ಅವರ ಪ್ರಬಂಧಕ್ಕೆ ಬರೆದಿರುವ ತನಿಯನ್ ರಾಮಾನುಜರದ್ದೆಂದು ಶ್ರೀ ಕೆ.ಕೆ.ಎ.ವೆಂಕಟಾಚಾರಿ ಅವರು ತಿಳಿಸಿದ್ದಾರೆ. ಆದ್ದರಿಂದ ಆಳ್ವಾರ್ ಪರಂಪರೆಯಲ್ಲಿ ಕಡೆಯವರಾದ ತಿರುಮಂಗೈ ಆಳ್ವಾರ್ ವಿಚಾರವೂ ರಾಮಾನುಜರಿಗೆ ತಿಳಿದಿರುವುದು ಸ್ಪಷ್ಟವಾಗುತ್ತದೆ. ಈ ಕಡೆಯ ಆಳ್ವಾರ್ ವಿಚಾರವೇ ರಾಮಾನುಜರಿಗೆ ತಿಳಿದಿರುವಾಗ ಮಿಕ್ಕ ಆಳ್ವಾರ್‌ಗಳ ವಿಚಾರ ತಿಳಿದಿಲ್ಲವೆಂದರೆ ಅಷ್ಟು ಸಮಂಜಸವೆನಿಸದು ಎಂದು ನನ್ನ ಅನಿಸಿಕೆ. ಇದನ್ನು ನಿರ್ಧಾರವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ ಊಹನೆಗೆ ನಿಲುಕುವ ವಿಷಯವಾಗುತ್ತದೆ.

ಈ ಎಲ್ಲವನ್ನೂ ಮೀರಿಸುವಂತಹ ಹಿರಿಯ ಪ್ರಮಾಣ ಮತ್ತೊಂದು ನಮಗೆ ದೊರೆಯುತ್ತದೆ.'ರಾಮಾನುಜನೂತ್ತಂದಾದಿ' ಎನ್ನುವ ಸ್ತೋತ್ರರತ್ನ ತಮಿಳು ಪ್ರಬಂಧ ಸಾಹಿತ್ಯದಲ್ಲಿ ಅತಿ ಪವಿತ್ರವಾದದ್ದೆಂದು ಪರಿಗಣಿತವಾಗಿದೆ. ಇದನ್ನು ಬರೆದವರು ತಿರುವರಂಗತ್ತಮುದನಾರ್ ಎನ್ನುವರು, ಇದರಲ್ಲಿ ನೂರೆಂಟು ಪಾಶುರಗಳು ಇದ್ದು ಪ್ರತಿ ಪಾಶುರಗಳಲ್ಲೂ ಆಚಾರ್ಯರ ಹೆಸರು ನಮೂದಿತವಾಗಿದ್ದು ಇದನ್ನು ಪಾರಾಯಣ ಮಾಡುವವರು ನೂರೆಂಟು ಸಲ ಆಚಾರ್ಯರ ಹೆಸರನ್ನು ಸ್ಮರಿಸಿದಂತಾಗಿ ನೂರೆಂಟು ಗಾಯಿತ್ರಿ ಜಪ ಮಾಡಿದಷ್ಟು ಪವಿತ್ರವಾದ್ದರಿಂದ ಈ ಪ್ರಬಂಧವನ್ನು ''ಪ್ರಪನ್ನ ಗಾಯಿತ್ರಿ' ಎಂದೂ ಆದರಿಸುತ್ತಾರೆ.ಶ್ರೀಅಮುದನಾರ್ ರಾಮಾನುಜರ ಸಮಕಾಲೀನರು, ಶಿಷ್ಯರು, ಇವರ ಈ ಪ್ರಬಂಧದ ೮ ನೇ ಪಾಶುರದಿಂದ ಹಿಡಿದು ೨೦ ನೇ ಪಾಶುರದವರೆಗೂ ಹನ್ನೆರಡು ಆಳ್ವಾರುಗಳೂ, ಅವರ ಪ್ರಬಂಧಗಳೂ ಅವು ರಾಮಾನುಜರಿಗೆ ಪರಿಚಿತವಾಗಿದ್ದ ವೃತ್ತವೂ, ಅವುಗಳನ್ನು ಅರಿತಿದ್ದ ರಾಮಾನುಜರ ಅಡಿದಾವರೆಗಳನ್ನು ಆಶ್ರಯಿಸಿದರೆ ಆಳ್ವಾರ್‌ಗಳ ಅನುಗ್ರಹವೂ ಸಿದ್ಧಿಸುವುದೆಂಬ ಭಾವವನ್ನು ಹೊರಗೆಡಹಿದ್ದಾರೆ.

ಈ ಪ್ರಬಂಧದಿಂದ ಆಚಾರ್ಯ ರಾಮಾನುಜರಿಗೆ ಆಳ್ವಾರುಗಳ ಮತ್ತು ಅವರ ಪ್ರಬಂಧಗಳ ಪರಿಪೂರ್ಣ ಜ್ಞಾನ ಪರಿಚಯಗಳ ವಿವರಣೆ ದೊರುಕುತ್ತದೆ. 'ಆಳ್ವಾರುಗಳ ನುಡಿಮುತ್ತುಗಳು' ಎನ್ನುವ ಶ್ರೀ ಎಸ್.ಕೆ.ರಾಮಚಂದ್ರರಾಯರ ಪುಸ್ತಕದ ಪ್ರಕಾರ 'ರಾಮಾನುಜರ ತರುವಾಯ ತಿರುವರಂಗತ್ತ ಮುದನಾರ್ ಎಂಬುವವರು ರಚಿಸಿದ್ದು ರಾಮಾನುಜ ನೂತ್ತಂದಾದಿ.'

| ತನಿಯನ್‌ನ ಪ್ರಾರಂಭ ವಾಕ್ಯ | ಯಾವ ಪ್ರಬಂಧವನ್ನು ಕುರಿತದ್ದು | ಪ್ರಬಂಧದ ಕರ್ತೃ | ತನಿಯನ್ ರಚಿಸಿದ ಆಚಾರ್ಯರು | ತನಿಯನ್ ಭಾಷೆ |
|---|---|---|---|---|
| ೧. 'ಗುರುಮುಖಿ...' | ತಿರುಪ್ಪಲ್ಲಾಂಡ್ | ಪೆರಿಯಾಳ್ವಾರ್ | ನಾಥಮುನಿ | ಸಂಸ್ಕೃತ |
| ೨. 'ಅವಿದಿತವಿಷಯಾಂ' | ಕಣ್ಣಿನುಣ್ ಶಿರುತ್ತಾಂಬು | ಮಧುರ ಕವಿ | ನಾಥಮುನಿ | ಸಂಸ್ಕೃತ |
| ೩. 'ಅನ್ನವಯಲ್' ಮತ್ತು 'ಶೂಡಿಕ್ಕೊಡುತ್ತ' | ತಿರುಪ್ಪಾವೈ | ಆಂಡಾಳ್ | ಪುಂಡರೀಕಾಕ್ಷ (ನಾಥಮುನಿಗಳ ಶಿಷ್ಯರು) | ತಮಿಳು |
| ೪. 'ತರುಚ್ಚನ್ದಪ್ಪೊರೆಲ್'<br>'ಉಲಗಮರೆಶ್ಶೈ' | ತಿರುಚ್ಚನ್ದ ವಿರುತ್ತಂ | ತಿರುಮಳಿಶೈ ಆಳ್ವಾರ್ | ತಿರುಕ್ಕಚ್ಚಿನಂಬಿ (ರಾಮಾನುಜರ ಗುರುಗಳು)<br>ಪೆರಿಯನಂಬಿ (ರಾಮಾನುಜರ ಗುರುಗಳು) | ತಮಿಳು |
| ೫. 'ಆಪಾದಚೂಡ ಮನುಭೂಯ'<br>'ಕಾಟ್ಟವೇ ಕಂಡಪಾದಂ' | ಅಮಲನಾದಪಿರಾನ್<br>,, | ತಿರುಪಾಣೆ ಆಳ್ವಾರ್<br>,, | ತಿರುಮಲೆನಂಬಿ (ರಾಮಾನುಜರ ಸೋದರಮಾನ) | ಸಂಸ್ಕೃತ<br>ತಮಿಳು |
| ೬. 'ಕಲಯಾಮಿ ಕಲಿಧ್ವಂಸಂ'<br>'ವಾ ಪರಕಾಲನ್<br>'ಎಂಗಳ್ ಗತಿಯೇ'<br>'ನೆಂಜಿಕ್ಕಿರುಳ್ ಕಡಿದೀಪಂ' | ಪೆರಿಯ ತಿರುಮೊಳಿ<br>,,<br>,,<br>,, | ತಿರುಮಂಗೈ ಆಳ್ವಾರ್<br>,,<br>,,<br>,, | ತಿರುಕೋಟ್ಟಿಯಾರ್ ನಂಬಿ (ರಾಮಾನುಜರ ಗುರು)<br>ನಾಥಮುನಿ<br>ಎಂಬಾರ್ (ರಾಮಾನುಜರ ಶಿಷ್ಯರು)<br>ಕೂರತ್ತಾಳ್ವಾನ್ (ರಾಮಾನುಜರ ಶಿಷ್ಯರು) | ಸಂಸ್ಕೃತ<br>ತಮಿಳು<br>,,<br>,, |

ಆದರೆ ಇದನ್ನು ಅಮುದನಾರ್ ಅವರು ರಚಿಸಿ ರಾಮಾನುಜರಿಗೆ ಸಮರ್ಪಿಸಿದರೆಂದು ಸಂಪ್ರದಾಯ ಗ್ರಂಥಗಳಲ್ಲಿ ಉಕ್ತವಾಗಿದೆ. ಹಾಗೆ ಒಂದು ವೇಳೆ ರಾಮಾನುಜರ ನಂತರ ರಚಿಸಿದ್ದರೂ ಕೂಡ ರಾಮಾನುಜರಿಗೆ ಆಳ್ವಾರುಗಳ ಮತ್ತು ಅವರುಗಳ ಪ್ರಬಂಧಗಳ ಬಗೆಗೆ ಇದ್ದು ಜ್ಞಾನ ಸಂಪತ್ತನ್ನು ಈ ಪ್ರಬಂಧ ತಿಳಿಸುತ್ತದೆ.

ರಾಮಾನುಜರು ತಮ್ಮ ೭೪ ಪೀಠಾಧಿಪತಿಗಳ ಪೈಕಿ ನಾಲ್ವರಿಗೆ ಶ್ರೀ ಭಾಷ್ಯವನ್ನು ವೈದಿಕ ಸಂಪ್ರದಾಯದ ನೆಲೆಯಲ್ಲಿ ಬೋಧಿಸತಕ್ಕದ್ದೆಂದೂ ಉಳಿದವರಿಗೆ ಆಳ್ವಾರ್ ಪ್ರಬಂಧಗಳನ್ನೂ ಅಭ್ಯಾಸ ಮಾಡಿ ಆದರಿಂದ ವಿಶಿಷ್ಟಾದ್ವೈತ ಸಿದ್ಧಾಂತವನ್ನು ನಾಡಿನಲ್ಲೆಲ್ಲಾ ಹರಡಬೇಕೆಂದು ಕಟ್ಟು ಮಾಡಿದರು ಎಂಬುದಾಗಿ ಶ್ರೀರಾಯರು ವಿವರಿಸುತ್ತಾರೆ. ರಾಮಾ ನುಜರು ತಮಗೇ ತಿಳಿಯದ ಆಳ್ವಾರುಗಳ ಮತ್ತು ಆಳ್ವಾರ್ ಪ್ರಬಂಧಗಳ ವಿಚಾರಗಳನ್ನು ೭೦ ಪೀಠಾಧಿಪತಿಗಳಿಗೆ ಪ್ರಚಾರ ಮಾಡಲು ಯಾವ ರೀತಿ ನಿಯೋಜಿಸಿದರು. ಆಳ್ವಾರುಗಳ ಪ್ರಬಂಧಗಳ ವಿಷಯವನ್ನೇ ಅರಿಯದ ರಾಮಾನುಜರು ಅವುಗಳಲ್ಲಿ ಮತತತ್ವಗಳು ಅಡಗಿಕೊಂಡಿವೆ ಎಂಬುವುದನ್ನು ಹೇಗೆ ಅರಿತುಕೊಂಡು ಮಠಾಧೀಶರಿಗೆ ಮತ ಪ್ರಚಾರಕ್ಕೆ ಆಳ್ವಾರ್ ಪ್ರಬಂಧ ಗಳು ಪೂರಕವಾಗಿದೆ ಎಂದು ಶಿಫಾರಸ್ಸು ಮಾಡಿದರು, ರಾಮಚಂದ್ರ ರಾಯರೇ ಹೇಳಬೇಕು.

ಈ ಸಂದರ್ಭದಲ್ಲಿ ತನಿಯನ್ ಬಗ್ಗೆ ಕೆಲವು ಮಾತುಗಳನ್ನು ಆಡಿದರೆ ಅಪ್ರಸಕ್ತವಾಗಲಾರದು. ಈ ತನಿಯಾನ್‌ಗಳು ಪ್ರಶಂಸಾ ಪದ್ಯಗಳು, ಬಿಡಿ ಮುಕ್ತಕಗಳು. ಒಂದು ಪ್ರಬಂಧವನ್ನು ಕುರಿತ ಪ್ರಶಂಸಾ ಪದ್ಯ ಅಥವಾ ತನಿಯನ್‌ನಲ್ಲಿ ಅದರ ಕರ್ತೃವಾದ ಆಯಾ ಆಳ್ವಾರ್ ಮತ್ತು ಆ ಪ್ರಸಕ್ತ ಪ್ರಬಂಧದ ಲಘು ಪರಿಚಯ ಮಹತ್ವ ಇವುಗಳ ವಿಚಾರವಿರುತ್ತದೆ. ಈ ಪದ್ಯಗಳನ್ನು ರಚಿಸಿದವರು ಆಚಾರ್ಯರುಗಳು, ಕೆಲವರು ರಾಮಾನುಜರ ಹಿಂದಿನವರು ಕೆಲವರು ರಾಮಾನುಜರ ಸಮಕಾಲೀನರು ಇನ್ನು ಕೆಲವರು ರಾಮಾನುಜರಿಗಿಂತ ಈಚಿನವರು. ಈ ಮೇಲ್ಕಂಡ ಪಟ್ಟಿಯಿಂದ ತನಿಯಾನ್ ಬಗ್ಗೆ ಕೆಲವಂಶವನ್ನು ತಿಳಿಯೋಣ.



(ಮುಂದುವರಿಯುತ್ತದೆ.)

(ಹಿಂದಿನ ಸಂಚಿಕೆಯಿಂದ)

"ವನಮಧ್ಯೇ ತರೋರ್ಮೂಲೇ ಸ್ವಾಮಿಪುಷ್ಕರಿಣಿ ತಟೇ,
ತಿಷ್ಠಂತಂ ಪುಂಡರೀಕಾಕ್ಷಂ ಶ್ರೀ ಭೂಮಿ ಸಹಿತಂ ಹರಿಂ
ಚಿಂಚಾವೃಕ್ಷಸ್ಯ ಮೂಲೇ ತು ಪ್ರಾದುರಾಸಿ ಜನಾರ್ದನಃ
ತಿಂತ್ರಿಣಿ ವೃಕ್ಷಮೂಲಸ್ಥಂ ವಲ್ಮೀಕಸ್ಥಂ ಪರಂ ಹರಿಂ "

(ಅರಣ್ಯ ಮಧ್ಯದಲ್ಲಿರುವ ಸ್ವಾಮಿಪುಷ್ಕರಿಣಿ ತೀರದಲ್ಲಿ ಶ್ರೀದೇವಿ ಭೂದೇವಿ ಸಹಿತನಾದ ಹರಿಯು ವೃಕ್ಷ ಮೂಲದಲ್ಲಿರುವ ಪುಂಡರೀಕಾಕ್ಷನಾಗಿ ಹುಣಸೇಮರದ ಮೂಲ ಭಾಗದಲ್ಲಿ ಜನಾರ್ದನನಾಗಿ ಆವಿರ್ಭವಿಸಿದ್ದಾನೆ. ಹುಣಸೇಮರದ ಬೇರು ಭಾಗದಲ್ಲಿಯಾದರೂ ಮೇಲ್ಭಾಗದಲ್ಲಾದರೂ ಇದ್ದವನು ಪರಮಾತ್ಮನಾದ ಶ್ರೀಹರಿಯೇ.)

ಎಂದು ಭೂಗೋಳವರಾಹದಲ್ಲಿರುವ ವಾಮನ ಪುರಾಣದಲ್ಲಿರುವಂತೆ ಒಂದು ಕಲ್ಪ ವಿಶೇಷನಾದ ಶ್ರೀವೇಂಕಟೇಶ್ವರನು

"ಉನ್ನಿದ್ರ ತಿಂತ್ರಿಣೀ ಶತ್ವ ಮೇಷ್ಯತ್ಯಥ ಮಹೋರಗಃ"

(ನಾ ಪವಡಿಸುವ ನಾಗರಾಜ (ಆದಿಶೇಷ) ನೇ ಹುಣಸೇ ಮರವಾಗಿ ಅವತರಿಸಲಿ)

ಅಂದಂತೆ, ಪುರಾಣ ಪ್ರಸಿದ್ಧಿಯನ್ನು ಪಡೆದ ಶ್ರೀ ಆದಿಶೇಷನ ಅವತಾರಾಂಶವಾದ ಪವಿತ್ರವಾದ ಹುಣಸೇ ಮರವು ಕೆಳಗೆ ಬರಲು ಶೇಷನು ಅನುಗ್ರಹಿಸಿದನು.

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ|| ಎನ್. ನರಸಿಂಹಾಚಾರ್ಯ
- ಅನುವಾದ :ಶ್ರೀಮತಿ

ಹಲವು ದಿನಗಳು ಕಳೆದ ನಂತರ, ರಂಗದಾಸನೆಂಬ ಭಾಗವತೋತ್ತಮನು ದಾರಿ ಸಾಗುತ್ತಾ ದಕ್ಷಿಣ ದೇಶದಿಂದ ತಿರುಮಲೆಗೆ ಬಂದು ನಿತ್ಯ ವಾಸ ಮಾಡುವ ಹಿನ್ನೆಲೆಯಲ್ಲಿ ದಿನವೂ ಭಗವಂತನ ದಿವ್ಯ ದೇಹದ ಮೇಲಿನ ಶ್ರದ್ಧಾತಿಶಯದಿಂದ ಒಂದು ದಿವ್ಯಾಲಯವನ್ನು ನಿರ್ಮಿಸಲನುವಾದನು. ಸ್ವಾಮಿಗೆ ಹಿಂಭಾಗದಲ್ಲಿ ಹುಣಸೇಮರ "ನಿರ್ನಿದ್ರಂತಿಂತ್ರಿಣಿ" (ಪವಡಿಸದೇ ಇರುವ ಹುಣಸೇಮರ)ಯಾಗಿ ಒಂದು ರೆಂಬೆ ಚಿಗುರಿ, ಒಂದು ಕೊಂಬೆ ಕಾಯ್ಬಿಟ್ಟು, ಒಂದು ಕೊಂಬೆಯಲ್ಲಿ ಹೂವರಳಿ, ಇನ್ನೊಂದು ಕೊಂಬೆಯಲ್ಲಿ ಎಲೆಗಳು ಗೊಂಚಲಾಗಿ ಹರಡಿ, ಮತ್ತೊಂದು ಹಣ್ಣುಗಳಿಂದ ತೂಗುತ್ತಾ ಒಂದು ಬಗೆಯ ವಿಚಿತ್ರಾ ಕಾರದಿಂದ ತನ್ನ ಶಾಖಾ ದೇಹವನ್ನು ವ್ಯಾಪಿಸುತ್ತಾ ಹೆಡೆ ಬಿಚ್ಚಿದ ಹಾವಿನಂತೆ ಬೆಳೆಯುತ್ತಿರಲು ಹೆದರಿ ಏನು ಮಾಡಲು ತೋಚದೇ ಆಲೋಚಿಸುತ್ತಿದ್ದನು.

ಧಾರಾವಾಹಿ -6



ನಡುರಾತ್ರಿಯಂದು ಆ ತಿಂತ್ರಿಣಿ ವೃಕ್ಷವು ಆ ಪ್ರದೇಶವನ್ನು ಬಿಟ್ಟು ಸ್ವಾಮಿಗೆ ಈಶಾನ್ಯ ಭಾಗದಲ್ಲಿ ಒಂದು ಗಾವು ದೂರದಲ್ಲಿದ್ದ ಹುತ್ತವನ್ನು ಪ್ರವೇಶಿಸಿತು. ನಂತರ ಇದನ್ನು ಕಂಡ ರಂಗದಾಸನು ಆಶ್ಚರ್ಯಚಕಿತನಾಗಿ ಈ ವೃಕ್ಷವು ಆದಿಶೇಷನ ಅಂಶವನ್ನು ಹೊಂದಿರುವುದೆಂದು ಅರಿತು

" ಆಕಾಶಸ್ಥ ತದಾ ದೃಷ್ಟ್ವಾ ಪೀತ ನೀಲಾಕೃತಿಂ ಶುಭಂ
ಪಾರ್ಶ್ವಸ್ಯ ಶಂಖಚಕ್ರಾಭ್ಯಾಂ ಗದಾಸಿಭ್ಯಾಂ ವಿರಾಜಿತಂ
ದೇವಸ್ಯ ಪರಿತೋ ಭೂಮೇ ಶಿಲಾಕುಡ್ಯಂ ತದಾಕರೋತಿ
ವಾಸಸ್ಥಾನಂ ಚಕಾರ್ಯಾ ಶುದಾರುಖ ಸ್ಸುಮನೋಹರ್ಯೈ"

ಪಾರ್ಶ್ವಮೂಲದಲ್ಲಿ ಹಿಡಿದಿರುವ ಶಂಖ, ಚಕ್ರ, ಗದಾ ಖಡ್ಗಗಳಿಂದ ವಿರಾಜಿತನಾದವನು,ಪೀತನೀಲಾಕಾರನು, ಶುಭಕರನು, ಆಕಾಶಸ್ಥನಾದ (ಆವರಣ ಗಡಿ ರಹಿತನಾದ) ಭಗವಂತನನ್ನು ನೋಡಿ ಸ್ವಾಮಿಗೆ ಎಲ್ಲಾ ಕಡೆಗಳಲ್ಲಿ ನೆಲದ ಮೇಲಿದ್ದ ಶಿಲೆಗಳಿಂದ ಗೋಡೆಯನ್ನು ಕಟ್ಟಿದ್ದನು.

ಅಲ್ಲದೇ ಮನೋಹರವಾದ ಜಂತುಗಳಿಂದ (ಮೇಲ್ಛಾವಣಿ ನಿರ್ಮಿಸಿ) ಚಿರಕಾಲಕ್ಕೂ ನಿವಾಸವನ್ನು ನಿರ್ಮಾಣ ಮಾಡಿದನು.

ಎಲ್ಲಾ ತರಹದಲ್ಲೂ ಭೂವರಾಹ ಸ್ವಾಮಿಯ ಆವಾಸ ಸ್ಥಾನವಿರುವಂತೆ ಒಂದು ದೇವಾಲಯವನ್ನು ನಿರ್ಮಿಸಿರುವನೆಂದು ಪುರಾಣ ಪ್ರಸಿದ್ಧವಾಗಲು ಆ ಕಾಲಕ್ಕೆ ಶ್ರೀನಿವಾಸ ಭಗವಂತನು ಆ ಪವಿತ್ರವಾದ ಹುಣಸೇಮರದ ಕೆಳಗೆ ಆ ವಾಸನಾಗಿ ಬ್ರಹ್ಮಾದಿ ದೇವತೆಗಳಿಗೆ ದರ್ಶನ ಭಾಗ್ಯವನ್ನು ಪ್ರಸಾದಿಸುತ್ತಿರುವಂತೆ, ಸ್ಥಳೀಯ ಐತಿಹ್ಯದಲ್ಲಿರುವ ಶಿಷ್ಟ ಗೋಷ್ಠಿಯಲ್ಲಿರುವ ಸರ್ವಾಂಗಿಕೃತವಾದ ಪ್ರಚಾರದಂತೆ ಈಗ ಎಲ್ಲರಿಗೂ ಬರೀ ವೃಕ್ಷದ ವಿಸ್ತಾರವಾದ ನೆರಳನ್ನು ಮಾತ್ರ ತೋರಿಸುತ್ತಾ ಸೂರ್ಯ ಚಲನೆಯನ್ನು ಸರಿಸಿ, ಪೂರ್ವಕ್ಕೆ ತಲೆಯಿಟ್ಟಿರುವಂತೆ ಹಬ್ಬಿರುವುದರಿಂದಲೇ ಈ ವೃಕ್ಷವನ್ನು ಆದಿಶೇಷನ ಅಂಶಾವತಾರವೆಂದು ನಿಶ್ಚಯವಾಗಿ ಹೇಳಲಾಯಿತು.

ಅಲರ್ಮೇಲ್ ಮಂಗಾದೇವಿ ಸ್ವಯಂ ಆಯಾ ಸ್ಥಾನದ ಹುಣಸೇ ಮರದ ನೈರುತ್ಯ ಭಾಗದಲ್ಲಿ ಸ್ವಾಮಿಗೆ ಬಲಗಡೆಗೆ ವ್ಯಾಪಿಸಿ ನಿಂತಿರುವ ಒಂದು ಚಂಪಕ (ಸಂಪಿಗೆ ) ಮರದ ಕೆಳಗೆ ವಾಸಿಸುತ್ತಾ ಬ್ರಹ್ಮಾದಿ ದೇವತೆಗಳಿಗೆ ದರ್ಶನ ಭಾಗ್ಯವನ್ನು ಗ್ರಹಿಸಿರುವನೆಂಬ ಐತಿಹ್ಯವೊಂದು ಪ್ರಚಾರದಲ್ಲಿರುವುದರಿಂದ ಆ ವಿಷಯವೂ ಸಹ ಸರ್ವಕಾಲದಗಳಲ್ಲಿಯೂ ಪುಷ್ಟಿ ಪಡೆದು ಪಲ್ಲವ ಶೋಭಿತವಾಗಿರುವುದರಿಂದ ಹೀಗೆ ಮತ್ತಿತರ ವೃಕ್ಷಗಳಲ್ಲಿ ವಿಲಕ್ಷಣವಾದ ಈ ಎರಡು ಗಿಡಗಳನ್ನು (ಚಿಂಚಾಚಂಪಕಗಳನ್ನು)ರಂಗದಾಸನು ನಂದನವನ ಕೈಂಕರ್ಯಗಳನ್ನು (ಉದ್ಯಾನವನದ ಸಂರಕ್ಷಣೆ) ಮಾಡುತ್ತಿರುವಾಗ

"ದೇವಾಜ್ಞಯಾ ವರ್ಣಯಿತ್ತಾ ತಾವು ಭೌ ದೇವಸೇವಿತಾ
ತಿಂತ್ರಿಣಿ ಚಂಪಕಂ ಚೋಭೌ ಪಾಲಯೈತ್ತಾ ನಗೋತ್ತಮೌ"

(ದೇವಜ್ಞರು ನುಡಿಯುವಂತೆ ದೇವತೆಗಳಿಂದ ಆರಾಧಿಸಲ್ಪಡುವಂತಹ ಹುಣಿಸೇಮರ, ಸಂಪಿಗೆ ಮರ - ಈ ಎರಡನ್ನು ಬೇಧಗೊಳ್ಳದೇ ಕಾಪಾಡುತ್ತಿರುವ ಎಂದು -

" ಮಮಚ್ಛಾಸ್ಥಾನಿಕಾಂ ಚಿಂಚಾಂ, ಲಕ್ಷ್ಯಾಸ್ಥಾನಂ ಚ ಚಂಪಕಮ್"

(ನನ್ನ ಆವಾಸಸ್ಥಾನ ಹುಣಸೇಮರ, ಲಕ್ಷ್ಮಿಯ ವಾಸಸ್ಥಾನ ಸಂಪಿಗೆ ಮರ)

ಎಂದು ಭೂಗೋಳ ವರಾಹವೂ, ಬ್ರಾಹ್ಮಣ ಪುರಾಣವು ನುಡಿಯುವಂತೆ ನಂತರ ಶ್ರೀವೆಂಕಟಾಚಲಪತಿಯು ಇಬ್ಬರಿಗೂ ಆಸ್ಥಾನ ಸ್ಥಿತಗೊಂಡಿರುವುದರಿಂದ ಈ ಎರಡಕ್ಕೂ ಯಾವ ಕಲಿ ದೋಷಯುಂಟಾಗದೆಂದು ಆಜ್ಞಾಪಿಸಿದ ಪ್ರಯುಕ್ತ.

"ಆಸ್ಥಾನ ಚಿಂಚಾಂ ದೇವಸ್ಯ ರಮಯಾ ಚಂಪಕಂ ತರುಂ"

(ಸ್ವಾಮಿಯ ಸಾನ್ನಿಧ್ಯವಿರುವುದು ಹುಣಸೇಮರದಲ್ಲಿ ಲಕ್ಷ್ಮೀ ಸಾನ್ನಿಧ್ಯವಿರುವುದು ಚಂಪಕ ತರುವಿನಲ್ಲಿ)

ಎಂದು ಸಾರುವ ಭೂಗೋಳವರಾಹದಂತೆ ಪ್ರಖ್ಯಾತನಾಗಿರುವ ಈ ಎರಡು ಸಸ್ಯಗಳಿಗೆ ನಿತ್ಯಾರಾಧನೆಯನ್ನು ಜರುಗಿಸಲಾಗುವುದು.

ಅನಾದಿಕಾಲದಲ್ಲಿ ವೀರನಾರಸಿಂಹ ದೇವನನ್ನು ದರ್ಶನ ಗೈಯಲು ಒಬ್ಬ ಗಜಪತಿ ತೀಥಯಾತ್ರೆಯೋಸುಗ ಸೇತು ದರ್ಶನಕ್ಕಾಗಿ ಹೊರಟು ದಕ್ಷಿಣ ದೇಶಕ್ಕೆ ಪ್ರಯಾಣಗೈದು, ಮಧ್ಯ ಮಾರ್ಗದಲ್ಲಿ ಶ್ರೀವೆಂಕಟಾಚಲ ಮಹಿಮೆಯನ್ನು ಕೇಳ್ಪಟ್ಟು ಬೆಟ್ಟದ ಮೇಲಕ್ಕೇರಿ ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನವನ್ನು ಮಾಡಿ ಜ್ಞಾನ ವರಾಹನನ್ನು,ವೇಂಕಟಾದ್ರಿಯಲ್ಲಿದ್ದ ನೃಸಿಂಹನನ್ನು ಸೇವಿಸಿ ನಂತರ ಸೇವಾಕ್ರಮಾನುಸಾರ ಶ್ರೀವೆಂಕಟೇಶ್ವರನನ್ನು ಕೂಡ ಸೇವಿಸಿ,ಕ್ಷೇತ್ರೋಪಾಸನೆಯೇ ಮೊದಲಾದ ನಿಯಮಗಳನ್ನು ಪಾಲಿಸಿ "ಕಲೌ ವೇಂಕಟನಾಯಃ "(ಕಲಿಯುಗದಲ್ಲಿ ವೇಂಕಟೇಶನೇ ಪ್ರಾಧಾನದೇವತೆ) ಎಂಬುದನ್ನು ಕೇಳಲ್ಪಟ್ಟು ಸ್ವಾಮಿಯ ಚರಣಾರವಿಂದಗಳಿಗೆ ಭಕ್ತಿ ಪರವಶನಾಗಿ ಸ್ವಾಮಿ ಸನ್ನಿಧಿಯಲ್ಲಿ ಯಾವುದಾದರೊಂದು ಸೇವೆಯನ್ನು ಸಲ್ಲಿಸಬೇಕೆಂದು ಸಂಕಲ್ಪಿಸಿ ವಿದ್ವಾಂಸರಲ್ಲಿ ಪ್ರಶ್ನಿಸಿದ್ದಾನೆ.

**(ಮುಂದುವರಿಯುತ್ತದೆ)**

ನೀತಿ ಕಥೆ

# ಅಭಿಮಾನ

– ಡಾ|| ಶ್ರದ್ಧಾನಂದ ಸ್ವಾಮಿ



ಒಂದು ಹುಲುಸಾಗಿ ಬೆಳೆದ ಮರ. ಮರದ ತುಂಬೆಲ್ಲ ಹಚ್ಚ ಹಸಿರಾದ ಎಲೆಗಳು, ಮಧ್ಯದಲ್ಲಿ ಒಂದು ಸುಂದರ ಪುಷ್ಪ, ಸಮೀಪದ ಟೊಂಗೆಯಲ್ಲಿ ಒಂದು ಮಾಗಿದ ಹಣ್ಣು.

ಹಣ್ಣು ತನಗೆ ತಾನೇ ಹೇಳಿಕೊಂಡಿತು. "ನಾನೆಷ್ಟು ರುಚಿ? ನನ್ನ ಬಣ್ಣವೇನು? ನನ್ನ ರುಚಿ ಎಂಥದು?

ಬಹುಶಃ ನನ್ನಷ್ಟು ರಸಪೂರ್ಣ ವಸ್ತು ಜಗತ್ತಿನಲ್ಲಿ ಇನ್ನೊಂದಿರಲಿಕ್ಕಿಲ್ಲ! " ಹೀಗೆಂದು ಹಣ್ಣು ತನ್ನ ಬೆನ್ನು ತಾನೇ ತಟ್ಟಿ ಕೊಂಡಿತು.

ಹೂವು ಹೇಳಿತು. " ನನ್ನೀ ರೂಪ, ಸುವಾಸನೆ, ಸುಗಂಧ ಮಕರಂದ ಈ ಜಗದಲ್ಲಿ ಇನ್ನಾರಿಗಿದೆ? ಅಂತೆಯೇ ಮಾನವರು ಮೊದಲು ಮಾಡಿ ದೇವಾನು ದೇವತೆಗಳೆಲ್ಲ ನನ್ನನ್ನೇ ಬಯಸುವರು"

ಎಲೆ ಹೇಳಿತು " ಏನು ನನ್ನ ಹಸಿರುವರ್ಣ! ಮನೆ - ಮನೆಗೆ ತೋರಣ. ನಯನ ಮನೋಹರ ನನ್ನಂಥ ಹಸಿರು ಉಡಿಗೆ ಈ ಜಗದ ತೊಡಿಗೆ ಇನ್ನೆಲ್ಲಿ?"

ಹೀಗೆ ಎಲೆ, ಹೂ, ಹಣ್ಣುಗಳು ತಮ್ಮ ತಮ್ಮ ಬಣ್ಣನೆಯಲ್ಲಿ ಮಗ್ನವಾಗಿದ್ದವು. ವಿಶಾಲ ಜಗದ ಕಡೆಗೆ ಕಣ್ಣೆತ್ತಿ ನೋಡದಾಗಿದ್ದವು! ಆ ಮರದ ಕೆಳಗೆ ಓರ್ವ ಸಂತ ನಾಡ-ನೆಲೆಗಾರ ಕುಳಿತಿದ್ದ. ಅಲ್ಲಿ ಆ ಮರದ ಹಿರಿಯ ಬೇರಿನ ಮೈಭಾಗ ಒಂದಿಷ್ಟು ಮೇಲೆ ತೋರಿತ್ತು. ಆ ಬೇರಿಗೆ ಸಂತ ಕೇಳಿದ, "ನಿನ್ನ ಮೇಲಿರುವವರು ಏನೆಂದರು ಕೇಳಿಸಿಕೊಂಡೆಯಾ?" "ಹೌದು ಕೇಳಿಸಿಕೊಂಡೆ" ಎಂದಿತಾ ಬೇರು.

"ಈ ಭವ್ಯ ಮರವನ್ನೆಲ್ಲ ಕಷ್ಟ ಪಟ್ಟು ಬೆಳೆಸಿ ಹೊತ್ತುಕೊಂಡು ನಿಂತವ ನೀನು. ಇದರ ಅರಿವಿಲ್ಲದೆ ಅವರು ಏನೇನೋ ಅನ್ನುತ್ತಿರುವರಲ್ಲ ! ಅದನ್ನೆಲ್ಲ ಕೇಳಿಸಿಕೊಂಡು ನೀನೇಕೆ ಸುಮ್ಮನಿರುವೆ?" ಎಂದನು ಸಂತ.

"ಸಂತನೇ, ಅವರ ಸ್ವಭಾವವೇ ಬೇರೆ, ನಮ್ಮ ಸ್ವಭಾವವೇ ಬೇರೆ, ಮರೆಯುವುದು, ಮಲೆಯುವುದು ಅವರ ಸ್ವಭಾವ. ಅಳಿಯುವುದು, ಸುಮ್ಮನಿರುವುದು ನಮ್ಮ ಸ್ವಭಾವ!"

"ಸಂತನೇ ಅವು ಅಜ್ಞಾನದಿಂದ ಅಭಿಮಾನಿಸುತ್ತಲಿವೆ. ತಾನು "ಜ್ಞಾನಿ" ಎಂದು ಹೇಳಿಕೊಳ್ಳುವ ಮಾನವನು ಅಭಿಮಾನಿಸುವನಲ್ಲ ಏಕೆ? ನಮ್ಮ ಹೂವು ಗಳನ್ನು ಧರಿಸಿ ತಾವೇ ಸುಂದರರು ಎಂದುಕೊಳ್ಳುವರು.


ನಮ್ಮ ಹಣ್ಣು ಗಳನ್ನು ಸಂಗ್ರಹಿಸಿ ತಾವೇ ಸಿರಿವಂತರು ಎಂದು ಕೊಳ್ಳುವರು. ಪೂಜೆ-ಪುನಸ್ಕಾರ ಗಳಿಗೆ ನಮ್ಮನ್ನೇ ಬಳಸಿ ಬಂದ ಪುಣ್ಯವೆಲ್ಲ ತಮ್ಮದೇ ಎನ್ನುವರಲ್ಲ!" ಎಂದು ಬೇರು ಹಿತ ನುಡಿದಾಗ ನಾಡ-ನೆಲೆಗಾರ ಸಂತ ಚಿಂತನೆಗೆ ತೊಡಗಿದ.


**ಆಧಾರ : ಶ್ರೀ ಸಿದ್ಧೇಶ್ವರ ಸ್ವಾಮಿಗಳ ಪ್ರವಚನಗಳಿಂದ ಆಯ್ದ ಕಥೆ.**

ಚಿತ್ರಕಥೆ

# ಶ್ರೀವಾಮನಾವತಾರ

ಕಥೆ : ತೆಲುಗು ಮೂಲ : ಡಾ॥ ಎ. ಸಂಧ್ಯಾ
ಅನುವಾದ : ಶ್ರೀಮತಿ
ಚಿತ್ರಗಳು : ಕೆ.ತುಲಸೀ ಪ್ರಸಾದ್





14 ಬಲಿಚಕ್ರವರ್ತಿ ಯಾಗವನ್ನು ಮಾಡಿದುದದನ್ನು ಕಂಡ ವಾಮನನು. ಇಂದ್ರ ಪದವಿಯನ್ನು ಧಕ್ಕಿಸಿಕೊಂಡ ಚಕ್ರವರ್ತಿಯ ಬಳಿಗೆ ಸಾರಿದ್ದಾನೆ.ಬಲಿಚಕ್ರವರ್ತಿ ವಾಮನನ್ನು ಉತ್ತಮವಾದ ಆಸನದಲ್ಲಿ ಕುಳ್ಳಿರಿಸಿ, ಪೂಜಿಸಿ ವಟುವೇ!
ನಿನಗೇನು ಬೇಕು ಕೋರಿಕೋ 15
ಚಕ್ರವರ್ತಿ ನಾನು ಬ್ರಹ್ಮಚಾರಿ! ನಾನು ವಾಸಿಸಲು ಕೇವಲ ನನಗೆ ಮೂರು ಹೆಜ್ಜೆಯ ಭೂಮಿಯನ್ನು ಕೊಡು ಸಾಕು ಎಂದಿದ್ದಾನೆ. 16
ಶುಕ್ರಾಚಾರ್ಯರು ಚಕ್ರವರ್ತಿ! ಬಂದಿರುವ ಬಾಲಕನು ಸಾಮಾನ್ಯನಲ್ಲ! ಜಾಗ್ರತೆಯಾಗಿರು! 17
ಹಾಗೆಯೇ ಕೊಡುತ್ತೇನೆಂದು ಚಕ್ರವರ್ತಿಯು ಜಲ ಪಾತ್ರೆಯನ್ನು ತೆಗೆದುಕೊಂಡನು. ಆದರೆ ಗುರುವಾದ ಶುಕ್ರಾಚಾರ್ಯರು ಇದನ್ನು ಗಮನಿಸಿ ಜಲ ಕಮಂಡಲವನ್ನು ಪ್ರವೇಶಿಸಿ ಜಲ ಬರುವ ದ್ವಾರ ವನ್ನು ಮುಚ್ಚಿ ಬಿಟ್ಟಿದ್ದಾರೆ. 18
ಆದರೆ ವಾಮನನು ಬಂದು ದರ್ಭೆಯಿಂದ ಅದನ್ನು ತಿವಿದು ನೀರು ಬರುವ ಮಾರ್ಗವನ್ನು ಬೇಧಿಸಿದ್ದಾನೆ. 19
ಬ್ರಹ್ಮಚಾರಿಯೇ! ಪರಿಗ್ರಹಿಸು! ನಿನ್ನ ಮೂರು ಹೆಜ್ಜೆಯ ಜಾಗವನ್ನು ಎಂದಿದ್ದಾನೆ ಬಲಿಚಕ್ರವರ್ತಿ 20
ಆಗ ವಾಮನನು - ಒಂದು ಪಾದವನ್ನು ಭೂಮಿಯ ಮೇಲೆ ಎರಡನೇಯ ಪಾದ ವನ್ನು ಸ್ವರ್ಗದ ಮೇಲೆ ಇಟ್ಟು 21
ಚಕ್ರವರ್ತಿ! ಮೂರನೇ ಯದನ್ನು ಎಲ್ಲಿಡಲ್ಲಿ? ಎಂದು ಕೇಳಲು, 22
ಬಲಿ ಚಕ್ರವರ್ತಿ - ಬಂದವನು ಶ್ರೀಮನ್‌ನಾರಾಯಣನೆಂದು ಗುರುತಿಸಿ 23
24 ಸ್ವಾಮಿ! ಮೂರ ನೇಯ ಪಾದವನ್ನು ನನ್ನ ಶಿರದ ಮೇಲಿಡು ಎಂದು ಹೇಳಿ ದ್ದಾನೆ.
25 ಆಗ ಆತನ ತಲೆ ಮೇಲೆ ತನ್ನ ಮೂರನೇ ಪಾದವಿರಿಸಿ ಭಗವಂತನು ಚಕ್ರವರ್ತಿಯನ್ನು ಪಾತಾಳಕ್ಕೆ ತುಳಿದಿದ್ದಾನೆ. ಆತನನ್ನು ಧನ್ಯಜೀವಿ ಯನ್ನಾಗಿ ಮಾಡಿದ್ದಾನೆ.
ಇದನ್ನು ಗಮನಿಸಿದ ಸಮಸ್ತ ಲೋಕ ವಾಸಿಗಳು ವಾಮನನನ್ನು ವಿವಿಧ ಸ್ತೋತ್ರಗಳಿಂದ ಸ್ತುತಿಸಿ ದ್ದಾರೆ. 26
ಸಮಾಪ್ತಿ

# ಕ್ವಿಜ್

## ರಸಪ್ರಶ್ನೆಗಳು

ಅ) ಮಹೇಶ್ವರ ಹಾಗೂ ಗೌರಿದೇವಿಯ ಪುತ್ರ ಯಾರು?
1. ಭೀಮ  2. ನಕುಲ
3. ನಂದಿ  4.ಗಣಪತಿ

ಆ) ಗಣೇಶ ಚತುರ್ಥಿ ಯಾವ ಮಾಸದಲ್ಲಿ ಬರುತ್ತದೆ?
1. ಶ್ರಾವಣ  2. ಭಾದ್ರಪದ
3. ಅಶ್ವೀಜ  4. ಕಾರ್ತೀಕ

ಇ) ಗೌರಿ ದೇವಿಯ ಮತ್ತೊಂದು ಹೆಸರು ಯಾವುದು?
1. ಗಿರಿಜೆ  2. ಸರಸ್ವತಿ
3. ಲಕ್ಷ್ಮೀ  4. ಭಾರತಿ

ಈ) ಗುರುಡನ ಪತ್ನಿಯ ಹೆಸರೇನು?
1. ವಾರುಣಿ  2. ಸೌಪರ್ಣಿ
3. ವಸುಧ  4. ಅದಿತಿ


ಉ) ಶೇಷದೇವನ ಪತ್ನಿಯಾರು?
1. ಭಾರತಿ  2. ವಾರುಣಿ
3.ವೈದೇಹಿ  4. ಹಿಮವತಿ

ಊ) ಶ್ರೀ ಕೃಷ್ಣನ ತಂಗಿ ಯಾರು?
1. ಸುಭದ್ರೆ  2. ಕಾಳಿ
3. ದುರ್ಗೆ  4. ಜಾಂಬವತಿ

ಋ) ಬಲರಾಮನ ಮಗ ಯಾರು ?
1.ಪ್ರದ್ಯುಮ್ನ  2.ಸಾಂಬ
3. ಅರ್ಜುನ  4. ವರುಣ

ಉತ್ತರಗಳು: ಅ) 4 ಆ) 2 ಇ) 1 ಈ) 2 ಉ) 2 ಊ) 1 ಋ) 2

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



ಪಕ್ಕದಲ್ಲಿರುವ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...

## ನಿಮಗಿದು ಗೊತ್ತಾ ಮಕ್ಕಳೇ ?

1.ರಾಮಾಯಣವನ್ನು ವಾಲ್ಮೀಕಿಗೆ ಉಪದೇಶಿಸಿದ ಮುನಿ ಯಾರು?
2.ರಾಮಕಥೆಯನ್ನು ಕೇಳಿ ವಾಲ್ಮೀಕಿ ಮಧ್ಯಾಹ್ನ ಸ್ನಾನಕ್ಕಾಗಿ ಹೋದ ನದಿ ಹೆಸರೇನು?
3.ಶಿವಧನಸ್ಸನ್ನು ತಯಾರಿಸಿದವರು ಯಾರು?
4.ಭರತನು ರಾಮನ ಪಾದುಕೆಗಳನ್ನು ಇರಿಸಿದ ಹಳ್ಳಿಯ ಹೆಸರೇನು?
5. ಸೀತೆ ರಾಮನನ್ನು ಕೇಳಿದ ಮಾಯಾಮೃಗದ ಹೆಸರೇನು?
6. ಸಮುದ್ರಲಂಘನೆಯಲ್ಲಿ ಹನುಮಂತನು ಏರಿದ ಪರ್ವತದ ಹೆಸರೇನು?
7. ಹನುಮ ಉಲ್ಲಂಘಿಸಿದ ಸಮುದ್ರದ ದೂರವೆಷ್ಟು ?

1. ನಾರದರು
2. ತಮಸ
3. ವಿಶ್ವಕರ್ಮ
4.ನಂದಿಗಾಮ
5. ಜಿಂಕೆ
6. ಮಹೇಂದ್ರಗಿರಿ
7.ನೂರುಯೋಜನಗಳು

## ಮಕ್ಕಳೇ ಇದನ್ನು ಹೊಂದಿಸಿ ಬರೆಯಿರಿ :

1. ಬಿಂದು ಸರೋವರ  ಅ) ಟಿಬೆಟ್
2. ನಾರಾಯಣ ಸರೋವರ  ಆ) ರಾಜಸ್ಥಾನ್
3. ಮಾನಸ ಸರೋವರ  ಇ) ಕರ್ನಾಟಕ
4.ಪುಷ್ಕರ ಸರೋವರ  ಈ) ಒಡಿಷಾ
5. ಪಂಪಾ ಸರೋವರ  ಉ) ಗುಜರಾತ್

ಉತ್ತರಗಳು : 1) ಈ 2) ಉ 3) ಅ 4) ಆ 5) ಇ


Printed by Sri P. Ramaraju, M.A., Special Officer (Press & Publications), T.T.D. Press, Tirupati and Published by Dr. K. Radharamana, M.A., M.Phil., Ph.D. on behalf of Tirumala Tirupati Devasthanams and Published at Tirupati - 517 507. Editor : Dr. V. G. Chokkalingam, M.A., Ph.D.

SAPTHAGIRI (KANNADA) iLLUSTRATED MONTHLY
Published by Tirumala Tirupati Devasthanams
Printing on 25-08-2021

